# ಕರ್ಮವೀರ

ಹುಬ್ಬಳ್ಳಿ ತಾ. ——

ಸಂಪುಟ ೨೦ ] [ ಸಂಚಿಕೆ

ಜನಪ್ರಿಯ ಸಚಿತ್ರ ವಾರಪತ್ರಿಕೆ

ಸಂಪಾದಕರು:
ಹ. ರಾ. ಪುರೋಹಿತ ]

[ ಸಂಸ್ಥಾಪಕರು:
ರಂ. ರಾ. ದಿವಾಕರ

## - ಬಲ್ಲವರ ನುಡಿಗಳು -

ಆಧ್ಯಾತ್ಮಿಕ ಸುಖಕ್ಕೂ ಇಂದ್ರಿಯ ಸುಖಕ್ಕೂ ಭೇದವಿಷ್ಟೆ: ಇಂದ್ರಿಯ ಸುಖಗಳು ಲಭಿಸುವ ವರೆಗೆ ಅವುಗಳ ಬಯಕೆ ತೀವ್ರವಾಗಿದ್ದರೆ, ಅವು ಲಭಿಸಿದ ನಂತರ ಜುಗುಪ್ಸೆಯನ್ನುಂಟುಮಾಡುತ್ತವೆ. ಆದರೆ ಆಧ್ಯಾತ್ಮಿಕ ಆನಂದಗಳು ತದ್ವಿಪರೀತವಾಗಿವೆ. ಅವು ಲಭಿಸುವ ವರೆಗೆ ಅವುಗಳಿಗಾಗಿ ನಾವು ಅಷ್ಟೊಂದು ಆತುರಪಡುವದಿಲ್ಲ; ಅವು ಒಮ್ಮೆ ದೊರೆತವೆಂದರೆ ಮತ್ತೂ ಮತ್ತೂ ಅವುಗಳ ಬಯಕೆಯುಂಟಾಗುತ್ತದೆ.

—ಸೈಂಟ್ ಗ್ರಿಗರಿ

★

ತುಪ್ಪಳ ಹಾಸಿಗೆಯಂತೆ ಮನುಷ್ಯನ ಹೃದಯವನ್ನೂ ಆಗಾಗ್ಗೆ, ಕೆಲವೊಮ್ಮೆ ಭರದಿಂದ ಕೆದರಬೇಕಾಗುತ್ತದೆ. ಇಲ್ಲದಿದ್ದರೆ ಅದು ಗಟ್ಟಿಯಾಗಿ ವಿರಮಿಸಲು ಅಯೋಗ್ಯವಾಗುತ್ತದೆ.

—ಮೇರಿ ಬೇಕರ ಎಡಿ



### ಬೌದ್ಧ ಗಯೆಯಲ್ಲಿ ಬುದ್ಧವಿಹಾರ

ಬುದ್ಧನಿಗೆ ಜ್ಞಾನೋದಯವಾದ ಸ್ಥಳವಾದ ಬೌದ್ಧಗಯೆಯಲ್ಲಿರುವ ಈ ಒಂಭತ್ತು ಅಂತಸ್ತುಗಳ ವಿಹಾರ ೧೬೦ ಅಡಿ ಎತ್ತರವಾಗಿದ್ದು ಸುತ್ತುಮುತ್ತ ಅನೇಕ ಮೈಲುಗಳ ವರೆಗೂ ಕಾಣಿಸುತ್ತದೆ. ಒಳಗೆ ಬುದ್ಧನ ಉನ್ನತ ವಿಗ್ರಹವಿದೆ.

## ರಾಷ್ಟ್ರಭಾಷೆಯ ನಾಮರೂಪ (ವಿನೋಬಾ)

— ಪುಟ ೫

## ನಮ್ಮಗಳ ಲಕ್ಷ ತಿರುಕರು

— ಪುಟ ೬

KARMAVEER Kannada Illustrated Weekly HUBLI

ಚಿತ್ರ ಕಥೆ

# "ಗಿನ್ನಿ"

ಮೂಲ:
ರವೀಂದ್ರನಾಥ ಠಾಕುರ

ಅನುವಾದ:
ಪಾ. ವೆಂ. ಆ.

ಪ್ರವೃತ್ತಿ ವರ್ಗದಿಂದ ಎರಡು ಮೂರು ವರ್ಗದ ಕೆಳಗೆ ಶಿವನಾಥ ಎಂಬವರು ನಮ್ಮ ಪಂಡಿತರಾಗಿದ್ದರು. ಅವರ ಹುರಿಮೀಸೆ, ಒತ್ತಾಗಿ ಕತ್ತರಿಸಿದ ಕುಳ್ಳುಕುಳ್ಳನ ತಲೆಗೂದಲು. ಅವರನ್ನು ನೋಡಿದರೆ ಸಾಕು, ಹುಡುಗರ ಅಂತರಾತ್ಮ ಬಾಡಿ ಕಮರಿಹೋಗುತಿತ್ತು.

ಪ್ರಾಣಿಗಳಲ್ಲಿ ನೋಡಿದರೆ ಕೊಂಡಿಯುಳ್ಳವುಗಳಿಗೆ ಹಲ್ಲಿರುವದಿಲ್ಲ. ನಮ್ಮ ಪಂಡಿತ ಮಹಾಶಯರಲ್ಲಿ ಮಾತ್ರ ಎರಡೂ ಏಕತ್ರ ಸೇರಿದ್ದವು. ಒಂದು ಕಡೆಯಿಂದ ಹುಲ್ಲುಗಾವಲ ಮೇಲೆ ಕಲ್ಲುಕೈಬಂದಂತೆ ಗುದ್ದು, ಪೆಟ್ಟು ಬೀಳುತ್ತಿದ್ದರೆ ಇನ್ನೊಂದು ಕಡೆಯಿಂದ ತೀಕ್ಷ್ಣ ಭರ್ತ್ಸನೆಯ ಜ್ವಾಲೆಯಿಂದ ಪ್ರಾಣವೇ ಹಾರಿಹೋಗುವಂತಾಗುತಿತ್ತು.

ಅವರು ಯಾವಾಗಲೂ ಆಕ್ಷೇಪಿಸುತಿದ್ದರು: ಹಿಂದಿನ ಕಾಲದಲ್ಲಿದ್ದಂತೆ ಇಂದು ಗುರು ಶಿಷ್ಯರ ಸಂಬಂಧ ಉಳಿದಿಲ್ಲ; ಶಿಷ್ಯರು ಗುರುಗಳನ್ನು ಈಗ ದೇವರನ್ನೆಂಬಂತೆ ಭಕ್ತಿಯಿಂದ ಕಾಣುವದಿಲ್ಲ. ಹೀಗೆಂದು ತಮ್ಮ ಉಪೇಕ್ಷಿತವಾದ ದೇವ ಮಹಿಮೆಯನ್ನು ಹುಡುಗರ ತಲೆಯ ಮೇಲೆ ರಭಸದಿಂದ ಹೊರಿಸುತಿದ್ದರು; ಅಲ್ಲದೆ ನಡು ನಡುವೆ ಹುಂಕಾರ ಬೇರೆ ಏಳುತ್ತಿತ್ತು. ಅದರಲ್ಲಿ ಮಿಶ್ರಿತವಾಗಿರುವ ಬೇರೆ ಹಲವು ಮಾತುಗಳನ್ನು ಕೇಳಿದರೆ ಅವು ದೇವತೆಗಳ ವಜ್ರನಾದದ ಇನ್ನೊಂದು ರೂಪವೆಂದು ಯಾರೂ ಭ್ರಮಿಸಲ ಸಾಧ್ಯವಿದ್ದಿಲ್ಲ. ತಂದೆತಾಯಿಗಳ ಹೆಸರು ತೆಗೆದು ಬೈಯುವ ಬೈಗಳು ವಜ್ರನಾದದಂತೆ ಗುಡುಗಿದರೂ ಅದರ ಕ್ಷುಲ್ಲಕ ಬಂಗಾಲೀ ರೂಪ ಎದ್ದು ಕಾಣುತಿತ್ತು.

ಅದೇನೇ ಇರಲಿ, ನಮ್ಮ ಶಾಲೆಯ ಈ ಮೂರನೇ ವರ್ಗದ ಎರಡನೇ ವಿಭಾಗದ ದೇವತೆಯನ್ನು ಇಂದ್ರ ಚಂದ್ರ ವರುಣ ಅಥವಾ ಕಾರ್ತಿಕೇಯನೆಂದು ಯಾರೂ ತಿಳಿದುಕೊಳ್ಳಲಿಕೆಯಿದ್ದಿಲ್ಲ; ಒಬ್ಬನೇ ಒಬ್ಬ ದೇವತೆಯೊಡನೆ ಅವರನ್ನು ಹೋಲಿಸಬಹುದಾಗಿತ್ತು—ಅವನ ಹೆಸರೇ ಯಮ; ಆ ದೇವನ ಸನ್ನಿಧಿಗೆ ಈ ದೇವ ಬೇಗನೆ ಹೋಗುವಂತಾಗಲಿ ಎಂಬುದಾಗಿ ನಾವು ಅಂತರಂಗದಲ್ಲೆ ಪ್ರಾರ್ಥಿಸುತಿದ್ದೆವು; ಈ ಮಾತನ್ನು ಇಷ್ಟು ದಿನಗಳ ನಂತರ ಒಪ್ಪಿಕೊಳ್ಳಲಡ್ಡಿಯಿಲ್ಲ, ಭಯವೂ ಇಲ್ಲ.

ಆದರೆ ಒಂದು ಸಂಗತಿ ಚನ್ನಾಗಿ ಮನವಟ್ಟಾಗಿತ್ತು; ಮನುಷ್ಯರೂಪಿ ದೇವತೆಗಳಂಥ ಕಾಟ ಬೇರೊಂದಿಲ್ಲ. ಸುರಲೋಕದದೇವತೆಗಳು ಪೀಡಿಸುವದಿಲ್ಲ. ಗಿಡದಿಂದ ಒಂದು ಹೂವು ಕೊಯ್ದು ಅರ್ಪಿಸಿದರೆ ಸಂತುಷ್ಟರಾಗುವರು, ಇಲ್ಲದಿದ್ದರೂ ಅವರ ಆಕ್ಷೇಪವಿಲ್ಲ. ನಮ್ಮ ನರದೇವತೆಗಳಿಗೋ ಬಹಳ ಬೇಕು; ಮತ್ತೆ ನಮ್ಮಿಂದ ಲೇಶ ಮಾತ್ರ ತಪ್ಪಾದರೆ ಸಾಕು, ಕಂಗಣ್ಣಿನಿಂದ ನಮ್ಮ ಮೇಲೇರಿ ಬರುವರು. ಆಗ ಅವರನ್ನು ನೋಡಿದರೆ ಕಿಂಚಿತ್ತಾದರೂ ದೇವತೆಗಳಂತೆ ಕಾಣುವದಿಲ್ಲ.

ಬಾಲಕರನ್ನು ಪೀಡಿಸಲು ನಮ್ಮ ಶಿವನಾಥ ಪಂಡಿತರಲ್ಲಿ ಒಂದು ಅಸ್ತ್ರವಿತ್ತು. ಅದು ಕೇಳುವವರಿಗೆ ಬಹಳ ಸಾಮಾನ್ಯವೆನಿಸಿದರೂ ಸಂಬಂಧಪಟ್ಟವರಿಗೆ ಅತಿಶಯ ನಿದಾರುಣ: ಅವರು ಹುಡುಗರಿಗೆ ಹೊಸ ನಾಮಕರಣ ಮಾಡುತ್ತಿದ್ದರು. ಹೆಸರೆಂಬ ವಸ್ತು ಬರಿ ಶಬ್ದ ಮಾತ್ರವೇನೋ ನಿಜ. ಆದರೆ ಸಾಮಾನ್ಯವಾಗಿ ಜನರಿಗೆ ತಮಗಿಂತಲೂ ತಮ್ಮ ಹೆಸರ ಮೇಲೆಯೆ ಪ್ರೀತಿ ಹೆಚ್ಚು; ತಮ್ಮ ಹೆಸರು ಪ್ರಸಿದ್ಧವಾಗಬೇಕೆಂದು ಜನರು ಏನೇನು ಕಷ್ಟಗಳನ್ನು ಸಹಿಸುವದಿಲ್ಲ? ಹೆಸರನ್ನು ಉಳಿಸುವ ಸಲುವಾಗಿ ತಾವೇ ಸಾಯಲು ಕೂಡ ಅವರು ಹಿಂದೆ ಮುಂದೆ ನೋಡುವದಿಲ್ಲ.

ಹೀಗೆ ನಾಮಪ್ರಿಯ ಮಾನವನ ನಾಮವನ್ನೇ ವಿಕೃತಗೊಳಿಸಿಬಿಟ್ಟರೆ ಅವನ ಪ್ರಾಣಕ್ಕಿಂತಲೂ ಪ್ರಿಯತರವಾದ ಸ್ಥಾನದ ಮೇಲೆ ಪೆಟ್ಟು ಬೀಳುತ್ತದೆ. ನೋಡಿರಿ, ಭೂತಕಾಂತನೆಂಬ ಹೆಸರುಳ್ಳವನನ್ನು ನಲಿನೀಕಾಂತ ಎಂದು ಕರೆದರೆ ಅವನಿಗೆ ಎಷ್ಟು ಅಸಹ್ಯವೆನಿಸಬೇಡ!

ಇದರಿಂದ, ಮನುಷ್ಯನು ವಸ್ತುವಿಗಿಂತ ಅವಸ್ತುವೆ ಹೆಚ್ಚು ಬೆಲೆಬಾಳುವದೆಂದು ತಿಳಿದುಕೊಳ್ಳುತ್ತಾನೆಂಬ ಸಿದ್ಧಾಂತಕ್ಕೆ ಬರಬಹುದು. ನಾಣ್ಯಕ್ಕಿಂತ ಮಾತಿಗೆ, ಪ್ರಾಣಕ್ಕಿಂತ ಮಾನಕ್ಕೆ, ಮತ್ತು ತನಗಿಂತ ತನ್ನ ಹೆಸರಿಗೆ ಮಹತ್ವ ಕೊಡುತ್ತಾನೆ ಮನುಷ್ಯ.

ಮಾನವಸ್ವಭಾವದ ಈ ಅಂತರ್ನಿಹಿತ ನಿಗೂಢ ನಿಯಮಕ್ಕನುಸಾರವಾಗಿಯೆ, ಪಂಡಿತ ಮಹಾಶಯರು ಶಶಿ ಶೇಖರನಿಗೆ "ಹೋತ" ಎಂದು ಹೆಸರಿಟ್ಟಾಗ ಅವನು ಅತ್ಯಂತ ಕಾತರನಾಗಿಬಿಟ್ಟನು. ಅದರಲ್ಲಿಯೂ ಅವನ ಮುಖ [illegible]ವನ್ನು ವಿಶೇಷ ಗಮನಿಸಿಯೆ ಆ ಹೆಸರನಿಟ್ಟ[illegible]ರಿಂದ ಅವನ ಹೃದಯದ ವ್ಯಥೆ ಇಮ್ಮಡಿಯಾಯಿತು. ಆದರೆ ಏಕಾಂತ ಶಾಂತಭಾವದಿಂದ ಅದನ್ನೆಲ್ಲ ನುಂಗಿಕೊಂಡು ಕುಳ್ಳಿರಬೇಕಾಯಿತು.

ಆಶುವಿನ ಹೆಸರು "ಗಿನ್ನಿ" ಯೆಂದು ಮಾರ್ಪಡಿಸಲಾಗಿತ್ತು. ಆದರೆ ಅದರೊಡನೆ ಒಂದು ಇತಿಹಾಸವೇ ಹೆಣೆದಿದೆ.

ಆಶು ಕ್ಲಾಸಿನಲ್ಲಿ ಅತ್ಯಂತ ನಿರುಪದ್ರವಿಯಾದ ಸಜ್ಜನ; ಯಾರೊಡನೆಯೂ ಮಾತಾಡ; ಬಹಳ ಲಜ್ಜಾಶೀಲ; ವಯಸ್ಸಿನಲ್ಲಿಯೂ ಎಲ್ಲರಿಗಿಂತ ಕಿರಿಯನೆಂದು ತೋರುತ್ತದೆ; ಎಲ್ಲ ಮಾತಿಗೂ ಕೇವಲ ಮೆಲುನಗೆಯೆ ಉತ್ತರ; ಚೆನ್ನಾಗಿ ಓದುವ; ಶಾಲೆಯ ಅನೇಕ ಹುಡುಗರು ಅವನೊಡನೆ ಗೆಳೆತನ ಬೆಳೆಸಲು ಉತ್ಸುಕರಾಗಿದ್ದರು, ಆದರೆ ಅವನು ಯಾರೊಡನೆಯೂ ಆಡಲು ಬಾರ. ಸಾಲೆ ಬಿಟ್ಟ ಮೇಲೆ ಕ್ಷಣ ಮಾತ್ರವೂ ತಡಮಾಡದೆ ಮನೆಗೆ ಹೊರಟು ಹೋಗುವ.

ಎಲೆಯಲ್ಲಿ ಒಂದಿಷ್ಟು ಅನ್ನವನ್ನು ಕಟ್ಟಿಕೊಂಡು ಬಂಡಿಯಲ್ಲಿ ನೀರು ತುಂಬಿಕೊಂಡು ಮಧ್ಯಾಹ್ನದ ಹೊತ್ತಿಗೆ ಕೆಲಸದವಳು ಮನೆಯಿಂದ ಶಾಲೆಗೆ ಬರುತ್ತಿದ್ದಳು. ಆಶು ಅದರಿಂದ ತುಂಬ ಅಪ್ರತಿಭನಾಗುತಿದ್ದ. ಹೇಗಾದರೂ ಒಮ್ಮೆ ಈ ದಾಸಿ ಮನೆಗೆ ಮರಳಿ ಹೋದರೆ ಸಾಕೆನಿಸುತಿತ್ತು ಅವನಿಗೆ. ಶಾಲೆಯ ಓದು ಬರಹಗಳಲ್ಲದೆ ಬೇರಾವ ಮಾತುಗಳನ್ನು ತನ್ನ ಸಹಪಾಠಿಗಳೊಡನೆ ಮಾತಾಡಲು ಅವನು ತುಂಬ ಹಿಂಜರಿಯುತ್ತಿದ್ದ. ತನಗೂ ಮನೆಯುಂಟು, ತಾನೂ ತಾಯಿ-ತಂದೆಗಳ ಮಗ, ತನಗೂ ಅಣ್ಣ ತಮ್ಮ ಅಕ್ಕ ತಂಗಿಯರಿದ್ದಾರೆ ಎಂಬೀ ಮಾತುಗಳು ಬಹಳ ಗುಟ್ಟಿನವೋ ಎಂಬಂತೆ, ಅವನು ತನ್ನ ಒಡನಾಡಿಗಳೊಡನೆ ಎಂದೆಂದೂ ಪ್ರಸ್ತಾವಿಸತಕ್ಕದ್ದಲ್ಲ, ಅದು ತನ್ನೊಬ್ಬನ ಸ್ವಂತದ ವಿಷಯ, ಎಂಬಂತೆ ಆತನ ನಡೆವಳಿ.

ಓದು ಬರಹದ ವಿಚಾರದಲ್ಲಿ ಅವನಲ್ಲಿ ಬೇರೆ ಕೊರತೆಯೇನೂ ಇದ್ದಿಲ್ಲ; ಒಮ್ಮೊಮ್ಮೆ ಸಾಲೆಗೆ ಬರುವಾಗ ಸ್ವಲ್ಪ ತಡವಾಗುತಿತ್ತು, ಅಷ್ಟೆ. ಅಂಥ ಪ್ರಸಂಗಗಳಲ್ಲಿ ಶಿವನಾಥ ಪಂಡಿತರು ತಡವಾದ ಕಾರಣವನ್ನು ಕೇಳಿದರೆ ಸರಿಯಾದ ಉತ್ತರವನ್ನು ಕೊಡಲು ಅವನಿಂದಾಗುತಿರಲಿಲ್ಲ. ಇದಕ್ಕಾಗಿ ಅವನಿಗೆ ಕೊನೆ ಮೊದಲಿಲ್ಲದ ಅಪಮಾನಗಳಾಗುತಿದ್ದವು. ಪಂಡಿತರು ಅವನ ಕತ್ತಿಗೆ ಕೈಕೊಟ್ಟು ನೂಗಿಸಿ, ಬಾಗಿಲ ಬಳಿ ಕುರ್ಚಿ ಕೂಡಿಸುವ ಶಿಕ್ಷೆ ಕೊಡುತಿದ್ದರು. ನಾಲ್ಕೂ ವರ್ಗಗಳ ಹುಡುಗರು ಅವನನ್ನು! ಈ ಲಜ್ಜಾಕಾತರ ಹತಭಾಗ್ಯ ಸ್ಥಿತಿಯಲ್ಲಿ ಕಾಣಬಹುದಾಗಿತ್ತು.

ಒಂದು ದಿನ ಗ್ರಹಣಕ್ಕಾಗಿ ಶಾಲೆಗೆ ರಜೆ ಇತ್ತು. ಅದರ ಮಾರನೆಯ ದಿನ ಪಂಡಿತ ಮಹಾಶಯರು ವರ್ಗವನ್ನು ಹೊಕ್ಕು ತಮ್ಮ ಕುರ್ಚಿಯಲ್ಲಿ ಕುಳಿತು ಬಾಗಿಲ ಕಡೆಗೆ ನೋಡಿದಾಗ ಪಾಟಿ ಪುಸ್ತಕಗಳನ್ನು ಒಂದು ಮಸುಕಾದ ಮಸಿಕಲೆಗಳಿಂದ ತುಂಬಿದ ಅರಿವೆಯಲ್ಲಿ ಸುತ್ತಿ ಕಂಕುಳಲ್ಲಿಟ್ಟುಕೊಂಡು ಎಂದಿಗಿಂತಲೂ ಸಂಕೋಚದಿಂದ ಆಶು ಕ್ಲಾಸಿನೊಳಗೆ ಪ್ರವೇಶಿಸುತಿದ್ದ.

ಶಿವನಾಥ ಪಂಡಿತರು ಒಣ ನಗೆ ನಕ್ಕು ಹೇಳಿದರು, "ಓ ಹೋ ಹೋ, ಗಿನ್ನಿ ಬಂದ ನೋಡಿರಿ!"

ಪಂಡಿತರ ಪಾಠ ಮುಗಿದು ಹೊರ ಹೊರಡುವ ಮುನ್ನ ಅವರು ಎಲ್ಲ ಹುಡುಗರನ್ನೂ ಉದ್ದೇಶಿಸಿ ಹೇಳಿದರು, "ಕೇಳಿರಿ, ನೀವೆಲ್ಲ ಕೇಳಿರಿ"

ಭೂಮಿಯ ಗುರುತ್ವಾಕರ್ಷಣ ಶಕ್ತಿಯೆಲ್ಲವೂ ಸೇರಿ ಹುಡುಗರನ್ನು ಕೆಳಗೆ ಎಳೆದಂತಾಯಿತು. ಆದರೆ ಬಡ ಆಶು ಮಾತ್ರ ಎರಡು ಕಾಲುಗಳನ್ನೂ ಒಂದು ಲಂಗೋಟಿ ಕುಚ್ಚನ್ನೂ ಕೆಳಗೆ ಜೋಲು ಬಿಟ್ಟು ಇಡಿ ಕ್ಲಾಸಿನ ಕಣ್ಣೋಟಕ್ಕೆ ಕೇಂದ್ರಸ್ಥಾನವಾಗಿ ತನ್ನ ಬೆಂಚಿನ ಮೇಲೆ ಕುಳಿತಿದ್ದನು. ಆಶುವಿನ ಎಷ್ಟೋ ವರ್ಷಗಳ ಜೀವನದಲ್ಲಿ ಅನೇಕ ಗುರುತರ ದುಃಖಲಜ್ಜೆಗಳ ದಿನಗಳು ಬಂದಿರಬಹುದೆಂಬಲ್ಲಿ ಸಂದೇಹವಿಲ್ಲ; ಆದರೆ ಆ ದಿನದಲ್ಲಿ ಆ ಹುಡುಗನ ಹೃದಯದಲ್ಲಾಗುತಿದ್ದ ಕಸಿವಿಸಿಯೊಡನೆ ಹಿಂದಿನ ಇತಿಹಾಸದ ಯಾವ ದಿನವನ್ನೂ ಹೋಲಿಸಬರುವಂತಿರಲಿಲ್ಲ.

ಸಂಗತಿ ತೀರ ಕ್ಷುದ್ರವಾಗಿದ್ದು ಒಂದೆರಡು ಮಾತುಗಳಲ್ಲೆ ಅದನ್ನು ಹೇಳಿಬಿಡಬಹುದು.

ಆಶುವಿಗೆ ಒಬ್ಬಳು ಪುಟ್ಟ ತಂಗಿಯಿದ್ದಳು. ಅವಳಿಗೆ ಓರಗೆಯ ಗೆಳತಿಯರಾಗಲಿ ಅಕ್ಕ ತಂಗಿಯರಾಗಲಿ ಯಾರೂ ಇದ್ದಿಲ್ಲವಾಗಿ ಅವಳ ಎಲ್ಲ ಆಟನೋಟಗಳೂ ಕೇವಲ ಆಶು ಒಬ್ಬನ ಸಂಗಡಲೇ ನಡೆಯುತ್ತಿತ್ತು.

ಬೀದಿಗೆ ಹೊಂದಿಕೊಂಡು ಆಶುವಿನ ಮನೆಯ ಜಗಲಿ ಇತ್ತು. ಆದಿನ ಮಳೆಯೋ ಮಳೆ. ಅವರ ಮನೆಯ ಮುಂದಿನ ರಸ್ತೆಯಲ್ಲಿ ಕೈಯಲ್ಲಿ ಕಾಲ್ಮರಿ ಹಿಡಿದು ತಲೆಯ ಮೇಲೆ ಕೊಡೆ ಹಿಡಿದುಕೊಂಡು ಎಲ್ಲೊ ಮೂರು ನಾಲ್ಕು ಜನರು ರಸ್ತೆಯಲ್ಲಿ ಓಡಾಡುತಿದ್ದರು. ಅವರಿಗೆ ಅತ್ತಿತ್ತ ನೋಡುವ ಅವಕಾಶವೇ ಇದ್ದಿಲ್ಲ. ಆ ಮೋಡಗಳ ಮಬ್ಬಿನಲ್ಲಿ, ಎಡೆಬಿಡದೆ ಬೀಳುವ ಮಳೆಯ ಸದ್ದಿನಲ್ಲಿ ಇಡೀ ದಿನದ ರಜೆಯನ್ನು ಕಳೆಯಲು ಆಶು ಆ ಜಗಲಿಯಲ್ಲಿ ಕುಳಿತು ತಂಗಿಯೊಡನೆ ಆಟವಾಡುತಿದ್ದನು.

ಅಂದು ಅವರ ಗೊಂಬೆಯ ಮದುವೆ. ಅದರ ವ್ಯವಸ್ಥೆಯಲ್ಲಿ ಅತ್ಯಂತ ಗಂಭೀರಭಾವದಿಂದ ವ್ಯಸ್ತನಾಗಿದ್ದ ಆಶು ತಂಗಿಗೆ ಉಪದೇಶ ಮಾಡುತ್ತಲಿದ್ದ.

ಅಷ್ಟರಲ್ಲಿ ಒಂದು ಸಮಸ್ಯೆ ಎದ್ದಿತು: ಪುರೋಹಿತ ಬೇಕಲ್ಲ, ಯಾರು ಸಿಗುವರು? ಹುಡುಗಿ ಚಟ್ಟನೆ ನೆಗೆದು ಸ್ವಲ್ಪದೂರ ನಿಂತಿದ್ದ ಒಬ್ಬ ಮನುಷ್ಯನ ಹತ್ತಿರ ಹೋಗಿ ಕೇಳಿದಳು, "ಅಲ್ಲರೀ, ನೀವು ನಮ್ಮ ಪುರೋಹಿತರಾಗುವಿರಾ?"

ಆಶು ತಿರುಗಿ ನೋಡಿದ—ಶಿವನಾಥ ಪಂಡಿತರು ಒದ್ದೆಯಾದ ಕೊಡೆಯನ್ನು ಮಡಚಿ ಹಿಡಿದುಕೊಂಡು ಅರ್ಧಮರ್ಧ ಒದ್ದೆಯಾದ ಸ್ಥಿತಿಯಲ್ಲಿ ಜಗಲಿಯ ಮೇಲೆ ನಿಂತುಕೊಂಡಿದ್ದರು. ದಾರಿಯಲ್ಲಿ ಹೋಗುತಿದ್ದವರು ಮಳೆಯ ಹೊಡೆತ ತಾಳಲಾರದೆ ಅಲ್ಲಿ ಆಶ್ರಯ ಪಡೆದಿರಬೇಕೆಂದು ತೋರುತ್ತದೆ. ಹುಡುಗಿ ಅವರಿಗೆ ಪೌರೋಹಿತ್ಯವಹಿಸಿಕೊಡುವ ಮಾತು ಪ್ರಾರಂಭಿಸಿದ್ದಳು.

ಪಂಡಿತ ಮಹಾಶಯರನ್ನು ಕಂಡೊಡನೆ ಆಶು ಆಟವನ್ನೂ ತಂಗಿಯನ್ನೂ ಎಲ್ಲವನ್ನೂ ಬಿಟ್ಟು ನಿಟ್ಟೋಟದಿಂದ ಮನೆಯೊಳಗೆ ಪಲಾಯನ ಮಾಡಿ ಅಡಗಿಬಿಟ್ಟ. ಅವನ ರಜೆಯ ದಿನ ಸಂಪೂರ್ಣ ಹಾಳಾಗಿ ಹೋಯಿತು.

ಮರುದಿನ ಶಿವನಾಥ ಪಂಡಿತರು ಒಣ ಉಪಹಾಸದ ನಗೆಯಿಂದ ಈ ಎಲ್ಲ ಮಾತುಗಳನ್ನು ಪೂರ್ವಪೀಠಿಕೆಯಾಗಿ ಉಲ್ಲೇಖಿಸಿ ಹತ್ತು ಸಮಸ್ತರ ಸಮುಖದಲ್ಲಿ ಆಶುವಿಗೆ "ಗಿನ್ನಿ" (ಅಂದರೆ ಗೃಹಿಣಿ-ಮನೆಯಾಕೆ) ಎಂದು ನಾಮಕರಣ ಮಾಡಿದರು.

ಮೊದಮೊದಲು ಅವನು ಈ ಎಲ್ಲ ಮಾತುಗಳು ನಡೆಯುತಿದ್ದಾಗ ಮಿದುವಾಗಿ ನಕ್ಕು ನಾಲ್ಕು ಸುತ್ತಲಿಂದ ಏಳುತಿದ್ದ ಕೌತುಕದ ಹಾಸ್ಯದಲ್ಲಿ ತಾನೂ ದನಿಗೂಡಿಸಲು ಪ್ರಯತ್ನಿಸಿದನು. ಅಷ್ಟು ಹೊತ್ತಿಗೆ ಒಂದು ಗಂಟೆ ಹೊಡೆಯಿತು. ಉಳಿದ ಕ್ಲಾಸುಗಳೆಲ್ಲ ಬಿಡುವು ಪಡೆದವು. ಎಲೆಯ ಮಡಿಕೆಯಲ್ಲಿ ಅನ್ನವನ್ನು ಹಿಡಿದುಕೊಂಡು ಹೊಳೆಯುವ ಕಂಚಿನ ಗಿಂಡಿಯಲ್ಲಿ ನೀರು ತುಂಬಿಕೊಂಡ ದಾಸಿ ಬಾಗಿಲ ಬಳಿ ಕಾಣಿಸಿಕೊಂಡಳು.

ಅವಳನ್ನು ಕಂಡೊಡನೆ ಅವನ ನಗೆ ಇದ್ದಕ್ಕಿದ್ದಂತೆ ಮಾಯವಾಗಿ ಮುಖ ಕೆಂಪೇರಿತು. ವ್ಯಥೆಯಿಂದ ಹಣೆಯ ನರಗಳು ಉಬ್ಬಿದವು. ಒಳಗೊಳಗೇ ತುಂಬಿಬರುತಿದ್ದ ಕಣ್ಣೀರಿನ ಪ್ರವಾಹವನ್ನು ತಡೆಯುವದು ಇನ್ನು ಅವನಿಗೆ ಅಸಾಧ್ಯವಾಯಿತು.

ಶಿವನಾಥ ಪಂಡಿತರು ವಿಶ್ರಾಂತಿಗೃಹದಲ್ಲಿ ಚಹಾ ಕುಡಿದು ನಿಶ್ಚಿಂತ ಭಾವದಿಂದ ತಂಬಾಕು ಜಗಿಯುತಿದ್ದರು. ಇತ್ತ ಹುಡುಗರು ತಡೆಯಲಾರದ ಸಂತೋಷದಿಂದ ಆಶುವನ್ನು ಮುತ್ತಿ "ಗಿನ್ನಿ ಗಿನ್ನಿ" ಎಂದು ಕೂಗತೊಡಗಿದರು. ಆ ರಜೆಯ ದಿನದಲ್ಲಿ ತಾನು ತಂಗಿಯೊಡನೆ ಆಡಿದ್ದೇ ಬಾಳಿನಲ್ಲೆಲ್ಲ ಅತ್ಯಂತ ಘೋರವಾದ ಲಜ್ಜಾಸ್ಪದವಾದ ತನ್ನ ಅಪರಾಧವೆಂದು ಅವನಿಗೆ ತೋರತೊಡಗಿತು. ಲೋಕದ ಜನರು ಎಂದಾದರೂ ತನ್ನ ಆ ದಿನದ ನಡತೆಯನ್ನು ಮರೆಯಬಹುದೆಂದು ಅವನಿಗೆ ಸರ್ವಥಾ ವಿಶ್ವಾಸ ಬರಲಿಲ್ಲ.

# ಪೋರ್ತುಗಾಲಿನಲ್ಲಿ ಪ್ರಜಾಸತ್ತೆಯ ಪ್ರಹಸನ

## ಅಧ್ಯಕ್ಷನ ಅಸಹಾಯುತೆ—ಸಲಾಜಾರನ ಸರ್ವಾಧಿಕಾರಿತ್ವ-ವಿರೋಧಿ ಪಕ್ಷಕ್ಕೆ ದಿಗ್ಬಂಧನ—ಪತ್ರಿಕಾ ಸ್ವಾತಂತ್ರ್ಯದ ನಿರ್ನಾಮ—ಜನತೆಗೆ ಖಗ್ರಾಸ ದಾಸ್ಯಗ್ರಹಣ

**ಭಾರತದಲ್ಲಿ ಮೊಗಲರ ಕೊನೆಯ ಅರಸರು ಆಳುತ್ತಿದ್ದಾಗ ಪ್ರಥಮತಃ ಕಾಲಿಟ್ಟ ವಿದೇಶೀಯರೆಂದರೆ ಪೋರ್ತುಗೀಸರು. ಧರ್ಮಪ್ರಸಾರ ಮತ್ತು ವ್ಯಾಪಾರಗಳ ಉದ್ದೇಶವನ್ನಿಟ್ಟುಕೊಂಡು ಇಲ್ಲಿ ಸಾಮ್ರಾಜ್ಯ ಕಟ್ಟಲು ಪ್ರಯತ್ನಿಸಿದ ವಾಸ್ಕೋಡಗಾಮನ ಇತಿಹಾಸ ಸರ್ವವಿದಿತ. ಸ್ಪೇನಿನಂತೆ ಪೋರ್ತುಗಾಲಾದರೂ ಬಹಳ ಹಿಂದುಳಿದ ದೇಶ. ಸುತ್ತುಮುತ್ತಲಿನ ಸಾಮ್ರಾಜ್ಯಶಾಹೀ ರಾಷ್ಟ್ರಗಳು ಉಪನಿವೇಶಗಳಲ್ಲಿ ತರದಿದ್ದರೂ ಸ್ವದೇಶದಲ್ಲಾದರೂ ಪ್ರಜಾಸತ್ತೆಯನ್ನು ಆಚರಣೆಗೆ ತಂದಿರುವವು. ಆದರೆ ಪೋರ್ತುಗಾಲಿನ ಸಲಾಜಾರನು ಸ್ವದೇಶವನ್ನೇ ದಾಸ್ಯದಲ್ಲಿ ಮುಳುಗಿಸಿ ಸರ್ವಾಧಿಕಾರಿತ್ವ ನಡೆಸುತ್ತಿದ್ದಾನೆ. ಪೋರ್ತುಗೀಸರನ್ನು ಈ ದುರ್ದೆಶೆಯಿಂದ ಪಾರುಮಾಡುವುದು ಸಂ- ರಾ. ಸಂಘದ ಜಾಗತಿಕ ಶಾಂತಿ ಸ್ಥಾಪನಾ ಯೋಜನೆಯ ಒಂದು ಅಂಗವಾಗುವದಿಲ್ಲವೆ ?**

೧೨ ನೆಯ ಶತಕದಿಂದ ಪೋರ್ತುಗಾಲ ಒಂದು ಸ್ವತಂತ್ರರಾಜ್ಯವೆನಿಸಿ ಬಾಳಿಕೊಂಡು ಬಂದಿದೆ. ೧೯೧೦ ರ ವರೆಗೆ ಅಲ್ಲಿ ರಾಜಪ್ರಭುತ್ವವಿತ್ತು. ಅನಂತರ ಸಣ್ಣದೊಂದು ಕ್ರಾಂತಿನಡೆದು ಪ್ರಜಾರಾಜ್ಯವು ಸ್ಥಾಪಿತವಾಯಿತು. ೧೯೧೧ ರಲ್ಲಿ ಸಿದ್ಧವಾದ ರಾಜ್ಯಘಟನೆಯನ್ವಯ ೭ ವರ್ಷಗಳಿಗೊಮ್ಮೆ ಅಧ್ಯಕ್ಷನ ಆಯ್ಕೆಯಾಗಬೇಕು.

ಜನರಲ್ ಅಂಟೋನಿಯೋ ಆಸ್ಕರ್ ಫ್ರೇಗೋಸೋ ಕಾರ್ಮೋನೋ ಪ್ರಜಾರಾಜ್ಯದ ಅಧ್ಯಕ್ಷ. ಅವನು ಮೊದಲು ಆಯ್ಕೆ ಹೊಂದಿದ್ದು ೧೯೨೮ ರಲ್ಲಿ. ೧೯೪೯ರಲ್ಲಿ ಪುನಃ ಅವನೇ ಆಯ್ಕೆ ಹೊಂದಿದನು. ೨೦ ವರ್ಷ ಅವನದೇ ಅಧ್ಯಕ್ಷತೆ. ದೀರ್ಘಕಾಲ ಆಳಿದವರಲ್ಲಿ ಇವನನ್ನು ಮೀರಿಸಿದವನೆಂದರೆ ವೆನಿಜುಯೇಲದ ಅಧ್ಯಕ್ಷ ಗೊಮೆಜನೊಬ್ಬನೇ. ಇದನ್ನು ಕೇಳಿ ಯಾರಾದರೂ ಕಾರ್ಮೋನೋ ಹಿಟ್ಲರನಂತೆ ಸರ್ವಾಧಿಕಾರಿಯಾಗಿರಬಹುದು ಎಂದು ತರ್ಕಿಸಲು ಅವಕಾಶವಿದೆ, ಆದರೆ ವಸ್ತುಸ್ಥಿತಿ ಬೇರೆಯೇ ಆಗಿದೆ. “ದರ್ಶನಕೊಡುವುದೊಂದೇ ನನ್ನ ಕೆಲಸ; ಸರಕಾರದ ಮುಖ್ಯಾಧಿಕಾರಿ ನನ್ನನ್ನು ಏಕಾಕಿಯಾಗಿ ಇಟ್ಟಿದ್ದಾನೆ. ಜನರ ಸಂಬಂಧವೇ ನನಗಿಲ್ಲ; ದೇಶದ ಜೀವನದಲ್ಲಿ ಯಾವ ಭಾಗವನ್ನೂ ನಾನು ವಹಿಸಿಲ್ಲ” ಎನ್ನುತ್ತಾನೆ ಕಾರ್ಮೋನೋ !

### ಸರಕಾರದ ಸರ್ವಾಧಿಕಾರಿ

ಈ ಸರಕಾರದ ಮುಖ್ಯಾಧಿಕಾರಿಯಾದರೂ ಯಾರು ? ಅವನೇ ಮುಖ್ಯಮಂತ್ರಿ—ಡಾ. ಅಂಟೋನಿಯೋ ಡಿ. ಒಲಿವೀರ ಸಲಾಜಾರ, ೩೪,೨೫೪ ಚದುರ ಮೈಲಿನ ಪೋರ್ತುಗಾಲಿನಲ್ಲಿರುವ ೮೧೩೯೪೨ ಪ್ರಜೆಗಳ ಅನಭಿಷಿಕ್ತ ಸಮ್ರಾಟ! ಇವನೇ ವಿದೇಶೀ ಮಂತ್ರಿತ್ವವನ್ನೂ ನಿರ್ವಹಿಸುತ್ತಾನೆ. ಇವನ ಕೈಕೆಳಗೆ ವಿವಿಧ ಶಾಖೆಗಳ ಆಡಳಿತೆ ನಡೆಸುವ ೯ ಜನ ಮಂತ್ರಿಗಳಿದ್ದಾರೆ.

ಪೋರ್ತುಗಾಲು ನಾಲ್ಕು ಮಿಲಿಟರಿ ಜಿಲ್ಲೆಗಳಾಗಿ ವಿಭಜಿಸಲ್ಪಟ್ಟಿದೆ. ಲಿಸ್ಬನ್ ರಾಜಧಾನಿ. ಪ್ರತಿಯೊಬ್ಬ ಪ್ರಜೆಯೂ ಒತ್ತಾಯದ ಸೈನಿಕ ಶಿಕ್ಷಣ ತಗೆದುಕೊಳ್ಳಬೇಕು. ೧೬ ರೆಜಿಮೆಂಟುಗಳ ಸ್ಥಿರಸೈನ್ಯ, ೫॥ ಸಾವಿರ ಸೈನಿಕರೂ ೨೨೦ ಅಧಿಕಾರಿಗಳೂ ಇರುವ ‘ರಿಪಬ್ಲಿಕನ್ ಗಾರ್ಡ್’ ಎಂಬ ದಲ, ‘ಫಿಸ್ಕಲ್ ಗಾರ್ಡ್’ ಎಂಬ ೫ ಸಾವಿರ ಸೈನಿಕರೂ ನೂರು ಅಧಿಕಾರಿಗಳೂ ಇರುವ ಮತ್ತೊಂದು ದಲ; ಇದಲ್ಲದೆ, ಸುಮಾರು ೩॥ ಸಾವಿರ ಅಧಿಕಾರಿಗಳೂ ೪೯ ಸಾವಿರ ಯೋಧರೂ ಇರುವ ಸ್ವಯಂಸೇವಕದಲ, ಇವು ಸಲಾಜಾರರ ಬೆಂಬಲಕ್ಕಿವೆ. ಇದರ ಮೇಲೆ ತಕ್ಕಮಟ್ಟಿನ ನೌಕಾಬಲವೂ ಇದೆ.

“ಅಲಾವುದೀನನ್ನಪತಾನ ಸಂಧಿರ್ನಚ ವಿಗ್ರಹಃ” ಎಂದಂತೆ ಸಲಾಜಾರನ ದರಬಾರು. ಸರಕಾರ ಹೆಸರಿಸಿದ ಹುರಿಯಾಳಿಗೇ ಜನರು ಮತಕೊಡಬೇಕು— ಇದು ಅಲ್ಲಿಯ ಪ್ರಜಾಸತ್ತೆಯ ಒಂದು ಮಾದರಿ! ಸದ್ಯಃ ಹಿಂದಿನ ಉಪನಿವೇಶ ಮಂತ್ರಿ ಅಡ್ಮಿರಲ್ ಮಗಲ್ ಹೀಸ್ ಕಾರಿಯನನ್ನು ಸರಕಾರ ನಿಲ್ಲಿಸಬಹುದೆಂದು ತರ್ಕಿಸಲಾಗಿದೆ. ಆದರೆ ಪತ್ರಿಕಾಸ್ವಾತಂತ್ರ್ಯ ಸಂಘಸ್ವಾತಂತ್ರ್ಯ ಮುಂತಾದವು ಪುನಃ ಸ್ಥಾಪಿತವಾದ ಹೊರತು ತಾನು ಚುನಾವಣೆಗೆ ನಿಲ್ಲುವುದಿಲ್ಲ ಎಂದು ಅವನು ಹೇಳುತ್ತಾನಂತೆ. ಇದು ನಿಜವಾದರೆ ಅವನು ನಿಲ್ಲುವುದು ಅಸಂಭವ.

### ವಿರೋಧಿಗಳಿಗೆ ಸ್ಥಾನವಿಲ್ಲ

ವಿರೋಧಿ ಪಕ್ಷದ ಜನರಲ್ ನಾರ್ಟನ್ ಡಿಮಾಟೋಸನು ಉದಾರವಾದಿ. ಅವನು ಶುದ್ಧ, ಸರಳ ಪ್ರಜಾತಂತ್ರಪರ ಎಂದು ಜೇಮ್ಸ್ ಡಾ. ಸಿಲ್ವನು ಅಮೇರಿಕದ ‘ನೇಶನ್’ ಪತ್ರಿಕೆಯಲ್ಲಿ ಬರೆಯುತ್ತಾನೆ. ಕಳೆದ ಏಪ್ರಿಲಿನಲ್ಲಿ ಪೋರ್ತುಗೀಸ್ ಸರಕಾರದ ಘಟನೆಯನ್ವಯ ಸುಪ್ರೀಂ ಕೋರ್ಟಿನೆದುರು ತನ್ನ ಘನವಾದ ಒಪ್ಪಿಗೆಯನ್ನು ಪಡೆಯದೆ ಈ ಪ್ರಕಾರ ತಾನು ಹುರಿಯಾಳಾಗುವೆನೆಂದು ಅವನು ಮುಂದೆ ಬಂದದ್ದನ್ನು ಕಂಡು ಸರಕಾರ ಮತ್ತು ಕೋರ್ಟುಗಳೆರಡೂ ಆಶ್ಚರ್ಯ ಅಮರ್ಷಗಳನ್ನು ಹೊಂದಿದವು. ಮುಖ್ಯಮಂತ್ರಿ ಹೇಳಿದಂತಾಗಲಿ ಎಂದು ಕೋರ್ಟು ಅವನ ತೀರ್ಪಿಗಾಗಿ ಕಾಯುತ್ತ ಕುಳಿತಿತು. ಈ ನಡುವೆ ಒಂದು ಪತ್ರಿಕಾಪ್ರತಿನಿಧಿಗಳ ಸಭೆ ನಡೆದಾಗ ಮಾಟೋಸನು ತನ್ನ ಪ್ರಜಾಸತ್ತಾತ್ಮಕ ಕಾರ್ಯಕ್ರಮವನ್ನು ಅವರ ಮುಂದಿಟ್ಟ. ಆದರೆ ಸರ್ವಾಧಿಕಾರಿ ಸಲಾಜಾರನ ಸರಕಾರವು ಅಲ್ಲಿಯ ಪತ್ರಿಕೆಗಳು ಅವನ ಬಗ್ಗೆ ಒಂದೇ ವಾಕ್ಯದಲ್ಲಿ ‘ವಿರೋಧಿಪಕ್ಷದ’ ಎನ್ನದೆ ‘ಕ್ರಾಂತಿಕಾರಕ’ ಹುರಿಯಾಳು ಎಂದು ಬಣ್ಣಿಸಿ ಆ ಸುದ್ದಿಯನ್ನು ಪ್ರಕಟಿಸುವಂತೆ ಮಾಡಿತು. ಸರಕಾರದ ವಿರುದ್ಧವಾಗಿ ಕ್ರಾಂತಿಯನ್ನು ಹೂಡುವ ಆರೋಪ ಹೊರಿಸಿ ಅವನು ಹುರಿಯಾಳಾಗದಂತೆ ಕೋರ್ಟು ನಿರ್ಣಯಿಸಲು ಹೀಗೆ ಸರಕಾರವು ಕುಯುಕ್ತಿಯನ್ನು ಹೂಡಿತು.

ಅಲ್ಲಿಯ ೫೧೭ ಪತ್ರಿಕೆಗಳೂ ಸಲಾಜಾರನ ಗುಲಾಮರು. ಸ್ವತಂತ್ರ ಹುರಿಯಾಳು ಪ್ರಚಾರ ಮಾಡಲು ಸರಕಾರ ಅಪ್ಪಣೆ ಕೊಡದು. ಮಾಟೋಸನ ಹೆಸರನ್ನು ಕೂಡ ಅಚ್ಚು ಹಾಕಬಾರದೆಂದು ಪತ್ರಿಕೆಗಳಿಗೆ ಆಜ್ಞೆ ಮಾಡಲಾಗಿದೆಯಂತೆ. ಇದೂ ಒಂದು ಪ್ರಜಾರಾಜ್ಯ, ಇಲ್ಲಿ ನಡೆಯುವುದೂ ಒಂದು ಪ್ರಜಾಸತ್ತೆ!

### ಜನರ ಕೂಪಮಂಡೂಕತೆ

ಜನರಲ್ಲಿ ಬಹುಸಂಖ್ಯರು ರೋಮನ್ ಕ್ಯಾಥೋಲಿಕರು. ಧರ್ಮಸ್ವಾತಂತ್ರ್ಯವೊಂದಿದೆ; ಅದೊಂದರಲ್ಲಿ ಸರಕಾರದ ಪೀಡೆಯಿಲ್ಲ. ನೂರರಲ್ಲಿ ೪೭॥ ಜನರು ಓದುಬರಹ ಬಲ್ಲರು. ಸೈನಿಕ, ನೌಕಾಯಾನ ಸಂಬಂಧಿ, ವೃತ್ತಿಪರ, ಕಲಾವಿಜ್ಞಾನಾದಿಕ ಶಿಕ್ಷಣಗಳನ್ನು ಕೊಡಲು ಅಲ್ಲಲ್ಲಿ ಶಾಲೆಗಳಿವೆ. ಅವರೂ ಅರ್ಧಕ್ಕಿಂತ ಹೆಚ್ಚು ಜನರು ಅಶಿಕ್ಷಿತರಾಗಿರುವುದು ಪ್ರಶಂಸನೀಯವೆನಿಸಿಲ್ಲ. ಅಭಿಪ್ರಾಯ ಪ್ರಕಟನೆ, ಸಂಘಸ್ಥಾಪನೆ, ಪ್ರಚಾರ ಮುಂತಾದ ಯಾವುದಕ್ಕೂ ಜನರಿಗೆ ಸ್ವಾತಂತ್ರ್ಯವಿಲ್ಲ. ಅವರು ಸಲಾಜಾರನ ಭೃತ್ಯರಂತೆಯೇ ಸೈ. ಬಾಲವಿರುವ ಪ್ರಾಣಿಗಳೆಲ್ಲ ಕುದುರೆಗಳೆಂದು ಅವನ ಸರಕಾರ ಹೇಳಿದರೂ ಅವರು ನಂಬಬೇಕು, ಮನ್ನಣೆ ಕೊಡಬೇಕು! ಜನರಲ್ಲಿ ಬಹುಸಂಖ್ಯರು ಕೃಷಿಕರು. ಗೋದಿ, ಅಕ್ಕಿ, ಬಾರ್ಲಿ, ಆಲುಗಡ್ಡೆ ಮುಂತಾದ ಆಹಾರ ಪದಾರ್ಥಗಳೇ ಅಲ್ಲಿಯ ಮುಖ್ಯ ಬೆಳೆ. ಉಣ್ಣೆ, ಬಿರಡೆ, ತರ್ಪೆಂಟೈನ್ ಮತ್ತು ಇತರ ಖನಿಜಗಳನ್ನು ಅಸಿದ್ಧ ರೂಪದಲ್ಲಿ ಪೋರ್ತುಗಾಲ ನಿರ್ಯಾತ ಮಾಡುತ್ತದೆ. ಆದರೆ ಉದ್ಯಮ ಪ್ರಗತಿ ಹೊಂದಿಲ್ಲ. ಆದುದರಿಂದ ಸಿದ್ಧ ಪದಾರ್ಥಗಳನ್ನು ಇಂಗ್ಲಂಡ್, ಅಮೇರಿಕ, ಸ್ಪೇನ್, ಫ್ರಾನ್ಸ್ ಮುಂತಾದ ದೇಶಗಳಿಂದ ತರಿಸಿಕೊಳ್ಳುತ್ತದೆ.

### ಉಪನಿವೇಶಗಳನ್ನು ಉಳಿಸಿಕೊಂಬ ಆಶೆ

ಈ ಸನಾತನಿ ಸಾಮ್ರಾಜ್ಯವಾದಿ ಪೋರ್ತುಗಾಲಿನ ಉಪನಿವೇಶಗಳು ಆಫ್ರಿಕ, ಏಶಿಯ ಮತ್ತು ಓಶಿಯೇನಿಯಗಳಲ್ಲಿವೆ. ಆಫ್ರಿಕದ ಕೇಪ್‌ವರ್ದೆ ದ್ವೀಪಗಳು, ಗಿನಿ, ಪಿನ್ಸಿಪೆ ಮತ್ತು ತೋಮೆ ದ್ವೀಪಗಳು, ಅಂಗೋಲ, ಮೋಜಾಂಬಿಕ್‌ಗಳೂ ಏಶಿಯದ ಗೋವೆ, ದೀವ, ದಮನ್, ಮಕಾವೋಗಳೂ ಓಶಿಯೇನಿಯದ ತೈಮೂರ್ ದ್ವೀಪಗಳೂ ಪೋರ್ತುಗಾಲ ಸಾಮ್ರಾಜ್ಯಕ್ಕೆ ಸೇರಿವೆ. ಇವುಗಳ ಒಟ್ಟು ವಿಸ್ತಾರ ೧೨೫೭ ಚದುರ ಮೈಲು, ಜನಸಂಖ್ಯೆ ೫,೩೭೦೦೦.

ಅಂತಾರಾಷ್ಟ್ರೀಯ ರಂಗದಲ್ಲಿ ಪೋರ್ತುಗಾಲಿಗೆ ಯಾವ ಸ್ಥಾನಮಾನಗಳೂ ಇಲ್ಲವಾದರೂ ತನ್ನ ಮಿತಬಲದಿಂದಲೇ ಸಾಮ್ರಾಜ್ಯವನ್ನು ಉಳಿಸಿಕೊಳ್ಳಲು ಅದು ಪ್ರಯತ್ನಿಸುತ್ತಿರುವುದು. ಗೋವೆ ಮುಂತಾದೆಡೆ ನಡೆಸಿದ ದಬ್ಬಾಳಿಕೆಯಿಂದ ವ್ಯಕ್ತವಾಗುತ್ತದೆ. ಸಲಾಜಾರ ಸರಕಾರಕ್ಕೆ ಕಾಲಜ್ಞಾನವೇ ಇಲ್ಲ, ಪರಿಸ್ಥಿತಿಯ ಜ್ಞಾನ ಫ್ರೆಂಚರಿಗಿದ್ದಷ್ಟೂ ಇಲ್ಲ. ಈ ಕಾರಣದಿಂದ ಭಾರತದಲ್ಲಿಯ ತನ್ನ ಉಪನಿವೇಶಗಳನ್ನು ಭದ್ರವಾಗಿ ತನ್ನ ಅಂಕೆಯೊಳಗಿಟ್ಟುಕೊಳ್ಳಲು ಪ್ರಜಾಂದೋಲನಗಳನ್ನು ಹತ್ತಿಕ್ಕುವ ಧೋರಣೆಯಿಂದ ಹಡಗು ತುಂಬ ಸೈನಿಕರನ್ನು ಕಳುಹಿದ ಸುದ್ದಿ ಎಲ್ಲರಿಗೂ ತಿಳಿದಿದೆ. ಆಂತರಿಕ ಸಮಸ್ಯೆಗಳನ್ನು ಒಂದೊಂದಾಗಿ ಬಗೆಹರಿಸಿದ ಒಂದೆರಡು ವರ್ಷಗಳಲ್ಲಿ ಭಾರತ ಪೋರ್ತುಗಾಲಿನ ಸಾಮ್ರಾಜ್ಯಶಾಹಿಯ ಗಡ್ಡ ಹಿಡಿದು ಅಲುಗಾಡಿಸದಿರದು, ಭಾರತಕ್ಕೆ ಗೋವೆ, ದಿವ, ದಮನ್‌ಗಳು ಪುನಃ ಸೇರದಿರವು.

—ಅರ್ಜುನ

---

ಅವಳು ಒಳ್ಳೆಯ ರಸಿಕೆ. ಯಾವಾಗಲೂ ಗಂಡನೊಡನೆ ಐಕ್ಯವಾಗಿರುತ್ತಾಳೆ, ಸಂಬಳ ಬರುವ ದಿನವಂತೂ ಸ್ವತಃ ಅವನ ಆಫೀಸಿಗೆ ಹೋಗಿ ಅವನ ಸಂಬಳ ಇಡೀ ತನ್ನದೆಂದೇ ತೆಗೆದುಕೊಂಡು ಬಂದುಬಿಡುತ್ತಾಳೆ!

## ಫ್ರೆಂಚ್ ಹಿಂದೀಯರ ವಿಲಕ್ಷಣ ಬೇಡಿಕೆ

ಫ್ರೆಂಚ್ ಹಿಂದುಸ್ತಾನದ ನಗರ ಸಭೆಗಳ ಪ್ರತಿನಿಧಿಗಳ ಸಭೆ ತಮ್ಮ ಭವಿತವ್ಯವನ್ನು ನಿರ್ಧರಿಸುವ ಬಗ್ಗೆ ಸೇರಿ ಅದನ್ನು ಜನಮತಗಣನೆಯಿಂದ ಪೂರಯಿಸಬೇಕೆಂದು ಗೊತ್ತುವಳಿಯನ್ನು ಪಾಸುಮಾಡಿತು. ಸಭೆಗೆ ಪಾಂಡಿಚೇರಿ, ಕಾರಿಕಲ್, ಮಾಹೆ, ಅನಾಮ ಈ ನಾಲ್ಕು ಫ್ರೆಂಚ್ ಹಿಂದುಸ್ತಾನದ ನಗರಸಭೆಗಳ ಒಟ್ಟು ೨೦೦ ಪ್ರತಿನಿಧಿಗಳು ಆಗಮಿಸಿದ್ದರು. ಪಾಂಡಿಚೇರಿ ನಗರ ಸಭಾಧ್ಯಕ್ಷ ಮುತ್ತು ಪಿಳ್ಳೆಯವರು ಸಭೆಗೆ ಅಧ್ಯಕ್ಷರಾಗಿದ್ದರು. ಗೊತ್ತುವಳಿಯನ್ನು ಕಾರ್ಯರೂಪಕ್ಕೆ ತರಲು ಫ್ರೆಂಚ್ ಹಿಂದುಸ್ತಾನದ ಸಮಾಜವಾದೀ ಪಕ್ಷದ ಧುರೀಣರೂ ಫ್ರೆಂಚ್ ಹಿಂದುಸ್ತಾನ ಸರಕಾರದಲ್ಲಿ ಅಭಿವೃದ್ಧಿಶಾಖೆಯ ಮಂತ್ರಿಗಳೂ ಆದ ಎಡ್ವರ್ಡ ಗೆಂಬರ್ಟರೂ ಫ್ರೆಂಚ್ ಹಿಂದುಸ್ತಾನದ ಅರ್ಥಸಚಿವರೂ ಆ ಶಾಖೆಯ ಉಚ್ಚಾಧಿಕಾರಿಗಳಾಗಿರುವ ಆಯ್ಕೆ ಹೊಂದಿ ಬಂದ ಸಮಾಜವಾದಿ ಎಮ್ಯಾನ್ಯುಯಲ್ ಥಟ್ಟಾರವರೂ ಪ್ಯಾರಿಸ್ ಮತ್ತು ದಿಲ್ಲಿಗಳಿಗೆ ಹೋಗಿ ಫ್ರೆಂಚ್ ಮತ್ತು ಹಿಂದುಸ್ತಾನ ಸರಕಾರಗಳೊಡನೆ ಸಂಧಾನ ನಡೆಸಲು ಸಭೆ ಅಧಿಕಾರ ಕೊಟ್ಟಿದೆ.

ಜನಮತಗಣನೆಯನ್ನು ನಡೆಸುವ ಬಗ್ಗೆ ಕೆಳಗಿನ ವಿಧಾನ ಹೇಳಲ್ಪಟ್ಟಿದೆ.

೧) ೧೯೪೯ ರ ಮಾರ್ಚ ೧ ಕ್ಕೆ ಮತದಾರರ ಪಟ್ಟಿಯಲ್ಲಿ ಹೆಸರಿರತಕ್ಕವರೆಲ್ಲ ಮತದಾರರೆಂದು ಮನ್ನಿಸಲಾಗುವುದು. ೨) ಹಿಂದುಸ್ತಾನ ಮತ್ತು ಫ್ರೆಂಚ್ ಒಕ್ಕೂಟಗಳ ಬಗ್ಗೆ ಅಭಿಪ್ರಾಯ ಕೊಡಲು ಭಿನ್ನವರ್ಣಗಳ ಮತಪತ್ರ ಒದಗಿಸತಕ್ಕದ್ದು. ೩) ಹಿಂದುಸ್ತಾನ ಒಕ್ಕೂಟ ಸೇರಲು ೩೦ ವರ್ಷಗಳ ಅವಧಿಯವರೆಗೆ ಸಂಪೂರ್ಣ ಸ್ವಾಯತ್ತತೆ ಕೊಡುವೆನೆಂದು ಹಿಂದೀ ಸರಕಾರ ಒಪ್ಪಬೇಕು; ಫ್ರೆಂಚ್ ಒಕ್ಕೂಟದಲ್ಲೇ ಉಳಿಯಬೇಕಾದರೆ ನಿರಂತರ ಸ್ವಾಯತ್ತತೆಯನ್ನು ಫ್ರೆಂಚ್ ಸರಕಾರ ಕೊಡಬೇಕು. ಮತದಾನ ಗುಪ್ತವಾಗಿ ನಡೆಯಬೇಕೆಂದು ಹಿಂದುಸ್ತಾನ ಮತ್ತು ಫ್ರೆಂಚ್ ಒಕ್ಕೂಟದ ಇಬ್ಬಿಬ್ಬರು ನಿರೀಕ್ಷಕರಿರತಕ್ಕದ್ದೆಂದು ಮುಂದಿನ ಅಂಶಗಳಲ್ಲಿವೆ. ಫಲಿತಾಂಶ ಹೊರಬೀಳುವ ವರೆಗೆ ಚುನಾವಣೆಯ ಪ್ರಚಾರವನ್ನು ತ್ರಯಸ್ಥರು ನಿರೀಕ್ಷಿಸತಕ್ಕದ್ದೆಂದು ಹೇಳಲಾಗಿದೆ. ಅಲ್ಲದೆ ಮತಗಣನೆಯ ಪ್ರಚಾರಕ್ಕೆ ಮೊದಲೇ ಹಿಂದೀ ಮತ್ತು ಫ್ರೆಂಚ್ ಸರಕಾರಗಳು ಈ ಉಪನಿವೇಶಗಳ ಬಗ್ಗೆ ತಮ್ಮ ಧೋರಣವೇನೆಂಬುದನ್ನು ಸಾರಬೇಕೆಂದೂ ಕೇಳಲಾಗಿದೆ.

ಆದರೆ ಫ್ರೆಂಚ್ ಭಾರತ ನಗರಸಭಾಸದಸ್ಯರ ಸಭೆಯಲ್ಲಿ ಫ್ರೆಂಚ್ ಕಮಿಶನರರು ಮಾಡಿದ ಭಾಷಣದ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತ ಫ್ರೆಂಚ್ ಭಾರತದ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಆರ್. ಎಲ್. ಪುರುಷೋತ್ತಮರು, ಸೌಲಭ್ಯಗಳ ಆಮಿಷ ತೋರಿಸುವುದನ್ನು ಬಿಟ್ಟು ಫ್ರೆಂಚರು ಬ್ರಿಟಿಶರಂತೆ ಭಾರತದಿಂದ ಹೊರಡಬೇಕೆಂದೂ ಅವರ ಆಡಳಿತೆ ಇರುವವರೆ ನಿಷ್ಪಕ್ಷಪಾತವಾದ ಜನಮತಗಣನೆ ಅಸಾಧ್ಯವೆಂದೂ ಹೇಳಿದರು. ಫ್ರೆಂಚ್ ಹಿಂದೀಯರು ಜನಮತಗಣನೆಯ ಮುನ್ನ ೩೦ ವರ್ಷಗಳ ಸ್ವಾಯತ್ತತೆಯನ್ನು ಕೇಳಿದ್ದು ಹಿಂದೀಯರ ದೃಷ್ಟಿಯಿಂದ ವಿಲಕ್ಷಣವಾಗಿದೆ. ಅವರಿಗೆ ಹಿಂದೀ ಒಕ್ಕೂಟ ಸರಕಾರದಲ್ಲಿ ಅವಿಶ್ವಾಸಾಂಶವಿರುವದನ್ನು ಅದು ಸೂಚಿಸುತ್ತದೆ.

# ಹಿರಿಯೋಲಗದಲ್ಲಿ ಎರಡು ವಾರ

ಹಿರಿಯೋಲಗದಲ್ಲಿ ಎರಡು ವಾರಗಳ ವರೆಗೆ ವಿವಿಧ ಶಾಖೆಗಳ ಬೇಡಿಕೆಗಳ ಮೇಲೆ ಚರ್ಚೆ ನಡೆದು ಅವೆಲ್ಲ ಸ್ವೀಕರಿಸಲ್ಪಟ್ಟವು. ಮುಂದೆ ಬಂದಿದ್ದ ಕೆಲವೇ ಕಡಿತದ ಸೂಚನೆಗಳೂ ಸಮಾಧಾನಕರ ಉತ್ತರದ ನಂತರ ಹಿಂತೆಗೆದುಕೊಳ್ಳಲ್ಪಟ್ಟವು. ಶನಿವಾರ ತಾ. ೧೯ ಕ್ಕೆ ಎಲ್ಲ ಬೇಡಿಕೆಗಳ ಮೇಲಿನ ನಿರ್ಣಯಗಳು ಮುಗಿದು ಸೋಮವಾರ ತಾ. ೨೧ ಕ್ಕೆ ಇಡಿ ಮುಂಗಡ ಪತ್ರವನ್ನು ಪರಿಶೀಲಕ ಸಮಿತಿಗೊಪ್ಪಿಸಬೇಕೆಂದು ಅರ್ಥ ಮಂತ್ರಿ ಡಾ. ಮತ್ತಾಯರು ಸೂಚಿಸಿದರು. ಅವರ ಚರ್ಚೆ ಮುಗಿದು ಆ ಸೂಚನೆ ಪಾಸಾಗಿದೆ.

## ಸ್ವತಂತ್ರ ಪ್ರಜಾರಾಜ್ಯ

ಪಂ. ಜವಾಹರಲಾಲರು ತಾ. ೮ ಕ್ಕೆ ತಮ್ಮ ವಿದೇಶ ಶಾಖೆಯ ಬೇಡಿಕೆಯನ್ನು ಮಂಡಿಸಿ "ಹಿಂದುಸ್ತಾನ ಕೆಲ ತಿಂಗಳುಗಳಲ್ಲಿ ಅನಿವಾರ್ಯವಾಗಿ ಸ್ವತಂತ್ರವಾದ ಪ್ರಜಾರಾಜ್ಯವಾಗುವದು" ಎಂದು ಭರವಸೆ ಕೊಟ್ಟರು. "ನಮ್ಮ ರಾಜಕೀಯ, ಆರ್ಥಿಕ ಮತ್ತು ಅಂತರ್ರಾಷ್ಟ್ರ ರಾಜಕಾರಣದಲ್ಲಿ ಪರಕೀಯರ ಹಸ್ತಕ್ಷೇಪವನ್ನು ಸಹಿಸಲಾರೆವು. ಈ ಉಪಾಧಿಗೊಳಗಾಗಿ ನಾವು ಯುಕ್ತರಾಷ್ಟ್ರಸಂಘದೊಡನೆ ಸಹಕರಿಸುವೆವು" ಎಂದೂ ಅವರು ಹೇಳಿದರು. ಅಂತರ್‌ರಾಷ್ಟ್ರೀಯ ರಂಗದಲ್ಲಿ ಯಾವುದೊಂದು ಪಂಗಡಕ್ಕೆ ಸೇರಿ ಪಕ್ಷಪಾತಿಗಳಾಗದೆ ಸ್ವತಂತ್ರ ಧೋರಣವನ್ನೆ ಮುಂದುವರಿಸಿಕೊಂಡು ಹೋಗುವ ನಿರ್ಧಾರವನ್ನು ಅವರು ಒತ್ತಿ ಹೇಳಿದರಲ್ಲದೆ ಈ ಧೋರಣೆಯಿಂದ ಈಚೆಗೆ ನಮ್ಮ ಜನಪ್ರಿಯತೆ ಬೆಳೆಯುತ್ತಿದೆಯೆಂದೂ ವಾದಿಸಿದರು. ಹಿಂದುಸ್ತಾನದಲ್ಲಿ ಇನ್ನೂ ಉಳಿದುಕೊಂಡಿರುವ (ಗೋವಾ, ಪಾಂಡಿಚೇರಿ ಮೊದಲಾದ) ವಿದೇಶೀ ಪ್ರದೇಶಗಳ ಬಗ್ಗೆ ಹೇಳುತ್ತ, ಅದಕ್ಕೆ ಹಿಂದುಸ್ತಾನದಲ್ಲಿ ಲೀನವಾಗದೆ ಬೇರೆ ಹಾದಿಯೇ ಇಲ್ಲವೆಂದರು. ಈ ವಿಷಯದಲ್ಲಿ ಘರ್ಷಣೆಯಿಲ್ಲದೆ ಶಾಂತಿಯುತವಾದ ಉಪಾಯವನ್ನು ಹುಡುಕಲು ನಾವು ಉತ್ಸುಕರಾಗಿದ್ದರೂ ಸ್ವತಂತ್ರ ಭಾರತವು ತನ್ನ ಕೆಲ ಪ್ರದೇಶಗಳು ಪರಕೀಯರ ಕೈಯಲ್ಲಿರುವದನ್ನು ಸಹಿಸಲಾರದು. ಭಾರತದ ಭವಿತವ್ಯವನ್ನು ಪ್ರಸ್ತಾಪಿಸಿ, ಅದು ಜನಸಂಖ್ಯಾದೃಷ್ಟಿಯಿಂದ ಜಗತ್ತಿನಲ್ಲಿ ಅತಿ ದೊಡ್ಡ ರಾಷ್ಟ್ರವಾಗಿರುವದರಿಂದಲೂ ಅದರ ಸಂಪತ್ತು ಅಪಾರವಾಗಿರುವದರಿಂದಲೂ ಅದಕ್ಕೆ ಜಾಗತಿಕ ರಾಜಕಾರಣದಲ್ಲಿ ಮಹತ್ವದ ಸ್ಥಾನ ಪ್ರಾಪ್ತವಾಗಿದೆಯೆಂದು ಮುಖ್ಯ ಮಂತ್ರಿಗಳು ಉಸಿರಿದರು.

ಚರ್ಚೆಯಲ್ಲಿ ಪಂ. ನೆಹರೂ ಅವರ ವಿದೇಶ ಧೋರಣೆಗೆ ಸಾಮಾನ್ಯ ಬೆಂಬಲ ದೊರೆತು ೮ ಕೋಟಿ ರೂಪಾಯಿ ನಿಶ್ಚಿತ ವಿದೇಶ ಶಾಖೆಯ ಬೇಡಿಕೆ ಮಾನ್ಯವಾಯಿತು.

## ಉದ್ಯೋಗಗಳ ವಿಸ್ತರಣ

ಉದ್ಯೋಗ ಶಾಖೆಯ ಬೇಡಿಕೆಗಳನ್ನು ಮಂಡಿಸಿದ ಡಾ. ಶ್ಯಾಮಪ್ರಸಾದ ಮುಕರ್ಜಿಯವರು, ೧೯೪೭ ರಲ್ಲಿದ್ದುದಕ್ಕಿಂತ ೧೯೪೮ ರಲ್ಲಿ ಔದ್ಯೋಗಿಕ ಉತ್ಪಾದನೆ ನೂರಕ್ಕೆ ೧೨ ರಿಂದ ೧೬ ರ ವರೆಗೆ ಹೆಚ್ಚಾಗಿದೆಯೆಂದು ಹೊರಗೆಡಹಿದರು. ಔದ್ಯೋಗಿಕ ಪ್ರಗತಿಗಾಗಿ ಸರಕಾರದವರು ಕೈಕೊಂಡಿರುವ ಕ್ರಮಗಳನ್ನೂ ಈಗಾಗಲೆ ಟೆಲಿಫೋನ, ಪೆನಿಸಿಲಿನ್, ಉಕ್ಕು, ಗೊಬ್ಬರ, ಸಿಮೆಂಟ, ಸಕ್ಕರೆ ಕಾರಖಾನೆಗಳ ಸ್ಥಾಪನೆ ಮತ್ತು ವಿಸ್ತರಣೆಗಾಗಿ ಯೋಜನೆ ಮತ್ತು ಕಾರ್ಯಾರಂಭ ಮಾಡಿರುವದನ್ನೂ ಅವರು ವಿವರಿಸಿದರು. ಗ್ರಾಮೋದ್ಯೋಗಗಳಿಗೂ ಲಕ್ಷ ಕೊಡಲಾಗಿದೆ. ಬಟ್ಟೆಯ ನಿಯಂತ್ರಣ ಯಶಸ್ವಿಯಾಗಿದೆ. ಅದರೆ ನಮಗೆ ಬೇಕಾಗುವ ೪೫ ಲಕ್ಷ ಹತ್ತಿಗಂಟುಗಳಲ್ಲಿ ೩೫ ಲಕ್ಷ ಗಂಟುಗಳು ಮಾತ್ರ ಈ ದೇಶದಲ್ಲಿ ಹುಟ್ಟುತ್ತಿದ್ದು ಪಾಕಿಸ್ತಾನವೂ ನಮಗೆ ಪೂರೈಸುವ ಹತ್ತಿಯ ಪ್ರಮಾಣವನ್ನು ಕಡಿಮೆ ಮಾಡಿದೆಯೆಂದು ಅವರು ತಿಳಿಸಿದರು. ಔದ್ಯೋಗಿಕ ಪ್ರಗತಿಯ ವಿಷಯದಲ್ಲಿ ಯಾವುದೊಂದು "ವಾದ"ದ ಮಬ್ಬಿಗೆ ಸಿಲುಕದೆ ಎಲ್ಲರಿಗೂ ಹಿತವಾದ ಧೋರಣವನ್ನು ಅನುಸರಿಸಲಾಗುವದೆಂದು ಅವರು ನುಡಿದರು.

## ವಾಣಿಜ್ಯದ ಸ್ಥಿತಿಗತಿ

ವಾಣಿಜ್ಯಮಂತ್ರಿ ಶ್ರೀ ಕೆ. ಸಿ. ನಿಯೋಗಿಯವರು ತಮ್ಮ ಬೇಡಿಕೆಯನ್ನು ಮಂಡಿಸುವಾಗ ಸ್ವಲ್ಪ ವಿಷಾದಕರವಾದ ಕತೆಯನ್ನೆ ಬಿಚ್ಚಿದರು. ನಮ್ಮ ವಿದೇಶ ವ್ಯಾಪಾರದ ಪರಿಮಾಣ ಹಿಂದಿನ ವರ್ಷಕ್ಕಿಂತ ಅನೇಕ ಕೋಟಿ ರೂಪಾಯಿಗಳಷ್ಟು ಹೆಚ್ಚಿದ್ದೇನೋ ನಿಜ. ಅದರೆ ನಮ್ಮ ನಿರ್ಯಾತಕ್ಕಿಂತ ಆಯಾತದ ಪ್ರಮಾಣ ೪ ಪಟ್ಟು ಹೆಚ್ಚಾಗಿದೆ. ಡಾಲರ ಮೊದಲಾದ ದುಷ್ಕರ ಪ್ರದೇಶಗಳೊಡನೆ ಆಯಾತ ನಿರ್ಯಾತಗಳೆರಡೂ ಕಡಿಮೆಯಾಗಿವೆ. ಅದರೆ ಸ್ಟರ್ಲಿಂಗ್ ಮತ್ತು ಇತರ ಸುಕರ ಚಲಾವಣೆಯ ಪ್ರದೇಶಗಳೊಡನೆ ನಮ್ಮ ಆಯಾತ ನಿರ್ಯಾತಗಳೆರಡೂ ಹೆಚ್ಚಿವೆ. ನಮ್ಮ ನಿರ್ಯಾತ ವ್ಯಾಪಾರವನ್ನು ಹೆಚ್ಚಿಸಲು ಸಂತತ ಪ್ರಯತ್ನಗಳು ನಡೆದಿವೆ ಅದರೆ ಆಹಾರ ಕೊರತೆಯ ಕಾರಣದಿಂದ ವ್ಯಾಪಾರಿ ಬೆಳೆಗಳನ್ನು ನಿರುತ್ಸಾಹಗೊಳಿಸಬೇಕಾಗಿ ಬಂದು ನಿರ್ಯಾತ ವ್ಯಾಪಾರಕ್ಕೆ ಧಕ್ಕೆ ತಗಲಿದೆ. ಅದರೆ ನಮ್ಮ ಲೆಕ್ಕದ ಚಾಲ್ತಿ ಸ್ಟರ್ಲಿಂಗುಗಳು ಉಪಯೋಗ ಮಾಡದೆ ಹಾಗೆಯೆ ಬ್ರಿಟನಿನಲ್ಲಿ ಬಿದ್ದಿದ್ದುದರಿಂದ ಸ್ಟರ್ಲಿಂಗ್ ಪ್ರದೇಶಗಳಿಂದ ಆಯಾತದ ಬಿಗುಹನ್ನು ಸಡಿಲಿಸಬೇಕಾಯಿತು ಇದರಿಂದ ಆಯಾತ ಹೆಚ್ಚಿತು. ಅವುಗಳಲ್ಲಿ ಕೆಲ ವಿಲಾಸ ಸಾಮುಗ್ರಿಗಳೂ ಬಂದಿವೆ. ಅದರೆ ಅವುಗಳ ಮೇಲೆ ಹೆಚ್ಚು ಸುಂಕ ಹೇರಲಾಗಿದೆ. ನಮ್ಮ ವಿದೇಶ ವ್ಯಾಪಾರದ ತೂಕತಪ್ಪಲು ದೇಶದ ವಿಭಜನೆಯೆ ದೊಡ್ಡ ಕಾರಣವಾಯಿತೆಂದು ಮಂತ್ರಿಗಳು ಹೇಳಿದರು. ಈಗ ಪಾಕಿಸ್ತಾನದ ಸರಕಾರ ತಯಾರಿಸಿದ ಮುಂಗಡ ಪತ್ರಿಕೆ ಉಭಯ ರಾಷ್ಟ್ರಗಳ ವ್ಯಾಪಾರ ಸಂಬಂಧಕ್ಕೆ ಧಕ್ಕೆ ತರುವಂಥದೆಂದು ತಿಳಿಸಿ ಆ ಬಗ್ಗೆ ಪಾಕಿಸ್ತಾನ-ಹಿಂದುಸ್ತಾನ ಪ್ರತಿನಿಧಿಗಳ ಸಭೆ ಸೇರಲಿರುವ ಅಂಶವನ್ನು ಹೊರಗೆಡಹಿದರು.

## ಬಂಡವಲಿನ ಪ್ರಶ್ನೆ

ತಮ್ಮ ಶಾಖೆಯ ೩೯ ಬೇಡಿಕೆಗಳನ್ನು ಮಂಡಿಸುತ್ತ ಅರ್ಥಮಂತ್ರಿ ಡಾ. ಜಾನ ಮತ್ತಾಯರು, ಕರ, ಬೆಲೆ ಮತ್ತು ಬಂಡವಲುಗಳ ಬಗ್ಗೆ ಕೆಲ ಮಾತುಗಳನ್ನು ಸಭೆಯ ಮುಂದಿಟ್ಟರು. ಸರಕಾರದ ಅತಿ ಪ್ರಸರಣ ನಿರೋಧಕ ಧೋರಣದ ಪರಿಣಾಮವಾಗಿ ಆಹಾರ ಧಾನ್ಯಗಳ ಬೆಲೆ ನೂರರಲ್ಲಿ ೧೦.೧೭ ದಶಾಂಶ ಇಳಿದುದು ಕಂಡು ಬಂದಿದೆ. ಮೇಲಾಗಿ ಅಮೇರಿಕೆ ಮೊದಲಾದ ದೇಶಗಳಲ್ಲಿ ಈ ವರ್ಷ ಹುಲುಸಾಗಿ ಬೆಳೆ ಬಂದಿದ್ದು ಅಲ್ಲಿಯೂ ತಕ್ಷಣದಾಮವಾಗಿ ಇಲ್ಲಿಯೂ ಬೆಲೆ ಇಳಿಯುವದು ಖಂಡಿತ. ಇಲ್ಲಿಯ ಧಾನ್ಯ ಪೂರೈಕೆ ಸಮರ್ಪಕವಾಗುವವರೆಗೆ ವಿಶೇಷ ಬೆಲೆ ಇಳಿಯುವ ಸಂಭವವಿಲ್ಲದಿದ್ದರೂ ಎಪ್ರಿಲಿನಿಂದ ಸ್ವಲ್ಪಸ್ವಲ್ಪವಾಗಿ ಇಳಿಯಬಹುದು. ಒಮ್ಮೆಲೆ ಇಳಿಯುವಂತೆ ಮಾಡಿದರೆ ಒಕ್ಕಲಿಗರಿಗೆ ಹಾನಿ ತಟ್ಟಬಹುದಾದುದರಿಂದ ಹೀಗಾಗುವದೇ ಇಷ್ಟ. ಅತಿ ಪ್ರಸರಣದ ನಿರೋಧಕ್ಕಾಗಿ ಬ್ಯಾಂಕ್ ಠೇವುಗಳನ್ನು ಸ್ಥಗಿತಗೊಳಿಸುವದು, ನೋಟುಗಳನ್ನು ರದ್ದುಗೊಳಿಸುವದೇ ಮೊದಲಾದ ತೀಕ್ಷ್ಣೋಪಾಯಗಳನ್ನು ತಿರಸ್ಕರಿಸುತ್ತ ಅರ್ಥಮಂತ್ರಿಗಳು ಅವುಗಳಿಂದ ಸರಕಾರದ ಚಲಾವಣೆಯ ಮೇಲಿನ ಜನರ ವಿಶ್ವಾಸವೇ ಹಾರಿಹೋಗಿ ಮುಂದೆ ಬಂಡವಲವೇ ದೊರಕದಂತಾದೀತೆಂದು ಭಯಪಟ್ಟರು. ಸರಕಾರದ ಕರ ಧೋರಣವನ್ನು ಸಮರ್ಥಿಸಿಕೊಳ್ಳುತ್ತ ಅವರು ಮಧ್ಯಮ ವರ್ಗದವರಿಗೆ ಬರುತ್ತಿರುವ ಹೆಚ್ಚಿನ ಉತ್ಪನ್ನವನ್ನು ಕರದ ರೂಪದಲ್ಲಿ ತೆಗೆದುಕೊಂಡು ಬಿಡುವದೇ ಯೋಗ್ಯ ಉಪಾಯವೆಂದರು. ಉಪ್ಪಿನ ಸುಂಕಕ್ಕಿಂತ ಬಟ್ಟೆ ಸುಂಕವೇ ಬಡವರಿಗೆ ಹಿತಕರವೆಂದು ಅವರ ಅಭಿಪ್ರಾಯವಾಗಿತ್ತು. ಮುಂದೆ ಡಾ॥ ಮತ್ತಾಯರು ಈ ವರ್ಷ ೮೫ ಕೋಟಿ ರೂಪಾಯಿ ಸಾಲ ಎತ್ತಬೇಕೆಂಬ ಸರಕಾರದ ಇಚ್ಛೆಯನ್ನು ತಿಳಿಸಿ ಬಂಡವಲದ ಪ್ರಶ್ನೆಯ ಕಡೆ ಹೊರಳಿದರು. ಔದ್ಯೋಗಿಕ ಪ್ರಗತಿಗೆ ಬಂಡವಲ ಅವಶ್ಯ. ಹಿಂದುಸ್ತಾನದಲ್ಲಿರುವ ಎಲ್ಲ ಬಂಡವಲವನ್ನು ಕೂಡಿಸಿದರೂ ರಾಷ್ಟ್ರಾಭಿವೃದ್ಧಿಗೆ ಸಾಲುವಂತಿಲ್ಲ. ಅದರಿಂದ ವಿದೇಶಿ ಬಂಡವಲನ್ನು ನಾವು ಸ್ವಾಗತಿಸುವದವಶ್ಯ. ಅಮೇರಿಕೆ ಶ್ರೀಮಂತ ರಾಷ್ಟ್ರವಾಗಿದ್ದು ಯಂತ್ರಾದಿ ಮೂಲಭೂತ ಸಾಮುಗ್ರಿಗಳೂ ಅಲ್ಲಿ ಧಾರಾಳವಾಗಿರುವದರಿಂದ ಅಲ್ಲಿಯ ಬಂಡವಲಗಾರರಿಗೆ ಇಲ್ಲಿ ಹಣತೊಡಗಿಸಲು ಪ್ರೋತ್ಸಾಹಿಸಬೇಕಾಗಿದೆಯೆಂದೂ ಆ ವಿಷಯದಲ್ಲಿ ಮುಖ್ಯ ಮಂತ್ರಿಗಳು ಬೇಗನೆ ಹೇಳಿಕೆ ಕೊಡಲಿರುವರೆಂದೂ ತಿಳಿಸಿದರು.

## ಗೃಹಶಾಖೆಯ ಕಾರ್ಯ

ಗೃಹಶಾಖೆಯ ಬೇಡಿಕೆಯನ್ನು ಮಂಡಿಸಿದ ಸರದಾರ ಪಟೇಲರು ತಮ್ಮ ಸಹಜ ನಿರ್ದಾಕ್ಷಿಣ್ಯದಿಂದ ಅರಾಜಕತೆಯ ನಿವಾರಣೆಗಾಗಿ ಮಾಡಿದ ವಿಶೇಷ ಕಾಯಿದೆಗಳನ್ನು ಸಮರ್ಥಿಸಿಕೊಂಡರು. ಸ್ವಾತಂತ್ರ್ಯದ ನಂತರ ನಡೆದ ಭೀಕರ ಗಲಭೆಗಳನ್ನು ನೋಡಿದಾಗ ಈ ದೇಶದಲ್ಲಿ ಶಾಂತಿ ನೆಲೆಗೊಳ್ಳುವದು ಸಾಧ್ಯವೆಂದು ಯಾರೂ ನಂಬಿರಲಿಲ್ಲ. ಅದರೆ ಅದೀಗ ಹೋಗಿ ಶಾಂತಿ ನೆಲೆಗೊಂಡಿದೆ. ಶಾಂತಿಗೆ ಗಂಡಾಂತರ ತರುವವರು ಯಾವ ಮೂಲೆಯಲ್ಲೇ ತಲೆಯೆತ್ತಲಿ, ಅವರನ್ನು ಕೂಡಲೆ ಎದುರಿಸಿ ಶಾಂತಿ ರಕ್ಷಣೆ ಮಾಡುವ ಭರವಸೆಯುಂಟಾಗಿದೆಯೆಂದು ಅವರು ಧೈರ್ಯಪಟ್ಟರು. ಹಿಂದುಸ್ತಾನದಂಥ ವಿಶಾಲ ದೇಶದಲ್ಲಿ ಫೆಬ್ರುವರಿ ೧೫ ನೆ ದಿನ ೧೪೦೦೦ ಆರ್. ಎಸ್. ಎಸ್. ಮತ್ತು ೧೬೦೦ ಕಮ್ಯುನಿಸ್ಟ ಸ್ಥಾನಬದ್ಧರು ಮಾತ್ರ ಇದ್ದಾರೆ. ಸರದಾರ ಪಟೇಲರು ಶಾಂತಿ ಭಂಜಕ ಶಕ್ತಿಗಳನ್ನು ಒಂದೊಂದಾಗಿ ಹೆಸರಿಸಿ ಆರ್ ಎಸ್ ಎಸ್, ಅಕಾಲಿದಲ, ಮುಸ್ಲಿಂ ಲೀಗ್ ಮತ್ತು ಕಮ್ಯುನಿಸ್ಟರು ಅಶಾಂತಿಯುಂಟಾಗುವಂತೆ ಮಾಡುವಲ್ಲಿ ವಹಿಸಿದ ಪಾತ್ರವನ್ನು ವಿವೇಚಿಸಿ, ಕಾಯಿದೆ ಮೀರದೆ ಶಾಂತತೆಯಿಂದ ಕಾರ್ಯ ಮಾಡಲು ಯಾರಿಗೂ ಆತಂಕವುಂಟುಮಾಡುವದಿಲ್ಲೆಂದೂ ಆರ್. ಎಸ್. ಎಸ್ ನವರು ಸಾಂಸ್ಕೃತಿಕ ಪುನರುತ್ಥಾನ ಕಾರ್ಯವನ್ನು ಮಾತ್ರ ಮಾಡಲು ಒಪ್ಪಿದರೆ ಅವರ ಮೇಲಿನ ನಿರ್ಬಂಧವನ್ನೂ ತೆಗೆಯಲಡ್ಡಿಯಿಲ್ಲೆಂದೂ ಹೇಳಿದರು. ಅಂತರಿಕ ಶಾಂತಿಯನ್ನು ಕಾಪಾಡಲು ಪ್ರಾಂತಿಕ ಪೋಲೀಸು ಪಡೆಗಳನ್ನೂ ವಿಸ್ತರಿಸುತಿದ್ದು ಕೇಂದ್ರ ಹಾಗು ಪ್ರಾಂತಗಳು ಮಾತ್ರವಲ್ಲ, ಸಂಸ್ಥಾನಗಳೂ ಒಂದೇ ಮಾದರಿಯ ಸುವ್ಯವಸ್ಥಿತ ಅಡಳಿತೆ ಸಾಗಿಸುವಂತೆ ವ್ಯವಸ್ಥೆ ಮಾಡುವ ಯೋಜನೆ ಮಾಡಲಾಗಿದೆಯೆಂದು ತಿಳಿಸಿದರು. ಚರ್ಚೆಗೆ ಉತ್ತರ ಕೊಡುತ್ತ ಇತರ ವಿಚಾರಗಳ ನಡುವೆ, ಸಿಖ ನಾಯಕರಾದ ಮಾಸ್ಟರ ತಾರಾಸಿಂಗರ ಬಂಧನದ ಅಜ್ಞೆಯನ್ನು ತಾವೇ ಹೊರಡಿಸಿದ್ದಾಗಿಯೂ ಬಂಧನಕ್ಕೆ ಅವಕಾಶವೀಯುವ ಅಪರಾಧವನ್ನು ಸ್ವತಃ ತಾವೇ (ಅಂದರೆ ಸರದಾರರೇ) ಮಾಡಿದರೂ ತಮ್ಮ ಬಂಧನಕ್ಕೆ ತಾವೇ ಅಜ್ಞೆ ಹೊರಡಿಸುವದಾಗಿಯೂ ಅವರು ಹೇಳಿದಾಗ ಸಭೆಯಲ್ಲಿ ಹರ್ಷೋದ್ಗಾರಗಳೆದ್ದವು. ಸರಕಾರಿ ನೌಕರರನ್ನು ನಿಷ್ಕಾರಣವಾಗಿ ಟೀಕಿಸುವ ಮನೋವೃತ್ತಿಯನ್ನೂ ಅವರು ಖಂಡಿಸಿದರು.

## ಸಂಸ್ಥಾನ ಶಾಖೆಯ ಅನುಭವ

ಸಂಸ್ಥಾನ ಶಾಖೆಯ ಬೇಡಿಕೆಯ ಚರ್ಚೆಗೆ ಉತ್ತರ ಕೊಡುತ್ತ ಸರದಾರ ಪಟೇಲರು ಸಂಸ್ಥಾನಗಳ ಲೋಕಮಂತ್ರಿಗಳಲ್ಲಿ ಅಧಿಕಾರ ಲಾಲಸೆಯೆ ಹೆಚ್ಚಾಗಿ ಕಾಣಬರುವದಲ್ಲದೆ ಅಡಳಿತ ಸುಧಾರಿಸಿಲ್ಲ. ಅನರಲ್ಲಿ ಸುಧಾರಣೆಯಾಗದಿದ್ದರೆ ಸಂಸ್ಥಾನಗಳನ್ನು ವಿಲೀನಗೊಳಿಸದೆ ಬೇರೆ ಉಪಾಯವಿಲ್ಲದಂತಾಗುವದೆಂದು ಎಚ್ಚರವಿತ್ತರು. ಸಂಸ್ಥಾನಗಳಿಗೆಲ್ಲ ಸಲಹೆಗಾರರ ಅವಶ್ಯಕತೆಯಿದ್ದು ಕೆಲ ಸಂಸ್ಥಾನಗಳ ಪ್ರಜಾಸತ್ತಾತ್ಮಕ ಮಂತ್ರಿಗಳೇ ಇದನ್ನು ವಿರೋಧಿಸುತಿರುವರೆಂದೂ ಅವರ ಮನವೊಲಿಸಲು ತಾವು ಪ್ರಯತ್ನಿಸುವದಾಗಿಯೂ ಅವರು ಹೇಳಿದರು.

ಹೈದರಾಬಾದ ಪ್ರಶ್ನೆಯನ್ನು ಎತ್ತಿ ಅವರು ಆ ಸಮಸ್ಯೆ ತೀರಿಯೆ ಹೋಗಿದೆಯೆಂದೂ ಅದಿನ್ನೀಗ ಯುಕ್ತರಾಷ್ಟ್ರ ಸಂಘ ಕೂಡ ಬದಲಿಸಲಾರದೆಂದೂ ಸಾರಿದರು. ಅಲ್ಲಿನ ಮುಸ್ಲಿಂ ನೌಕರರ ಸಂಖ್ಯೆಯನ್ನು ಕಡಿಮೆ ಮಾಡಲು, ಅನಾವಶ್ಯಕವಾಗಿ ಅವರನ್ನು ಜಾತಿಯ ದೃಷ್ಟಿಯಿಂದ ಹಿಂದಿನವರು ನೌಕರಿಯಲ್ಲಿಟ್ಟುಕೊಂಡದ್ದೇ ಕಾರಣ. ಹೈದರಾಬಾದಿನಲ್ಲಿದ್ದ ೧೩೦೦೦ ಕೈದಿಗಳ ಸಂಖ್ಯೆಯನ್ನೀಗ ೪೦೦೦ ಕ್ಕಿಳಿಸಲಾಗಿದೆ. ಬಿಡುಗಡೆ ಹೊಂದಿದವರಲ್ಲಿ ಕೆಲವರು ಪಾಕಿಸ್ತಾನಕ್ಕೆ ಓಡಿ ಹೋಗಿ ಅಪಪ್ರಚಾರ ಮಾಡುತಿರುವದರಿಂದ ಇನ್ನು ಮುಂದೆ ಬಿಡುಗಡೆಯಲ್ಲಿ ಹೆಚ್ಚು ಎಚ್ಚರಿಕೆ ವಹಿಸಬೇಕಾಗಿದೆ ಎಂದರು.

## ಎರಡು ವರ್ಷಗಳಲ್ಲಿ ಆಹಾರ ಸ್ವಾವಲಂಬನ

ಆಹಾರ ಮಂತ್ರಿ ಜಯರಾಮದಾಸ ದೌಲತರಾಮರು ತಮ್ಮ ಶಾಖೆಯ ಬೇಡಿಕೆಯನ್ನು ಮಂಡಿಸುತ್ತ ಇನ್ನೆರಡು ವರ್ಷಗಳಲ್ಲಿ ದೇಶವನ್ನು ಆಹಾರ ವಿಷಯದಲ್ಲಿ ಸ್ವಾವಲಂಬಿಯಾಗಿ ಮಾಡಲಾಗುವದೆಂದು ಭರವಸೆ ಕೊಟ್ಟರು. ಪ್ರಕೃತಿ ಪ್ರಕೋಪದಿಂದಾಗ ಬಹುದಾದ ಕೊರತೆಗಳನ್ನೆದುರಿಸುವ ಬಗ್ಗೆ ಒಂದು ಕೇಂದ್ರ ಉಗ್ರಾಣವನ್ನು ಸ್ಥಾಪಿಸುವ ಗೋಷ್ಟವಲ್ಲದೆ ಧಾನ್ಯಗಳನ್ನು ವಿದೇಶಗಳಿಂದ ತರಿಸುವದನ್ನು ಆ ಮೇಲೆ ನಿಲ್ಲಿಸಿಬಿಡಲಾಗುವದು ಈ ಬಗ್ಗೆ ಕೈಕೊಳ್ಳಲಿರುವ ಕ್ರಮಗಳನ್ನು ವಿವರಿಸುತ್ತ ಅವರು, ನೀರಿನ ಸೌಕರ್ಯಗಳಿರುವ ಪ್ರದೇಶದಲ್ಲಿ ಬೆಳೆಯ ಪರಿಮಾಣ ಹೆಚ್ಚಿಸುವದು, ೬೦ ಲಕ್ಷ ಎಕರೆ ಪಡಭೂಮಿಗಳನ್ನು ಟ್ರಾಕ್ಟರುಗಳಿಂದ ಸಾಗವಳಿಗೆ ತರುವದು, ಗೊಬ್ಬರ ಪೂರೈಕೆ ಮೊದಲಾದವುಗಳನ್ನುಲ್ಲೇಖಿಸಿದರು. ಕೇಂದ್ರ, ಪ್ರಾಂತಗಳಲ್ಲಿ ಕೃಷಿ ಅಭಿವೃದ್ಧಿ ಮಂಡಲಗಳನ್ನು ಸ್ಥಾಪಿಸಿ ಆರಾರು ತಿಂಗಳಿಗೊಮ್ಮೆ ಪ್ರಗತಿಯನ್ನು ಸಿಂಹಾವಲೋಕಿಸಲಾಗುವದು.

## ಪ್ರಶ್ನೋತ್ತರಗಳು

ಈ ಎರಡು ವಾರಗಳಲ್ಲಿ ಪ್ರಶ್ನೋತ್ತರಗಳಲ್ಲಿ ಹೊರಪಟ್ಟ ಮುಖ್ಯ ವಿಷಯಗಳನ್ನು ಕೆಳಗೆ ಸಂಗ್ರಹಿಸಲಾಗಿದೆ:

- ಭಾರತದಲ್ಲಿ ಪ್ರತಿವರ್ಷ ಹುಳು ಹತ್ತಿ ಮತ್ತು ಇತರ ಕಾರಣಗಳಿಂದ ೩ ಕೋಟಿ ಟನ್ ಆಹಾರ ಧಾನ್ಯಗಳು ನಾಶವಾಗುತ್ತಿವೆ. ಇದನ್ನು ತಡೆಯಲು ೬೩೦೦೦ ರೂಪಾಯಿ ವೆಚ್ಚದ ಒಂದು ಯೋಜನೆ ಸಿದ್ಧವಾಗಿದೆ.
- ಸ್ವೀಡನ್ನಿನ ಒಂದು ಕಂಪನಿಯ ಸಹಾಯದಿಂದ ಒಂದೂವರೆ ಕೋಟಿ ರೂಪಾಯಿಯನ್ನು ವೆಚ್ಚಮಾಡಿ ಒಂದು ಪೆನಿಸಿಲಿನ್ ಔಷಧ ಕಾರಖಾನೆ ಸ್ಥಾಪಿಸಲಾಗುವದು. ಇನ್ನೆರಡು ತಿಂಗಳಲ್ಲೆ ಅದರ ಕೆಲಸ ಪ್ರಾರಂಭವಾಗಬಹುದು.
- ಕಬ್ಬು ಹೆಚ್ಚು ಬೆಳೆಯುವ ಪ್ರದೇಶಗಳಲ್ಲಿ ಬೇರೆ ಬೇರೆ ಪ್ರಾಂತಗಳಲ್ಲಿ ಹೊಸ ಹೊಸ ಸಕ್ಕರೆ ಕಾರಖಾನೆಗಳನ್ನು ಸ್ಥಾಪಿಸಲಾಗುವದು.
- ೧೯೪೭ ಕ್ಕಿಂತ ೧೯೪೮ ರಲ್ಲಿ ಉಪ್ಪಿನ ಉತ್ಪಾದನೆ ೧೦೦ ಕ್ಕೆ ೨೦ ರಷ್ಟು ಹೆಚ್ಚಿದೆ.
- ಪ್ರಾಥಮಿಕ ಶಿಕ್ಷಕರ ಕನಿಷ್ಠ ಸಂಬಳ ಬೇರೆ ಬೇರೆ ಪ್ರಾಂತಗಳಲ್ಲಿ ರೂ. ೧೩ ರಿಂದ ೬೮ ರ ವರೆಗೂ ಇರುವದು. ಕೇಂದ್ರ ಸರಕಾರದ ಸೂಚನೆಯಂತೆ ಕೆಲ ಪ್ರಾಂತಗಳು ಅವರ ಸಂಬಳವನ್ನು ಪುನರ್ವಿಮರ್ಶಿಸಿವೆ. ತರಬೇತಾದ ಪ್ರಾಥಮಿಕ ಶಿಕ್ಷಕರಿಗೆ ಕನಿಷ್ಠ ರೂ. ೪೦ ಮತ್ತು ಮಾಧ್ಯಮಿಕ ಶಾಲೆಗಳಲ್ಲಿನ ತರಬೇತಾದ ಪದವೀಧರರಿಗೆ ರೂ. ೧೫೦ ರಿಂದ ೩೦೦ ಪಗಾರ ಕೊಡಬೇಕೆಂದು ಶೈಕ್ಷಣಿಕ ಯೋಜನಾ ಸಮಿತಿಯವರ ಶಿಫಾರಸು ಇದೆ.
- ೧೯೪೯ ಮಾರ್ಚ ೪ ನೆ ದಿನ ಭಾರತದಲ್ಲಿ ಒಟ್ಟು ೧೧೭೩೪೮ ಲಕ್ಷ ರೂಪಾಯಿ ಬೆಲೆಯ ನೋಟುಗಳು ಚಲಾವಣೆಯಲ್ಲಿದ್ದವು.
- ಗಡಿನಾಡಿನ ಕೆಂಪಂಗಿಯವರು ಕೆಲವರು ಹಿಂದುಸ್ತಾನದೊಡನೆ ಒಳಸಂಚು ಮಾಡಿ ವಾಯವ್ಯ ಗಡಿನಾಡು ಪ್ರಾಂತದ ಮಂತ್ರಿಗಳ ಕೊಲೆಮಾಡಲು ಹೊಂಚುಹಾಕಿದ್ದಾರೆಂದು ಆ ಪ್ರಾಂತದ ಸರಕಾರ ಹೊರಡಿಸಿದ ಹೇಳಿಕೆ ಅಸತ್ಯಪೂರ್ಣವಾಗಿದೆಯೆಂದೂ ಅದು ಹಿಂದ-ಪಾಕ ಸಂಬಂಧಕ್ಕೆ ಘಾತಕವಾಗಿದೆಯೆಂದೂ ಪಾಕಿಸ್ತಾನ ಸರಕಾರಕ್ಕೆ ಉಗ್ರ ಪ್ರತಿಭಟನಾಪತ್ರವನ್ನು ಕಳಿಸಲಾಗಿದೆ.
- ಲಾಯಕ ಅಲ್ಲಿ ಮಂತ್ರಿಮಂಡಲದಲ್ಲಿದ್ದ ನವಾಬ ಫಜಲ ನವಾಜ ಜಂಗ, ಅಬ್ದುಲ ಹಮೀದಖಾನ ಮತ್ತು ರಾಜಾ ಮೋಹನಲಾಲ ಇವರು ಮೂವರ ಬಿಡುಗಡೆ ಮಾಡಲಾಗುವದಿಲ್ಲ.
- ಹಿಂದುಸ್ತಾನದಿಂದ ಪಾಕಿಸ್ತಾನಕ್ಕೆ ಕಳ್ಳತನದಿಂದ ಸಾಗುತಿದ್ದ ೪೪,೩೦,೦೦೦ ರೂಪಾಯಿ ಬೆಲೆಯ ಸರಕನ್ನು ಹಿಡಿಯಲಾಗಿದೆ.
- ಜಮ್ಮು ಕಾಶ್ಮೀರ ಸಂಸ್ಥಾನಗಳಲ್ಲಿ ೧,೯೫,೨೦೦ ಹಿಂದು ಹಾಗು ಸೀಖ ನಿರಾಶ್ರಿತರಿದ್ದಾರೆ. ಅವರಿಗೆ ಸ್ವಸ್ಥಾನಗಳಲ್ಲಿ ನೆಲಸಲು ಸಹಾಯ ಮಾಡಲಾಗುತ್ತಿದೆ.

---

ಮುಂಬಯಿ ಪ್ರಾಂತದಲ್ಲಿ ೧೯೩೮ ರಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ೧೨೬೦೦೦೦ ರೂಪಾಯಿ ವೆಚ್ಚವಾಗಿದ್ದರೆ ಈಗ ಆ ವೆಚ್ಚ ೫೯೬೦೦೦೦ ರೂಪಾಯಿಗಳಷ್ಟಾಗುವದು ಎಂದು ಶಿಕ್ಷಣ ಮಂತ್ರಿಗಳು ಶಾಸನ ಸಭೆಯಲ್ಲಿ ಹೇಳಿದರು.

# ಹಿಂದಿ ಅಥವಾ ಹಿಂದುಸ್ತಾನಿಯೆ ಏಕೆ?

## ಸಮೃದ್ಧತೆಯೂ ಅಲ್ಲ ಸರಳತೆಯೂ ಅಲ್ಲ ಅನುಕೂಲತೆಯೆ ಅದರ ಸ್ಥಾನಮಾನಕ್ಕೆ ಕಾರಣ

### ಆಚಾರ್ಯ ವಿನೋಬಾ ಭಾವೆಯವರ ಮನನೀಯ ವಿಚಾರಗಳು

ರಾಷ್ಟ್ರಭಾಷೆಯ ಲಿಪಿ, ಹೆಸರು, ಸ್ವರೂಪಗಳನ್ನು ಕುರಿತು ದೇಶದಲ್ಲಿ ಉದ್ರಿಕ್ತವಾದ ವಾದವಿವಾದಗಳು ಎದ್ದಿವೆಯೆಂದು ಎಲ್ಲರಿಗೂ ಗೊತ್ತು. ಪಂ. ನೆಹರೂ ಅವರಂಥವರು ಕೂಡ ಈ ಚರ್ಚೆಯಲ್ಲಿ ಸೆಳೆಯಲ್ಪಟ್ಟಿದ್ದಾರೆ. ಆಚೆಯ ವಾರ "ಹರಿಜನ" ಸಂಪಾದಕರಾದ ಶ್ರೀ ಕಿಶೋರಿಲಾಲರು ನೆಹರೂ, ಸರದಾರ ಪಟೇಲ, ರಾಜೇಂದ್ರಬಾಬು ಇವರೆಲ್ಲರ ಕಡೆಗೆ ಈ ಪ್ರಶ್ನೆಯ ಮಧ್ಯಸ್ಥಿಯನ್ನೊಪ್ಪಿಸಬೇಕೆಂದು ವಾದಿಸಿದ್ದರು. ಇಲ್ಲಿ ಕೊಟ್ಟಿರುವದು ಗಾಂಧೀಜಿಯವರ ಶಿಷ್ಯಶ್ರೇಷ್ಠರಾದ ಶ್ರೀ ವಿನೋಬಾ ಭಾವೆಯವರು ವರ್ಧಾದಲ್ಲಿ ತಾ. ೨೬ ಫೆಬ್ರುವರಿಗೆ ಕೂಡಿದ ರಾಷ್ಟ್ರಭಾಷಾ ಪ್ರಚಾರಕ ಸಮ್ಮೇಲನದಲ್ಲಿ ಮಾಡಿದ ಭಾಷಣ.

ರಾಷ್ಟ್ರಭಾಷೆಯ ವಿಷಯದಲ್ಲಿ ನಾನು ಯಾವದೊಂದು ಛಲವಾದವನ್ನಿಟ್ಟುಕೊಂಡಿಲ್ಲವೆಂದು ಮೊದಲೇ ಹೇಳಿಬಿಡುತ್ತೇನೆ. ರಾಷ್ಟ್ರಭಾಷೆಯ ಪ್ರಶ್ನೆ ಜನತೆಗೆ ಸೇರಿದ್ದು. ಅದು ಅನವರತ ರೂಢಿಯಿಂದ ರೂಪುಗೊಳ್ಳುತ್ತದೆ. ಆದುದರಿಂದ ನಮ್ಮ ರಾಷ್ಟ್ರಭಾಷೆ ಯಾವ ರೂಪವನ್ನು ಪಡೆಯುವದೆಂಬ ಮಾತನ್ನು ಭವಿಷ್ಯತ್ತೇ ನಿರ್ಣಯಿಸಬಲ್ಲದು. ಹಿಂದೀ-ಹಿಂದುಸ್ತಾನಿಗಳೆರಡರ ಅನುಯಾಯಿಗಳೂ ಒಮ್ಮತಕ್ಕೆ ಬಂದು ರಾಷ್ಟ್ರದ ಮುಂದೆ ಅವಿರೋಧವಾದ ನಿರ್ಣಯವನ್ನು ಮಂಡಿಸಬೇಕೆಂದು ನನ್ನ ಅಭಿಪ್ರಾಯ. ಈ ಪ್ರಶ್ನೆಯ ಮೇಲೆ ಉಗ್ರ ವಿವಾದಾತ್ಮಕ ಚರ್ಚೆಗಳಾಗುತ್ತಿರುವದು ಶೋಚನೀಯವಾಗಿದೆ. ನಮಗೊಂದು ರಾಷ್ಟ್ರಭಾಷೆಯಾದರೂ ಏಕೆ ಬೇಕೆಂಬುದನ್ನು ಮೊದಲು ವಿಚಾರಿಸೋಣ. ಇಷ್ಟು ಪ್ರಚಂಡ ಜನವಸತಿಯುಳ್ಳ ವಿಸ್ತಾರವಾದ ದೇಶದಲ್ಲಿ ನಾವು ಐಕ್ಯವನ್ನು ಸ್ಥಾಪಿಸಬಯಸುವೆವಾದುದರಿಂದಲೇ ಅದು ಬೇಕಾಗಿದೆಯೆಂಬುದು ಸ್ವಯಂವೇದ್ಯ. ಅಂದ ಮೇಲೆ ಐಕ್ಯಸಾಧಕವಾದ ರಾಷ್ಟ್ರಭಾಷೆಯ ಮೇಲೆ ಇಷ್ಟು ಹೋರಾಟವೇಕೆ? ಈ ವಿಷಯದಲ್ಲಿ ಜನರಲ್ಲಿ ಭಿನ್ನಾಭಿಪ್ರಾಯಗಳಿರುವದೊಂದು ವಿಚಿತ್ರವಲ್ಲ. ಆದರೆ ಆ ಭಿನ್ನಾಭಿಪ್ರಾಯಗಳಿಂದುಂಟಾಗುವ ಮನಃಕಷಾಯ ಮಾತ್ರ ತುಂಬ ವಿಷಾದಕರವೇ ಸರಿ.

#### ಸಮೃದ್ಧಿಯಲ್ಲ

ಅದು ಹಿಂದಿಯಿರಲಿ ಹಿಂದುಸ್ತಾನಿಯೇ ಇರಲಿ- ನಮ್ಮ ರಾಷ್ಟ್ರಭಾಷೆಯ ಹೆಗ್ಗಳಿಕೆಯೇನು? ಹಿಂದಿಯನ್ನು ನಾವು ನಮ್ಮ ರಾಷ್ಟ್ರಭಾಷೆಯೆಂದೇಕೆ ಭಾವಿಸುತ್ತೇವೆ? ಹಿಂದಿ-ಇತರ ಭಾಷೆಗಳಿಗಿಂತ ಹೆಚ್ಚು ಸಮೃದ್ಧವಾಗಿದೆಯೆಂದೆ? ಅಂಥ ಹೆಗ್ಗಳಿಕೆಯನ್ನು ಹಿಂದಿಯ ಪರವಾಗಿ ನಾವು ಹೇಳಿಕೊಳ್ಳುವಹಾಗಿಲ್ಲ, ಆ ಹೆಗ್ಗಳಿಕೆ ಇರಲೂ ಎಡೆಯಿಲ್ಲ. ಬಂಗಾಲಿಗಳು ತಮ್ಮ ಭಾಷೆ ಹಿಂದಿಯಷ್ಟೇ, ಏಕೆ, ಅದಕ್ಕಿಂತಲೂ ಸಮೃದ್ಧವಾದ ಭಾಷೆಯೆಂದು ಹೇಳಿಕೊಳ್ಳುತ್ತಾರೆ- ಅವರ ಹೆಗ್ಗಳಿಕೆಯಲ್ಲಿ ಸತ್ಯವೂ ಇದೆಯೆಂದು ತೋರುತ್ತದೆ. ತಮಿಳು ಸಾಹಿತ್ಯ ಎರಡು ಸಾವಿರ ವರ್ಷಕ್ಕೆ ಪ್ರಾಚೀನವಾಗಿದೆ. ಎರಡು ಸಾವಿರ ಹತ್ತಿರ ಹತ್ತಿರವಾಗುವಷ್ಟು ಧಾತುಗಳ ಯಾದಿ ಕನ್ನಡ ಭಾಷೆಯಲ್ಲಿರುವದು ನನಗೆ ಗೊತ್ತಿದೆ. ಇದೂ ಅಲ್ಲದೆ ಸಂಸ್ಕೃತ ಭಾಷೆಯ ಎಲ್ಲ ಧಾತುಗಳನ್ನೂ ಅರಗಿಸಿಕೊಂಡು ಗದ್ಯಪದ್ಯಗಳೆರಡರಲ್ಲೂ ಅವನ್ನು ನಿರಾಯಾಸವಾಗಿ ಉಪಯೋಗಿಸಿಕೊಳ್ಳುವ ಶಕ್ತಿ ಕನ್ನಡದಲ್ಲಿದೆ. ಕನ್ನಡದಲ್ಲಿ "ನಾನು ಧ್ಯಾನಿಸುತ್ತೇನೆ" ಎಂದು ಸಹಜವಾಗಿ ಹೇಳಬಹುದು. ಆದರೆ ಹಿಂದಿಯಲ್ಲಾಗಲಿ ಮರಾಠಿಯಲ್ಲಾಗಲಿ ಅದು ಸಾಧ್ಯವಿಲ್ಲ. ಅವೆರಡರಲ್ಲೂ "ನಾನು ಧ್ಯಾನ ಮಾಡುತ್ತೇನೆ" ಎಂದು ವಿಂಗಡವಾಗಿಯೆ ಹೇಳಬೇಕಾಗುತ್ತದೆ. ("ಮೈಂ ಧ್ಯಾನತಾ ಹೂಂ" ಎನ್ನದೆ "ಮೈಂ ಧ್ಯಾನ ಕರತಾ ಹೂಂ" ಎನ್ನಬೇಕಾಗುವದು.) ಅದೇ ಪ್ರಕಾರ ಸ್ನೇಹಿಸು, ದ್ವೇಷಿಸು ಎಂದು ಕನ್ನಡದಲ್ಲಿ ಹೇಳಬಹುದಾದರೆ ಉಳಿದೆರಡು ಭಾಷೆಗಳಲ್ಲಿ "ಸ್ನೇಹ ಮಾಡು", "ದ್ವೇಷ ಮಾಡು" (ಸ್ನೇಹ ಕರನಾ, ದ್ವೇಷ ಕರನಾ), ಎಂದೇ ಹೇಳಬೇಕಾಗುತ್ತದೆ. ಸಂಸ್ಕೃತ ವಾಕ್ಯಗಳ ವಾಕ್ಯರಚನೆಯನ್ನು ಬದಲಿಸದೆ ಇದ್ದಕ್ಕಿದ್ದಂತೆ ಕನ್ನಡದಲ್ಲಿಳಿಸಬಹುದು. ತೆಲುಗು ಭಾಷೆಗೂ ಇದೇ ಮಾತು ಅನ್ವಯಿಸುತ್ತದೆ. ಕನ್ನಡದ ಸಾವಿರಗಟ್ಟಳೆ ಧಾತುಗಳೂ ಎಲ್ಲ ಸಂಸ್ಕೃತ ಧಾತುಗಳನ್ನು ಸುಲಭವಾಗಿ ಉಪಯೋಗಿಸಿಕೊಳ್ಳುವ ಸಾಮರ್ಥ್ಯವೂ ಉಳ್ಳ ಭಾಷೆ ತಾನು ಸಮೃದ್ಧ ಭಾಷೆಯೆಂದು ಹೇಳಿಕೊಂಡರೆ ತಪ್ಪೇನು?

#### ಸೌಲಭ್ಯವಲ್ಲ

ಇನ್ನು, ಇತರ ಭಾಷೆಗಳಿಗಿಂತ ಕಲಿಯಲು ಅದು ಸುಲಭವೆಂದು ಹೇಳಬಹುದೆ? ಅದು ಮರಾಠಿಗಿಂತ ಸುಲಭವಾಗಿದ್ದರೂ ತೀರ ಸುಲಭವೆಂದು ಹೇಳುವದು ಸರಿಯಾಗದು. ವ್ಯಾಕರಣದೃಷ್ಟಿಯಿಂದ ಹಿಂದಿಗಿಂತ ಬಂಗಾಲಿಯು ಎಷ್ಟೊ ಸುಲಭ. ಬಂಗಾಲಿಯಲ್ಲಿ ಧಾತುಗಳು ಲಿಂಗಭೇದದಿಂದ ಬದಲಾಗುವದಿಲ್ಲ. ಹಿಂದೀ ವ್ಯಾಕರಣವನ್ನು ಕಲಿಯಲು ಏಳು ದಿನ ಹಿಡಿದರೆ ಬಂಗಾಲಿಯದನ್ನು ಕಲಿಯಲು ಒಂದೇ ದಿನ ಸಾಕು. ದಕ್ಷಿಣ ಭಾರತದ ಭಾಷೆಗಳಲ್ಲಿ ಮಲೆಯಾಳಿಯ ಕ್ರಿಯಾಪದಗಳ ಬಳಕೆ ಬಹಳ ಸರಳವಾಗಿದೆ. ವರ್ತಮಾನ ಭೂತ, ಭವಿಷ್ಯತ್ ಕಾಲ ಭೇದಗಳಿಂದಾಗಲಿ ಲಿಂಗಭೇದದಿಂದಾಗಲಿ ಅದರ ಕ್ರಿಯಾಪದಗಳ ರೂಪ ಮಾರ್ಪಡುವದಿಲ್ಲ. ದಕ್ಷಿಣ ಭಾರತದ ಯಾವ ಭಾಷೆಯಲ್ಲಿಯೂ ಲಿಂಗವೃತ್ತಿ ಜಟಿಲವಾಗಿಲ್ಲ. ಪ್ರಾಣಿಗಳಲ್ಲಿ ಹೆಣ್ಣುಗಳಿಗೆಲ್ಲ ಸ್ತ್ರೀಲಿಂಗ, ಗಂಡುಗಳಿಗೆಲ್ಲ ಪುಲ್ಲಿಂಗವಿದ್ದರೆ ಉಳಿದೆಲ್ಲ ನಾಮಪದಗಳು ನಪುಂಸಕಲಿಂಗಕ್ಕೇ ಸೇರುವವು. ಆದರೆ ಹಿಂದಿಯಲ್ಲೊ, "ಪತ್ಥರ" (ಕಲ್ಲು) ಪುಲ್ಲಿಂಗ, ಆದರೆ ಕಲ್ಲಿನಿಂದ ಮಾಡಿದ "ದೀವಾಲ" (ಗೋಡೆ) ಕ್ಕೆ ಸ್ತ್ರೀಲಿಂಗ ಇದೆಲ್ಲ ದಕ್ಷಿಣ ಭಾರತದ ಜನರಿಗೆ ತುಂಬ ವಿಚಿತ್ರವೆಂದು ಭಾಸವಾಗುತ್ತದೆ. ಅದರಿಂದ ಅವರು ಹಿಂದಿ ಕಠಿನವೆಂದು ಬಗೆಯುತ್ತಾರೆ.

ಹಾಗಾದರೆ ಹಿಂದಿಯ ಹೆಗ್ಗಳಿಕೆಯೇನೆಂದು ನಮ್ಮ ಹೇಳಿಕೆ? ಅದು ಹದಿನೈದು ಕೋಟಿ ಜನರ ಮಾತೃಭಾಷೆಯೆಂಬುದೇ. ಅದು ಅಲ್ಲದೆ, ಎಂಟು ಹತ್ತು ಕೋಟಿ ಜನರಿಗೆ ಅದು ಸಹಜವಾಗಿ ಅರ್ಥವಾಗುತ್ತದೆ. ಉಳಿದ ಆರೆಂಟು ಕೋಟಿ ಜನರಿಗೆ ಅದು ಸ್ವಲ್ಪ ಕಷ್ಟವೆನಿಸಿದರೂ ತುಸು ಪ್ರಯತ್ನದಿಂದ ಅದನ್ನು ಕಲಿಯಬಹುದು. ಆದುದರಿಂದ ಅತಿ ಕಡಿಮೆ ಪ್ರಯತ್ನದಿಂದ ತಾನು ರಾಷ್ಟ್ರಭಾಷೆಯಾದೇನೆಂಬುದೊಂದೇ ಹಿಂದಿಯ ನಮ್ರ ಅಭಿಮಾನ. ಹಿಂದಿಯ ಪರವಾದ ಅಭಿಮಾನವನ್ನು ಹೀಗೆ ನಯವಾಗಿ ಹೇಳಿಕೊಳ್ಳುವ ನಾವು ಅದರ ನಾಮರೂಪಗಳ ಬಗ್ಗೆ ಇಷ್ಟು ಜಗಳಾಡುವದು ಒಳಿತಲ್ಲ. ನಾಮರೂಪಗಳ ಬಗ್ಗೆ ಇಷ್ಟೆಲ್ಲ ತೀಕ್ಷ್ಣ ಮತಭೇದಗಳಾದರೂ ಏಕೆ? ಹಿಂದಿಗೂ ಹಿಂದುಸ್ತಾನಿಗೂ ಅಂಥ ಭೇದವಿಲ್ಲ. ಆದುದರಿಂದ ನಾನು ಹೆಸರನ್ನು ಕುರಿತು ಇಲ್ಲಿ ವಾದಕ್ಕಿಳಿಯುವದಿಲ್ಲ. ಆದರೆ ರಾಷ್ಟ್ರಭಾಷೆಯ ರೂಪದ ಬಗ್ಗೆ ನನ್ನಲ್ಲಿ ನನ್ನವೇ ವಿಚಾರಗಳಿವೆ. ಅವನ್ನು ಇದೇ ಈಗ ನಿಮ್ಮ ಮುಂದಿರಿಸುತ್ತೇನೆ. ಈ ವಿಚಾರದಲ್ಲಿ ಕೂಡ ನನ್ನ ಛಲವಿಲ್ಲ. ಅಂದಾಕ್ಷಣ ವಿರೋಧಿಗಳ ಹೇಳಿಕೆಯೆಲ್ಲ ನನಗೆ ಒಪ್ಪಿಗೆಯೆಂದರ್ಥವಲ್ಲ. ಆದರೆ ನಾನು ಛಲ ಹಿಡಿಯದಿರಲು ಕಾರಣವೆಂದರೆ, ಹಿಂದಿಯ ರೂಪವನ್ನು ನಿರ್ಣಯಿಸುವವರು ನೀವೂ ಅಲ್ಲ ನಾನೂ ಅಲ್ಲ. ಅನವರತ ರೂಢಿಯೇ ನಿರ್ಣಾಯಕ ಹೇತು.

#### ಭಾಷೆಯ ರೂಪ

ಹಿಂದಿಯ ರೂಪವನ್ನು ಕುರಿತು ನನ್ನನ್ನು ಕೇಳಿದರೆ, ಅದು ಸಂಸ್ಕೃತ, ಅರಬ್ಬಿ ಅಥವಾ ಪರ್ಶಿಯನ್ ಶಬ್ದಗಳನ್ನು ಬಹಿಷ್ಕರಿಸಲೂ ಕೂಡದು, ಅವುಗಳಿಂದಲೇ ಕಿಕ್ಕಿರಿದು ಹೋಗುವದೂ ಸಲ್ಲದು. ಈಗಾಗಲೆ ಭಾಷೆಯೊಳಗೆ ಬೆರೆತು ಹೋಗಿರುವ ಅಥವಾ ಸುಲಭವಾಗಿ ಬೆರಸಬಹುದಾದ ಮತ್ತು ಆ ಮೂಲಕ ಭಾಷೆಯಲ್ಲಿ ಐಕ್ಯಹೊಂದಬಹುದಾದ ಶಬ್ದಗಳನ್ನು ಅಂಗೀಕರಿಸಬೇಕು ನಮ್ಮ ರಾಷ್ಟ್ರಭಾಷೆ ಸಾಗರದಂತಿರಬೇಕಲ್ಲದೆ ಇಕ್ಕಟ್ಟಾದ ನದಿಯಂತಲ್ಲ. ಪ್ರಾಂತಿಕಭಾಷೆಗಳು ನದಿಗಳಂತಿವೆ; ಅವುಗಳ ಪ್ರವಾಹ ಬೇರೆ ಬೇರೆ ದಿಕ್ಕುಗಳಲ್ಲಿ ಹರಿಯುವವು. ನಮ್ಮ ರಾಷ್ಟ್ರಭಾಷೆ ಹಲ ಬಗೆಯ ಅಂತಃಪ್ರವಾಹಗಳಿಗೆ ಆಶ್ರಯವಾಗುವಷ್ಟು ವಿಸ್ತಾರವಾದ ಸಾಗರದಂತಾಗಬೇಕು. ಬೇರೆ ಬೇರೆ ಪ್ರಾಂತಿಕ ಭಾಷೆಗಳಿಂದ ಬಂದ ಹಲವು ಶಬ್ದಗಳನ್ನೂ ವಿವಿಧ ವೈಯಾಕರಣ ರಚನೆಗಳನ್ನೂ ಅದು ಒಳಗೊಂಡಿರಬೇಕು. ಲಿಂಗಗಳನ್ನು ಕುರಿತ ನಿಯಮಗಳು ಸುಲಭವಾಗಿ ತಿಳಿಯುವಂತೆ ಮಾಡಬೇಕು. ಅನೇಕ ಶಬ್ದಗಳನ್ನು ಉಭಯಲಿಂಗಿಗಳೆಂದು ಒಪ್ಪಿಕೊಳ್ಳಬೇಕು. ಹಿಂದಿಯ ಸ್ವರೂಪವನ್ನು ಸಾಗರದಂತೆ ಅಪಾರವಾಗಿ ಮಾಡಬೇಕೆಂದು ನಾನು ಹೇಳಿದ್ದನ್ನೊಪ್ಪಿದರೆ ಭಾಷಾಶುದ್ಧಿ ಕೆಡಬಹುದೆಂದು ಕೆಲವರು ಭಯಪಡುತ್ತಾರೆ. ಆದರೆ ಹಿಂದಿ ನದಿಯಂತೆ ತನ್ನ ಪಾರಿಶುದ್ಧ್ಯವನ್ನು ಕಾಯ್ದುಕೊಳ್ಳಬಯಸುತ್ತಿದ್ದರೆ ಅದು ಪ್ರಾಂತಿಕ ಭಾಷೆಯಾಗಿ ಉಳಿಯುವದು ಕ್ರಮಪ್ರಾಪ್ತವಾದೀತು. ಅಂದ ಮೇಲೆ ಭಯವೇಕೆ? ಸಮುದ್ರವು ನದಿಗಳಿಗೆ ಭಯಪಟ್ಟರೆ ಹೇಗೆ? ಬರಿಹಳ್ಳವಾದರೆ ಹೊಳೆಯ ಭಯಕ್ಕೊಳಗಾಗುವದು ಸರಿ. ಈ ಭಯ ಕೂಡ ನಿರರ್ಥಕವೆ. ಏಕೆಂದರೆ ಹೇಗಾದರೂ ಹೊಳೆಯ ಪ್ರವಾಹದಲ್ಲಿ ಅದು ಲೀನವಾಗಲೇಬೇಕಾಗುವದು. ಆದುದರಿಂದ ಅನ್ಯಭಾಷೆಗಳಿಂದ ಬಂದ ಎಷ್ಟು ಶಬ್ದಗಳನ್ನು ಬೇಕಾದರೂ ಹಿಂದಿ ಸಂತೋಷದಿಂದ ಸ್ವೀಕರಿಸಬೇಕು,—ಆದರೆ ಆ ವಿಶಿಷ್ಟ ಶಬ್ದಗಳು ಹಿಂದಿಗೆ ಹೊಂದಿಕೆಯಾಗಿ ಕೂಡಿಕೊಳ್ಳಬಲ್ಲವೊ ಇಲ್ಲವೊ ಎಂಬುದನ್ನು ವಿವೇಕದಿಂದ ನಿರ್ಧರಿಸಬೇಕೆಂದು ನಾನು ಒಪ್ಪುವೆ. ಅಂಥ ವಿವೇಕಕ್ಕೊಳಪಟ್ಟು ನಾವು ಸಂಸ್ಕೃತ, ಅರಬ್ಬಿ ಮತ್ತು ಪರ್ಶಿಯನ್ ಭಾಷೆಗಳಿಂದ ಸುಲಭ ಶಬ್ದಗಳನ್ನು ಮಾತ್ರವಲ್ಲ, ಪ್ರಾಂತಿಕ ಭಾಷೆಗಳಿಂದಲೂ ಅಂಥವನ್ನು ಅಂಗೀಕರಿಸಬೇಕು. ದಿಲ್ಲಿಯಲ್ಲಿ ಹಿಂದೀ ಭಾಷಣಗಳನ್ನು ಮಾಡುವಾಗ ನಾನು "ಶಿಸ್ತು" ಎಂಬ ಪದವನ್ನು ಪಯೋಗಿಸುತ್ತಿರುತ್ತೇನೆ. ಅದಕ್ಕಿಂತ ಉಚಿತವಾದ ಶಬ್ದ ಹಿಂದಿಯಲ್ಲಿ ನನಗೆ ಸಿಗಲಿಲ್ಲ. "ಶಿಸ್ತು" ಶಬ್ದ ಮರಾಠಿಯದೆಂದು ನಂಬಲಾಗಿದೆ. ಅದು ಮೊಟ್ಟಮೊದಲು ಎಲ್ಲಿಂದ ಬಂತೋ ಗೊತ್ತಿಲ್ಲ. ಆದರೆ ನನ್ನ ಭಾಷಣ ಕೇಳುವವರಿಗೆ ಅದು ತಿಳಿಯುತ್ತದೆ. ಹಿಂದಿಯನ್ನು ರಾಷ್ಟ್ರಭಾಷೆಯಾಗಿ ಮಾಡಬೇಕೆಂದು ನಮ್ಮ ಅಭಿಮತವಿದ್ದರೆ ಮಡಿವಂತಿಕೆ ಹಚ್ಚಿಕೊಂಡು ಫಲವಿಲ್ಲ. ಇತರ ಭಾಷೆಗಳಿಂದ ಅನೇಕ ಶಬ್ದಗಳನ್ನು ಒಳಪಡಿಸಿಕೊಂಡ ಮೇಲೂ ಬಹುತರ ಶಬ್ದಗಳನ್ನು ನಾವು ಸಂಸ್ಕೃತದಿಂದಲೇ ತೆಗೆದುಕೊಳ್ಳಬೇಕಾಗುವದು. ಸಂಸ್ಕೃತ ಭಾಷೆಯಲ್ಲಿ ನನಗೆ ತುಂಬ ಆದರ; ಡಾಕ್ಟರ ಕಟಜು ಅವರು ಸಂಸ್ಕೃತವೇ ರಾಷ್ಟ್ರಭಾಷೆಯಾಗಬೇಕೆಂದು ಒತ್ತಾಯಪಡಿಸುವಾಗ ರೂಪಾಯಿಯಲ್ಲಿ ಏಳಾಣೆಯ ವರೆಗೂ ನಮ್ಮ ಮನಸು ಅತ್ತ ಒಲೆಯುತ್ತದೆ. ಒಂಬತ್ತಾಣೆಯಷ್ಟು ಒಲೆಯದಿರಲು ಕಾರಣವೆಂದರೆ, ಅದು ಅಸಾಧ್ಯ ಪ್ರಮೇಯವೆಂಬ ಅರಿವೇ. ನಮ್ಮ ಪಾರಿಭಾಷಿಕ ಶಬ್ದಾವಲಿ ಮುಖ್ಯವಾಗಿ ಸಂಸ್ಕೃತವನ್ನೇ ಆಧರಿಸುವದೆಂಬುದು ನಿಸ್ಸಂಶಯ. ಅಂದೊಡನೆ ಪರ್ಶಿಯನ್ ಅಥವಾ ಮತ್ತಾವ ಭಾಷೆಗಳಿಂದ ಸುಲಭ ಶಬ್ದಗಳು ದೊರೆಯುತ್ತಿದ್ದರೆ ಅವನ್ನು ತೆಗೆದುಕೊಳ್ಳಬಾರದೆಂದಲ್ಲ. ಸಂತ ತುಲಸೀದಾಸಜಿಯವರ ಉದಾಹರಣೆಯನ್ನು ಈ ಸಂಬಂಧದಲ್ಲಿ ಅನುಸರಿಸುವದು ಒಳ್ಳೇದು. ಅವರು ತಮ್ಮ ರಾಮಾಯಣದಲ್ಲಿ ಸಾವಿರಾರು ಸಂಸ್ಕೃತ ಶಬ್ದಗಳನ್ನು ಬಳಸಿದ್ದಾರೆ. ಆದರೂ ಅದರಲ್ಲಿ ಅವರು ಕೌಶಲದಿಂದ ಸರಳ ಶಬ್ದಗಳನ್ನು ಆರಿಸಿ ಅಳವಡಿಸಿಕೊಂಡಿದ್ದಾರೆ. ಅದೇ ಪ್ರಕಾರ ನಾವೂ ಸಂಸ್ಕೃತ ಅರಬ್ಬಿ, ಪರ್ಶಿಯನ್ ಮತ್ತು ಇತರ ಪ್ರಾಂತಿಕ ಭಾಷೆಗಳಿಂದ ಸರಳ ಶಬ್ದಗಳನ್ನು ಆರಿಸಿಕೊಳ್ಳಬೇಕು. "ಕೇಸರಿ" ಯಲ್ಲಿ ಬರೆಯುತ್ತಿದ್ದಾಗ ತಿಲಕ ಮಹಾರಾಜರಿಗೆ, ಅನೇಕ ಹೊಸ ಶಬ್ದಗಳನ್ನು ನಿಷ್ಪನ್ನ ಮಾಡಿಕೊಳ್ಳುವ ಅವಶ್ಯಕತೆ ಬಿತ್ತು. ಅಧಿಕಾರಿ ವರ್ಗದ ಸತ್ತೆ (ಬ್ಯೂರಾಕ್ರಸಿ) ಎಂಬರ್ಥದಲ್ಲಿ ಅವರು ನೋಕರಶಾಹಿ ಎಂಬ ಶಬ್ದವನ್ನು ನಿರ್ಮಿಸಿಕೊಂಡರು. ಆ ಶಬ್ದ ಸಂಸ್ಕೃತವೂ ಅಲ್ಲ, ಮರಾಠಿಯೂ ಅಲ್ಲ. ಒಂದು ರೀತಿಯಲ್ಲಿ ಅದು ಉರ್ದೂ ಶಬ್ದವೆಂದೇ ಹೇಳಬೇಕು. ತಿಲಕ ಮಹಾರಾಜರಿಗೆ ಅದೃಷ್ಟವಶಾತ್ ಅದು ಸಿಕ್ಕಿತು- ಅಂದಿನಿಂದ ಅದು ದೇಶದಲ್ಲೆಲ್ಲ ಮನನಮಾತಾಗಿ ಬಿಟ್ಟಿದೆ. ಅದೇ ಪ್ರಕಾರ ಸ್ವರಾಜ್ಯ ಸಿದ್ಧಿಗೆ ತುಂಬ ಸಹಾಯ ಮಾಡಿದ ಅವರ ಪ್ರಸಿದ್ಧ ಮಂತ್ರವಾದ— "ಸ್ವರಾಜ್ಯ ಹಾ ಮಾಝಾ ಜನ್ಮಸಿದ್ಧ ಹಕ್ಕ ಆಹೇ" ಎಂಬುದರಲ್ಲಿ ಅವರು "ಹಕ್ಕ" ಎಂಬ, ಕುರಾನಿನಲ್ಲಿ ಬಹಳವಾಗಿ ಬಳಸಲ್ಪಟ್ಟ ಅರಬ್ಬೀ ಶಬ್ದವನ್ನು "ಜನ್ಮಸಿದ್ಧ" ಎಂಬ ಸಂಸ್ಕೃತ ಪದದ ಜತೆಗೆ ಇಟ್ಟರು. ತಿಲಕ ಮಹಾರಾಜರು ದೊಡ್ಡ ಸಂಸ್ಕೃತ ವಿದ್ವಾಂಸರು, ದೇಶಾಭಿಮಾನಿಗಳು, ಭಾಷೆಯ ಮೇಲೆ ಪ್ರಭುತ್ವವಿದ್ದವರು. ಆದರೂ ಭಿನ್ನ ಮೂಲವಾದ ಈ ಎರಡು ಶಬ್ದಗಳನ್ನು ಸಮಸ್ತವಾಗಿಡುವುದರಿಂದ ಭಾಷಾಸಂಕರವಾದೀತೆಂದು ಅವರು ಬಗೆಯಲಿಲ್ಲ. ಆ ಮಹಾಮಂತ್ರ ಇಡಿ ದೇಶದಲ್ಲಿ ಹಬ್ಬಿತು. ಸರಳ ಸುಲಭ ಶಬ್ದಗಳನ್ನು ವಿವೇಕದಿಂದ ಇತರ ಭಾಷೆಗಳಿಂದ ಸೇರಿಸಿಕೊಂಡರೆ ರಾಷ್ಟ್ರಭಾಷೆಯೆಂದು ಹಿಂದಿ ಹೆಚ್ಚು ಸಮೃದ್ಧವಾಗುವದೆಂದು ಇದರಿಂದ ಸಿದ್ಧವಾಗುತ್ತದೆ.

(ಅಪೂರ್ಣ)



ಆಚಾರ್ಯ ವಿನೋಬಾ ಅವರು

---

ಮಿರಜೆಯ ಪ್ರಾಥಮಿಕ ಶಾಲೆಗಳೆಲ್ಲ ಎಪ್ರಿಲ ಒಂದರಿಂದ ಸರಕಾರದ ವಶಕ್ಕೆ ಹೋಗುವವು.

# ನಮ್ಮ ೧೪ ಲಕ್ಷ ತಿರುಕರನ್ನು ಏನು ಮಾಡಬೇಕು?

## ಜಾಣಬುದ್ಧಿಯನ್ನು ಬದಲಿಸುವ ಆವಶ್ಯಕತೆ

ಭಾರತದಲ್ಲಿ ಪ್ರತಿ ೩೦೦ ಜನರಲ್ಲಿ ಒಬ್ಬನು ಭಿಕ್ಷುಕ. ಒಟ್ಟು ೧೪ ಲಕ್ಷ ಜನರು ಈ ದೇಶದಲ್ಲಿ ಅನ್ಯರು ಗಳಿಸಿದ್ದರ ಮೇಲೆ ಜೀವನ ಮಾಡುತ್ತಾರೆ. ಸಾಧು-ಬೈರಾಗಿಗಳೆಂದು, ಕುಂಟ ಕುರುಡರೆಂದು ರೋಗಿಗಳೆಂದು ತಂತ ತಂತಗಳನ್ನು ನಾವು ಬೆಳೆಸುತ್ತಿದ್ದೇವೆ. ಅವರಲ್ಲಿ ಹಲವರು ಅದನ್ನು ತಮ್ಮ ಜಾತಿಧರ್ಮ, ಇನ್ನು ಕೆಲವರು ಹಕ್ಕೆಂದು ಬಗೆದಿದ್ದರೆ, ಇನ್ನು ಹಲವರು ಭಿಕ್ಷುಕಸಂಘಗಳನ್ನೇ ಸ್ಥಾಪಿಸಿ, ಬೇಡುವವರು ಗಳಿಸಿದ್ದರಲ್ಲಿ ಪಾಲು ಪಡೆದು ಜೀವಿಸುತ್ತಾರೆಂದು ಕೇಳಿ ನೀವು ಆಶ್ಚರ್ಯಪಡಬಹುದು.

ಇದರಿಂದ ದೇಶದ ಆರ್ಥಿಕ ಪರಿಸ್ಥಿತಿಯ ಮೇಲಾಗುವ ದುಷ್ಪರಿಣಾಮವನ್ನು ಬದಿಗಿಟ್ಟರೂ ನಾನಾ ವೇಷದ ಈ ಭಿಕ್ಷುಕರ ಪಡೆ ದೇಶಕ್ಕೆ ಅಪಕೀರ್ತಿಯನ್ನು ತಂದಿದೆಯೆಂಬುದನ್ನಾದರೂ ನಾವು ಗಮನಿಸಬೇಕು. ಬಡತನದ ಪರಿಣಾಮವೊಂದೇ ಇದಕ್ಕೆ ಕಾರಣವೆನ್ನುವಲ್ಲಿ ಸಂಶಯವಿಲ್ಲ. ಆದರೆ ಇಲ್ಲಿ ಪರಂಪರಾಗತವಾಗಿ ಇದರಲ್ಲಿ ಬಂದ ಜಾಣಬುದ್ಧಿ, ಭೂತದಯೆಗಳ ದುರುಪಯೋಗವನ್ನು ಪಡೆದು ಹಲವರು ತಮ್ಮ ಅಂಗಹೀನತೆಯನ್ನೆ ಉಪಜೀವನದ ಮಾರ್ಗವನ್ನಾಗಿ ಮಾಡಿಕೊಂಡಿದ್ದಾರೆ.

### ತಿರುಕರನ್ನು ಸುಲಿಯುವ ತಿರುಕರು!

ಇದಕ್ಕಿಂತಲೂ ಘೋರವೂ ಬೀಭತ್ಸವೂ ಆದ ಇನ್ನೊಂದು ಸಂಗತಿಯೆಂದರೆ ಈ ತಿರುಕರನ್ನೆ ಸೂರೆ ಮಾಡುವ ತಿರುಕರ ಕೂಟಗಳು ಹುಟ್ಟಿಕೊಂಡಿರುವದು. "ಹ್ಯೂಮನ್ ಅಫೇರ್ಸ್" ಪತ್ರಿಕೆಯಲ್ಲಿ ಶ್ರೀ ಜೆ. ನಿಗಮ ಎಂಬವರು, ಈ ನೀಚ ಜನರ ಉದ್ಯಾಪಾರವನ್ನು ವಿವರಿಸುತ್ತ, "ಅವರು ಸಾಮಾನ್ಯವಾಗಿ ಮಾಡುವದಿಷ್ಟೆ. ಚಿಕ್ಕ ಮಕ್ಕಳನ್ನು ಅಪಹರಿಸಿ ಕೊಂಡೊಯ್ದು ಅನಾಥಾಲಯಗಳನ್ನು ತೆರೆದು ಜನರ ಸಹಾನುಭೂತಿ ಪಡೆಯುತ್ತಾರೆ. ಸಾಕಷ್ಟು ಅನಾಥ ಅಸಹಾಯ ಬಾಲಕರು ಕೂಡಿದೊಡನೆ ಅವರನ್ನು ಭಿಕ್ಷೆ ಬೇಡುವ ಕಲೆಯಲ್ಲಿ ಪಾರಂಗತರನ್ನಾಗಿ ಮಾಡುತ್ತಾರೆ. ಎಷ್ಟೋ ವೇಳೆ ಮಕ್ಕಳನ್ನು ಅಸಹ್ಯ ಚಿತ್ರಹಿಂಸೆಗೆ ಗುರಿಮಾಡುವದಲ್ಲದೆ ಅವುಗಳ ಯಾವುದಾದರೊಂದು ಅಂಗವನ್ನು ಊನಗೊಳಿಸಲಾಗುವದು. ಏಕೆಂದರೆ ಕುಂಟಕುರುಡರೂ ಅಂಗಹೀನರೂ ಜನರ ಕರುಣೆಗೆ ಹೆಚ್ಚು ಭಾಜನರಾಗುತ್ತಾರೆ. ಈ ಮೂಲಕ ಆ ತಿರುಕರೊಡೆಯನಿಗೆ ಅಧಿಕ ಲಾಭ ಸಂಪಾದನೆಯಾಗುವದು."

ಪ್ರಸಿದ್ಧ ಲೇಖಕರೂ ರಾಜಕಾರಣಜ್ಞರೂ ಆದ ಕೆ. ಎಂ. ಮುನಶಿಯವರು ನಾನಾ ಸಾಮಾಜಿಕ ಕಾರ್ಯಕರ್ತರ ಶಾಲೆಯಲ್ಲಿ ಕೊಟ್ಟ ಒಂದು ಭಾಷಣದಲ್ಲಿ ಕೆಲ ಹೃದಯವಿದ್ರಾವಕ ಸತ್ಯಗಳನ್ನು ಹೊರಗೆಡಹಿದ್ದಾರೆ. ಭಿಕ್ಷುಕ ಮಕ್ಕಳು ಸರಕುಗಳಂತೆ ಮಾರಾಟದ, ವಿನಿಮಯದ, ಮತ್ತು ಒತ್ತೆಹಾಕುವ ವಸ್ತುಗಳಾಗಿ ಬಿಟ್ಟಿದ್ದಾರೆಂದು ಅವರು ಹೇಳಿದರು. ಕುರುಡ ಹುಡುಗನನ್ನು ೫ ರೂಪಾಯಿಗೂ ಅಂಗಹೀನ ಹುಡುಗನನ್ನು ೩ ರೂಪಾಯಿಗೂ ಕೊಳ್ಳಲಾಗುತ್ತದೆ.

ಭಿಕ್ಷೆ ಬೇಡುವ ಕಲೆಯಲ್ಲಿ ಈ ಬಡ ಮಕ್ಕಳಿಗೆ ಶಿಕ್ಷಣ ಕೊಡುವ ರೀತಿಗೊಂದು ಉದಾಹರಣೆ ಕೊಡುತ್ತ ಮುಂಬಯಿ ನಗರದ ಟಪಾಲು ಕಚೇರಿಯ ಬಳಿ ನಡೆದ ಒಂದು ಘಟನೆಯನ್ನು ವಿವರಿಸಿದರು ಶ್ರೀ ಮುನಶಿಯವರು. ದಾರಿಹೋಕರ ಕರುಣೆಯನ್ನು ಕೆರಳಿಸಲು ಒಬ್ಬ ಚಿಕ್ಕ ಭಿಕ್ಷುಕ ಹುಡುಗ ತಾಸುಗಟ್ಟಲೆ ಆರ್ತನಾದ ಮಾಡುತ್ತಿದ್ದ. ಅವನೇಕೆ ಅಳುತ್ತಿದ್ದಾನೆಂದು ಸಣ್ಣಗೆ ನೋಡಿದನೆಂದರೆ ಅಲ್ಲೆ ಸ್ವಲ್ಪ ದೂರ ಇದ್ದ ಅವನ ಒಡೆಯನು ಹೊತ್ತಿಸಿದ ಬೀಡಿಯ ತುದಿಯನ್ನು ಅವನ ಮೈಗೆ ಚುಚ್ಚಿ ಅವನ ಕ್ರಂದನಕ್ಕೆ ಕಾರಣನಾಗುತ್ತಿದ್ದ.

ಹೊಂಬಣ್ಣದವನೊಬ್ಬನು ಒಂದು ವರ್ಷದ ಮಗುವನ್ನು ಕೊರಳಿಗೆ ಕಟ್ಟಿಕೊಂಡು ತಿರುಗಿದ ಉದಾಹರಣೆಯನ್ನು ಅವರು ಹೇಳಿದರು. ಕಿವುಡ-ಮೂಕನಂತೆ ನಟಿಸಲು ತರಬೇತಿ ಪಡೆದಿದ್ದ ಹುಡುಗರನ್ನು ಬಾಲಿಕೋದ್ಧಾರ ಸಂಘಕ್ಕೆ ತಂದು ಆರೈಕೆ ಮಾಡಿದ ನಂತರ ಕಿವುಡನಿಗೆ ಕಿವಿಬಂತು, ಮೂಕನಿಗೆ ಬಾಯಿ ಬಂತು! ಹೀಗೆ ಭಿಕ್ಷುಕ ಮಕ್ಕಳು ವ್ಯಾಪಾರದ ಸರಕುಗಳಾಗಿಬಿಟ್ಟಿವೆ," ಎಂದು ಶ್ರೀ ಮುನಶಿಯವರು ಹೇಳಿದರು.

ಮಂಗಳೂರು ಗೋವೆ ಪ್ರದೇಶಗಳಿಂದ ಎಳೆ ವಯಸ್ಸಿನಲ್ಲೇ ಮುಂಬಯಿಗೆ ತರಲ್ಪಟ್ಟು ಇಡಿ ದಿವಸ ದೊಡ್ಡ ದೊಡ್ಡ ಕುಟುಂಬಗಳ ಸೇವೆಗೆ ತಿಂಗಳ ಬರಿ ೩-೪ ರೂಪಾಯಿಗಳ ಪ್ರತಿಫಲಕ್ಕಾಗಿ ನೇಮಿಸಲ್ಪಡುವ ಹೆಣ್ಣು ಗಂಡು ಮಕ್ಕಳಿಗಾಗುವ ಹಿಂಸೆಯನ್ನು ಅವರು ಬಣ್ಣಿಸಿದ್ದಾರೆ. ಬಸವಳಿದು ಕೆಲಸ ಮಾಡಲಾರದೆ ಹೋದರೆ ಅವುಗಳ ಮೈಮೇಲೆ ಕುದಿಯುವ ನೀರು ಉಗ್ಗುವರು ಇಲ್ಲವೆ ಉರಿಯುವ ಕೊಳ್ಳಿಯನ್ನು ತಿವಿಯುವರು. ಇನ್ನೂ ವಯಸ್ಸಿಗೆ ಬಾರದಿರುವ ಹುಡುಗಿಯರ ಮೇಲೆ ಮನೆಯ ಕಾಮುಕರ ಅತ್ಯಾಚಾರವೂ ಆಗುವದು.

### ನಿವಾರಣೋಪಾಯ

ಇಷ್ಟು ನೀಚ ತರಗತಿಗಿಳಿದಿದೆ ಈ ಭಿಕ್ಷುಕ ವೃತ್ತಿ. ಆ ಜನರಲ್ಲಿ ಮನುಷ್ಯತ್ವವೇ ಉಳಿದಿರುವದಿಲ್ಲ. ಸಮಾಜವೂ ಸರಕಾರವೂ ಮನಸು ಮಾಡಿದರೆ ಇದನ್ನು ಸಂಪೂರ್ಣವಾಗಿ ಅಲ್ಲದಿದ್ದರೂ ಬಹಳಮಟ್ಟಿಗೆ ಅಳಿಸಿಬಿಡಬಹುದು. ದೃಢಕಾಯರಾದ ಜನರನ್ನು ಯಾವದೇ ಸೋಗಿನಲ್ಲಿ ಭಿಕ್ಷೆ ಬೇಡಗೊಡಬಾರದು. ಈ ವೃತ್ತಿಗೆ ಬಡತನವಲ್ಲದೆ ಸೋಮಾರಿತನವೂ ದೊಡ್ಡ ಕಾರಣವೆಂದು ಶ್ರೀ ನಿಗಮರೆಂದುದರಲ್ಲಿ ಬಹಳ ಸತ್ಯವುಂಟು. ಈ ಸಂದರ್ಭದಲ್ಲಿ ಗಾಂಧೀಜಿಯ ಆಶ್ರಮದಲ್ಲಿ ನಡೆದ ಒಂದು ಪ್ರಸಂಗವನ್ನು ಉಲ್ಲೇಖಿಸಬಹುದು. ಭಿಕ್ಷುಕಿಯೊಬ್ಬಳು ಗಾಂಧೀಜಿಯ ಕೀರ್ತಿಯನ್ನು ಕೇಳಿ ಆಶ್ರಮಕ್ಕೆ ಬಂದಳಂತೆ. ಅಲ್ಲಿ ಅಮರಣ ಪುಕ್ಕಟೆಯಾಗಿ ಅನ್ನ ಸಿಗುವದೆಂದು ಅವಳು ಭಾವಿಸಿದ್ದಳು. ಆದರೆ ಸೋಮಾರಿಗಳನ್ನು ಸೈರಿಸದ ಗಾಂಧೀಜಿ ಅವಳಿಗೆ ಒಂದು ರಾಟಿಯನ್ನು ಕೊಟ್ಟು ಯಥಾಶಕ್ತಿ ನೂಲಲು ಹೇಳಿದರು. ಎರಡೇ ದಿನಗಳಲ್ಲಿ ಅವಳಿಗೆ ಬೇಸರ ಬಂತು. ನೂಲು ತೆಗೆಯುವ ಶಕ್ತಿ, ಅಥವಾ ತಿಳಿವು ಇಲ್ಲದೆ ಅಲ್ಲ, ಮೈಯಲ್ಲಿ ಹೊಕ್ಕಿದ್ದ ಸೋಮಾರಿತನದಿಂದ. ಕೊನೆಗೆ ಅವಳು 'ಗಾಂಧಿ ಧರ್ಮಾತ್ಮನಂತೆ! ನನ್ನಂಥಾ ಭಿಕ್ಷುಕಿಗೆ ಅನ್ನ ಹಾಕಬೇಕಾದರೆ ದುಡಿಸುತ್ತಾನೆ, ಇವನೆಂಥ ಧರ್ಮಾತ್ಮ,' ಎಂದು ಬೈಯತೊಡಗಿದಳಲ್ಲದೆ ಸತ್ಯಾಗ್ರಹಸಮ್ರಾಟನ ವಿರುದ್ಧವೇ ಸತ್ಯಾಗ್ರಹ ಹೂಡಿದಳು! ಗಾಂಧೀಜಿಯಂಥ ದೃಢಚಿತ್ತರಲ್ಲದ ಬೇರಾವನಾದರೂ ಅವಳ ಮುಂದೆ ಹಣ್ಣಾಗಿಯೆ ಹೋಗುತ್ತಿದ್ದ. ಆದರೆ ಗಾಂಧೀಜಿ ಅದಕ್ಕೆ ಬಗ್ಗದೆ, ತಾವೇ ಸ್ವತಃ ಅವಳನ್ನು ಕೈಹಿಡಿದು ಸಾತ್ವಿಕ ಬಲಪ್ರಯೋಗದಿಂದ ಹೊರತಳ್ಳಬೇಕಾಯಿತು!

ದೇಹದಾರ್ಢ್ಯವುಳ್ಳವರಿಗೆ ತಿರಿದುಣ್ಣಲು ಅನುಜ್ಞೆಯಿರಬಾರದೆಂಬುದು ನಿಶ್ಚಯ. ಕುರುಡ ಕುಂಟರೇ ಮೊದಲಾದ ಅಂಗಹೀನರಿಗಾಗಿ ಸಂಸ್ಥೆಗಳನ್ನು ತೆರೆದು ಅವರಿಗೂ ಕೈಗಾರಿಕೆ ಕಲಿಸುವದು ಅಸಾಧ್ಯವಲ್ಲ. ಹೀಗೆ ಮಾಡಿದರೆ ಕೇವಲ ೫ ಲಕ್ಷ ನಿಜವಾಗಿ ಅಸಹಾಯರಾದ ಭಿಕ್ಷುಕರು ಉಳಿಯಬಹುದು. ಅವರನ್ನು ಬೀದಿಗಳಿಂದ ಧರ್ಮ ಸಂಸ್ಥೆಗಳಿಗೆ ವರ್ಗಾಯಿಸಿ ಸಾಮಾಜಿಕ ಸಹಾಯದಿಂದ ಪೋಷಿಸಬಹುದು.

ಆದರೆ ಇದರಲ್ಲಿ ಕಾಯಿದೆಗಿಂತ ಜನಶಿಕ್ಷಣಕ್ಕೆ ಹೆಚ್ಚು ಮಹತ್ವವಿದೆ. ಇನ್ನುಮುಂದೆ ಪ್ರತಿ ಬಾರಿ ಭಿಕ್ಷುಕನೊಬ್ಬನಿಗೆ ಮೂರು ಕಾಸು ಕೊಡಲು ಜೇಬಿಗೆ ಕೈಹಾಕುವಾಗ ನೀವು ಈ ಬೀಭತ್ಸ ವೃತ್ತಾಂತಗಳನ್ನೆಲ್ಲ ನೆನೆದುಕೊಂಡು ನೀವು ಕೊಡುವ ಬಿಲ್ಲೆಯ ಸದ್ವಿನಿಯೋಗವಾಗುವದೇನೆಂದು ನಿಮ್ಮನ್ನೆ ಪ್ರಶ್ನಿಸಿಕೊಳ್ಳಿರಿ.


ಸಾಮಾಜಿಕ ಕಾರ್ಯಕರ್ತರು ತಿರುಕರ ಪಿಡುಗನ್ನು ನಿವಾರಿಸುವತ್ತ ಗಮನಕೊಟ್ಟು ಜನರ ಮತ್ತು ತಿರುಕರ ಮನವೊಲಿಸಲು ಪ್ರವೃತ್ತರಾದರೆ ರಾಷ್ಟ್ರದ ದೊಡ್ಡ ಅಸಹ್ಯವ್ಯಾಪಾರವನ್ನು ತಡೆದ ಪುಣ್ಯ ಅವರಿಗೆ ದೊರಕದಿರದು.

---

**ಶ್ರೀ ಸತ್ಯನಾರಾಯಣ ವ್ರತ ಪೂಜಾ ಕಥಾ**

ಪ್ರಕಾಶಕರು: ಶ್ರೀ ಕೃಷ್ಣ ಬುಕ್ ಡಿಪೊ, ಧಾರವಾಡ, ಬೆಲೆ ೦ ೬-೦

ಸತ್ಯ ನಾರಾಯಣ ಪೂಜಾ ವಿಧಿ, ಅದಕ್ಕೆ ಸಂಬಂಧಿಸಿದ ಮಂತ್ರಗಳು, ಸ್ಕಂದ ಪುರಾಣೋಕ್ತ ಕಥೆ ಮತ್ತು ಅದರ ಕನ್ನಡ ಅನುವಾದಗಳನ್ನೊಳಗೊಂಡಿದೆ.



ಬ್ರಿಟನ್ನಿನಲ್ಲಿ ಹೂಡುವ ಸ್ಪರ್ಧೆ: ಸ್ಕಾಟ್ಲಂಡಿನ ಬಾಲಜೌಟಿಯಲ್ಲಿ ಈಚೆಗೆ ಜಿಲ್ಲಾ ಹೂಡುವ ಸಂಘದವರು ನಡೆಸಿದ ಸ್ಪರ್ಧೆಯ ನೋಟ.

# ಈ ಯಂತ್ರದ ಮುಂದೆ ನಿಮ್ಮ ಮಿದುಳು ಬರಿ ಮಗು:

## ಸೆಕೆಂದಿಗೆ ೩೫೦೦ ಅಂಕೆಗಳನ್ನು ಕೂಡಿಸಬಲ್ಲ ಯಂತ್ರ

ಗಣಿತಶಾಸ್ತ್ರದಲ್ಲಿ ನನ್ನದು ಎತ್ತಿದ ಕೈ; ನನ್ನ ಬುದ್ಧಿ ಅತ್ಯಂತ ವೇಗದಿಂದ ಲೆಕ್ಕಗಳನ್ನು ಮಾಡುತ್ತದೆ, ಎಂಬ ಹೆಮ್ಮೆ ನಿಮಗೇನಾದರೂ ಇದ್ದರೆ ಗಡಿಯಾರವನ್ನು ಮುಂದಿಟ್ಟುಕೊಂಡು ಈ ಕೆಳಗಿನ ಸಂಖ್ಯೆಗಳನ್ನು ಗುಣಿಸಿರಿ:

೮೧೬೨೪೭೭೬೮೯೪೫೩೩೪೪ ×

೯೬೭೪೫೩೫೭೪೬೪೮೯೧೨

ನೀವು ಬಹಳ ಚುರುಕಾಗಿದ್ದರೆ ಇದನ್ನು ೨೦ ಮಿನಿಟುಗಳಲ್ಲಿ ಪೂರೈಸಬಹುದು. ಇಲ್ಲದಿದ್ದರೆ ಅರ್ಧಗಂಟೆ ಹಿಡಿಯಬಹುದು. ಇನ್ನೂ ಹೆಚ್ಚು ಹೊತ್ತು ತೆಗೆದುಕೊಂಡರೂ ತೆಗೆದುಕೊಳ್ಳಬಹುದು. ಆದರೂ ನಿಮಗೆ ಬಂದ ಉತ್ತರ ಖಾತ್ರಿಯೆಂದು ಹೇಳುವ ಧೈರ್ಯ ನಿಮಗೂ ಇರಲಿಕ್ಕಿಲ್ಲ.

ಇದೇ ಲೆಕ್ಕವನ್ನು ಅಮೇರಿಕೆಯ ಅಂತರ್‌ರಾಷ್ಟ್ರೀಯ ವ್ಯಾಪಾರ ಯಂತ್ರಗಳ ಕಂಪನಿಯವರು ತಯಾರಿಸಿದ ಒಂದು ಯಂತ್ರ ಒಂದು ಸೆಕೆಂಡಿನ ೫೦ ರಲ್ಲೊಂದಂಶದಲ್ಲಿ ಮಾಡಿ ಒಗೆಯುವದು. ಅದು ಸಿದ್ಧಮಾಡಿದ ಉತ್ತರ ಸರ್ವಥಾ ತಪ್ಪಾಗಲಾರದು.

ಹದಿನಾಲ್ಕು ಸ್ಥಾನಗಳುಳ್ಳ ಎರಡು ಸಂಖ್ಯೆಗಳ ಭಾಗಹಾರ ಮಾಡಲು ನಿಮಗೆ ತುಸು ಹೆಚ್ಚು ಹೊತ್ತೇ ಬೇಕಾಗಬಹುದು. ಆದರೆ ಈ ಯಂತ್ರಕ್ಕೆ ಅಷ್ಟೇ ಎಂದರೆ ೧/೫೦ ಸೆಕೆಂಡು ಮಾತ್ರ ಸಾಲುತ್ತದೆ. ಕೂಡಿಸುವ ಕಳೆಯುವ ಲೆಕ್ಕಗಳನ್ನಂತೂ ಅದು ಲೀಲಾಜಾಲವಾಗಿ ಮಾಡಿಬಿಡುತ್ತದೆ. ೧೯ ಸ್ಥಾನಗಳಿಂದ ಕೂಡಿದ ಕೂಡಿಸುವ ಕಳೆಯುವ ಲೆಕ್ಕಗಳನ್ನು ಅದು ಒಂದು ಸೆಕೆಂಡಿಗೆ ೩೫೦೦ ರಂತೆ ಮಾಡಿಕೊಡಬಲ್ಲದು.

ಅಂದಾಕ್ಷಣ ನೀವು ದಡ್ಡರೆಂದು ನನ್ನ ಆರೋಪವಲ್ಲ. ತಪ್ಪು ನಿಮ್ಮದಲ್ಲ. ನಿಮ್ಮ ಬುದ್ಧಿಯೆಷ್ಟು ಓಡಿದರೂ ನಿಮ್ಮ ನರಗಳಲ್ಲಿ ಪ್ರೇರಣಾಶಕ್ತಿಯ ಓಟವನ್ನು ಮೀರಿ ಓಡಲಾರದು. ಅದು ಬಹಳಾದರೆ ಸೆಕೆಂಡಿಗೆ ೧೩೦ ಗಜದಂತೆ ಹರಿದಾಡಬಹುದು. ಆದರೆ ಈ "ವಿಚಾರಿಸುವ" ಯಂತ್ರದಲ್ಲಿ ವಿದ್ಯುಲ್ಲವ (ಇಲೆಕ್ಟ್ರಾನ್‌ಗಳ) ವೇಗವಾದ ಸೆಕೆಂಡಿಗೆ ೧೮೬೦೦೦ ಮೈಲುಗಳಂತೆ "ವಿಚಾರಶಕ್ತಿ" ಓಡಾಡುತ್ತದೆ. ಅದರಿಂದ ಅದರ ಮುಂದೆ ನಿಮ್ಮ ಬುದ್ಧಿ ಬರಿ ಮಗು.

ಈ ಹೊಸ ಯಂತ್ರದ ಅದ್ಭುತ ಸಾಮರ್ಥ್ಯದ ಕಲ್ಪನೆಗೆ ನಿಮಗೊಂದು ಉದಾಹರಣೆ ಹೇಳುವೆ: ಇಂದಿನಿಂದ ಹಿಂದೊಂದು ಶತಮಾನ ಮುಂದೊಂದು ಶತಮಾನಗಳಲ್ಲಿ ಪ್ರತಿದಿನ ಮಧ್ಯಾಹ್ನ ಹಾಗು ಮಧ್ಯರಾತ್ರಿ ಹೊತ್ತಿನಲ್ಲಿ ಚಂದ್ರನು ಭಚಕ್ರದಲ್ಲಿ ಯಾವ ಸ್ಥಾನದಲ್ಲಿದ್ದನೆಂದು ಗಣಿಸಿ ಹೇಳಬೇಕಾಗಿದೆಯೆಂದು ತಿಳಿಯಿರಿ. ಪ್ರತಿಯೊಂದು ಸ್ಥಾನವನ್ನು ಸ್ಫುಟ ಮಾಡಬೇಕಾದರೆ ೧೧೦೦೦ ಸಂಕಲ್ಪನ ವ್ಯವಕಲನಗಳೂ ೯೦೦೦ ಗುಣಾಕಾರ ಭಾಗಹಾರಗಳೂ ೨೦೦೦ ಬಾರಿ ಜಂತ್ರಿಗಳನ್ನು ನೋಡುವ ಸಂದರ್ಭಗಳೂ ಬರುವವು. ಇದೊಂದಕ್ಕೇ ತೀಕ್ಷ್ಣಬುದ್ಧಿಯ ಗಣಿತಜ್ಞನಿಗೆ ಮೂರು ನಾಲ್ಕು ವಾರಗಳು ಬೇಕಾಗಬಹುದು. "ವಿಚಾರಿಸುವ" ಯಂತ್ರಕ್ಕೆ ಈ ಎಲ್ಲ ಕೆಲಸಕ್ಕೆ ಒಟ್ಟು ಏಳು ಮಿನಿಟು ಸಾಲುತ್ತದೆ. ಇದೇ ಲೆಕ್ಕ ಮುಗಿಸಲು ಅನೇಕ ಗಣಿತಜ್ಞರ ಜೀವಮಾನವೇ ಹಿಡಿಯಬಹುದು. ಯಂತ್ರದಿಂದ ಬರಿ ೨ ವರ್ಷಗಳಲ್ಲಿ ಇದು ಸಾಧ್ಯವಾಗುವದು.

### ಭಾರೀ ಯಂತ್ರ

ಜೀವಂತ ಮಾನವನ ವಿಚಾರಿಸುವ ಯಂತ್ರವಾದ ಮೆದುಳಿನಂತೆ ಇದೂ ಗೇಣುದ್ದ ಗೇಣಗಲ ಸ್ಥಳದಲ್ಲಿ ಕೂಡ್ರುವ ಟೈಪರೈಟರನಂಥ ಯಂತ್ರವೆಂದು ಮಾತ್ರ ತಿಳಿದುಕೊಳ್ಳಬೇಡಿರಿ. ನೂರು ಜನರಿಗೆ ಒಬ್ಬರ ಹೆಗಲು ಇನ್ನೊಬ್ಬರಿಗೆ ತಗಲದಂತೆ ನಿಲ್ಲಲು ಸಾಲುವಷ್ಟು ಸ್ಥಳವುಳ್ಳ ದೊಡ್ಡಮನೆಯಲ್ಲಿ ನ್ಯೂಯಾರ್ಕಿನಲ್ಲಿ ಇದನ್ನಿರಿಸಿದ್ದಾರೆ. ಅದರೊಳಗಿರುವ ಅವಯವಗಳಲ್ಲಿ ಕೆಲವನ್ನು ಲೆಕ್ಕಿಸಿದರೆನೇ ನಿಮ್ಮ ತಲೆ ತಿರುಗಬಹುದು: ಅದರಲ್ಲಿ ೧೨೫೦೦ ವಿದ್ಯುಲ್ಲವ ವಾಲ್ವುಗಳು, ೪೦೦೦೦ ಪ್ಲಗ್ ಜೋಡಣಿಗಳು, ೪೫೦೦ ಮೈಲುದ್ದ ತಂತಿ, ಮತ್ತು ಅದರ "ತಲೆ"ಯ ಜ್ವರ ಇಳಿಸಲು ದಿನಕ್ಕೆ ೫೨ ಟನ್ ನೀರನ್ನು ಮಂಜುಗಡ್ಡೆಯಾಗಿ ಮಾರ್ಪಡಿಸುವ ಸಾಧನಗಳು ಅಡಕವಾಗಿವೆ. ಅದು ೪ ಲಕ್ಷ ಸಂಖ್ಯೆಗಳನ್ನು "ನೆನಪಿನಲ್ಲಿಟ್ಟುಕೊಳ್ಳ" ಬಲ್ಲದು.

ಆದರೂ ಅದರ ಬುದ್ಧಿ ಕೊಂಚ ದಡ್ಡತನದ್ದೆ. ಅದು ಗುಣಿಸುವ ಭಾಗಿಸುವ ಕಳೆಯುವ ಲೆಕ್ಕಗಳನ್ನು ಮಾಡಿದರೂ ಒನ್ನಿಯತ್ತೆಯ ಹುಡುಗನಂತೆ ಎಲ್ಲವನ್ನೂ ಕೂಡಿಸುವ ಮೂಲಕವೇ ಮಾಡಬೇಕು. ೭ಕ್ಕೆ ೭ ರಿಂದ ಗುಣಿಸುವದೆಂದರೆ ೭ನ್ನು ೭ ಬಾರಿ ಕೂಡಿಸುವದೇ.

ಕುರುಡರಿಗೆ ಓದು ಹೇಳಿಕೊಡಬೇಕಾದರೆ ಉಪಯೋಗಿಸುವ "ಪಂಚ್" ಲಿಪಿಯಂತೆ ಇದಕ್ಕು ಕಾರ್ಡುಗಳ ಮೇಲೆ ಪಂಚಮಾಡಿ ಅಂಕೆಗಳನ್ನೂ ಮಾಡಬೇಕಾದ ಕೆಲಸವನ್ನೂ ತೋರಿಸಿ ಆ ಕಾರ್ಡುಗಳನ್ನು "ತಿನಿಸ"ಬೇಕು. ಆಗ ಅದು ವಿದ್ಯುತ್ತಿನ ಹಸ್ತದಿಂದ ಅದನ್ನೋದಿಕೊಂಡು ಪರಿಣಾಮವನ್ನು ಬರೆದುಕೊಡುತ್ತದೆ. ಒಂದು ಲೆಕ್ಕದ ಪರಿಣಾಮವನ್ನು ನೆನಪಿನಲ್ಲಿಟ್ಟುಕೊಂಡು ಕೂಡಲೆಯೋ ಅಥವಾ ಮುಂದೆ ಯಾವಾಗಲಾದರೂ ಸಂದರ್ಭ ಬಂದಾಗ ನೆನೆದುಕೊಳ್ಳಬೇಕೆಂದಿದ್ದರೆ ಅದು ಪಟ್ಟಿಗಳ ಮೇಲೆ ಅದನ್ನು ಟಿಪ್ಪಣಿಮಾಡಿಕೊಂಡಿಟ್ಟು, ಕೇಳಿದಾಗ್ಗೆ ಪುನಃ ಲೆಕ್ಕಮಾಡದೆ ತನ್ನ "ನೆನಪಿನ ನಿಧಿ"ಯಿಂದಲೇ ನಿಮಗೆ ಎತ್ತಿಕೊಡುವದು. ಎಲ್ಲ ಉತ್ತರಗಳನ್ನೂ ಅದು ಮುದ್ರಿಸಿಕೊಡುವದು.

ಇದರಿಂದ ಗ್ರಹಗಣಿತ, ಜ್ಯೋತಿರ್ಗಣಿತ, ರಸಾಯನಶಾಸ್ತ್ರ, ಪದಾರ್ಥವಿಜ್ಞಾನಶಾಸ್ತ್ರಗಳೇ ಮೊದಲಾದವುಗಳ ಮೇಲೆ ಬಹಳ ತೀವ್ರ ಪರಿಣಾಮವಾಗದಿರದು. ಲೆಕ್ಕ ಮಾಡುವದರಲ್ಲೇ ಬಹಳ ಹೊತ್ತು ಕಳೆಯಬೇಕಾಗಿದ್ದ ವೈಜ್ಞಾನಿಕರ ಸಮಯ ಉಳಿದು ಅವರು ವಿಚಾರದಲ್ಲೆ ತಮ್ಮ ಬುದ್ಧಿಯನ್ನುಪಯೋಗಿಸಬಲ್ಲರು.

---

**ವಿರೋಧಿ ಸಂವತ್ಸರದ ಹುಬ್ಬಳ್ಳಿ ಪಂಚಾಂಗ**

ಶ್ರೀರಾಮಭಟ್ಟ ಜ್ಯೋತಿಷಿ ಇವರಿಂದ ರಚಿಸಲ್ಪಟ್ಟು ಭವಿಷ್ಯ ಕಾರ್ಯಾಲಯ, ಹುಬ್ಬಳ್ಳಿ ಇವರಿಂದ ಪ್ರಕಟಿಸಲ್ಪಟ್ಟಿದೆ. ವರ್ಷ ಭವಿಷ್ಯದಿಂದೊಡಗೂಡಿದೆ. ಬೆಲೆ ೦-೯-೦

# ಸರ್ವೋದಯ ಸಮ್ಮೇಲನ

೧

ಸರ್ವೋದಯ ಸಮ್ಮೇಲನದ ಮೊದಲನೆಯ ಅಧಿವೇಶನವು ರಾವ (ಇಂದೂರು) ದಲ್ಲಿ ಡಾ. ರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ಸೇರಿ ಜರುಗಿತು. ಐನ್ನೈದಿನ ಅದು ಕೊನೆಗೊಂಡಿತು. ಗಾಂಧೀಜಿಯ ನಿಧನದ ಸ್ವಲ್ಪದಿನಗಳನಂತರ ಕಳೆದ ವರುಷ ಸೇವಾಗ್ರಾಮದಲ್ಲಿ ಸೇರಿದ್ದ ಸಮ್ಮೇಲನ ಮುಂಬರಿದುದೇ ಈ ಅಧಿವೇಶನವೆಂದು ಹೇಳಬಹುದು.

### ಸರ್ವೋದಯ ಸಮಾಜ

ಆ ಸಮ್ಮೇಲನದಲ್ಲಿ ಸರ್ವೋದಯ ಸಮಾಜದ ಅವತಾರವಾಯಿತೆಂಬುದು ಸರ್ವಶ್ರುತ, ಸರ್ವಸೇವಾ ಸಂಘಸ್ಥಾಪನೆಯ ತಳಹದಿಯನ್ನೂ ಅದೇ ಕಾಲಕ್ಕೆ ಹಾಕಲಾಯಿತು. ಗಾಂಧೀಜಿಯ ನಿಧನದ ದಿವಸ ಪ್ರತಿ ವರುಷ ಮೇಳಾ ಕೂಡಿಸಬೇಕೆಂಬ ವಿಚಾರವನ್ನು ಆ ಸಮ್ಮೇಲನವೇ ಪುರಸ್ಕರಿಸಿತು. ಈ ಎಲ್ಲ ಚಟುವಟಿಕೆಗಳ ಪರಿಶೀಲನಮಾಡಿ ಅಂದು ಹೊಳೆದ ವಿಚಾರಗಳಿಗೆ ಎಷ್ಟರಮಟ್ಟಿಗೆ ಮೂರ್ತಸ್ವರೂಪ ಕೊಡಬಹುದೆಂಬುದನ್ನು ಪರೀಕ್ಷಿಸುವದು ಸದ್ಯದ ಈ ಸಮ್ಮೇಲನ ಕೂಡಿದ್ದರ ಒಂದು ಉದ್ದೇಶವಾಗಿದ್ದಿತು.

### ಸ್ಪಷ್ಟೀಕರಣ

ಸರ್ವೋದಯ ಸಮಾಜ ಮತ್ತು ಸರ್ವ ಸೇವಾ ಸಂಘವೆಂದು ನಾಮಕರಣ ಹೊಂದಿದ ಎರಡು "ಸಂಸ್ಥೆ" ಗಳ ಸ್ಥಾನ ಮತ್ತು ಕಾರ್ಯಕ್ಷೇತ್ರ ಮೊದಲಾದ್ದರ ಬಗ್ಗೆ ಸ್ಪಷ್ಟವಾದ ತಿಳುವಳಿಕೆಯು ರಲಿಲ್ಲೆಂದು ಕಂಡುಬಂದಿತು. ಎರಡೂ ಸಂಸ್ಥೆಗಳು ಒಂದೇ ಬಗೆಯ ಉದ್ದೇಶ, ಧ್ಯೇಯ, ಗುರಿ ಮತ್ತು ಕಾರ್ಯಕ್ಷೇತ್ರವನ್ನು ಇಟ್ಟುಕೊಂಡು ಕಾರ್ಯ ಮಾಡಲು ಸಾಧ್ಯವು. ಪ್ರತಿಪ್ರತ್ಯೇಕವಾಗಿ ರಚನಾತ್ಮಕ ಕಾರ್ಯವನ್ನು ಮಾಡುತಿದ್ದ ವಿವಿಧ ಸಂಸ್ಥೆಗಳ ಸಮೀಕರಣ ಮಾಡುವ ಉದ್ದೇಶದಿಂದ ಸರ್ವಸೇವಾ ಸಂಘವನ್ನು ಅಸ್ತಿತ್ವದಲ್ಲಿ ತರಲಾಯಿತು.

ಇಂಥ ಯಾವದೇ ಬಗೆಯ ಚಟುವಟಿಕೆಯನ್ನು ಸಂಘಟಿಸುವ ಹೊಣೆ ಸರ್ವೋದಯ ಸಮಾಜದ್ದು ಆಗಿರಲಿಲ್ಲ. ವಾರ್ಷಿಕ ಮೇಳಾ ಕೂಡಿಸುವದು ಮತ್ತು ಸರ್ವೋದಯ ಸಮಾಜದ ಸೇವಕರ ಯಾದಿಯೊಂದನ್ನಿಡುವದು ಇವಿಷ್ಟೆ ಸರ್ವೋದಯ ಸಮಾಜದ ಕೆಲಸವೆಂದು ನಿರ್ದಿಷ್ಟಪಡಿಸಲಾಗಿತ್ತು. ಸೇವಕ ಶಬ್ದದ ಅರ್ಥವು ಸಾಮಾನ್ಯವಾಗಿ ಪೂರ್ಣಾವಧಿ ಕೆಲಸ ಮಾಡುವ ಕಾರ್ಯಕರ್ತ ಎಂದು ಭಾವಿಸಲಾಗಿದ್ದಿತು. ಇಂಥ ಎಲ್ಲ ಕಾರ್ಯಕರ್ತರನ್ನು ರಜಿಸ್ಟರ ಮಾಡಿಕೊಳ್ಳುವ ಮತ್ತು ವಾರ್ಷಿಕ ಮೇಳಾ ಕೂಡಿಸುವದನ್ನು ಸಂಘಟಿಸುವ ಈ ಎರಡು ಕಾರ್ಯಗಳನ್ನು ಸರ್ವ ಸೇವಾಸಂಘವು ಸುಲಭವಾಗಿ ಮಾಡಬಹುದಿದ್ದಿತು. ಇದರಿಂದ ಎರಡನೇ ಸಂಸ್ಥೆ ನಿಷ್ಕ್ರಿಯವಾಗುತಿದ್ದಿತು. ಆದುದರಿಂದ ಸರ್ವೋದಯ ಸಮಾಜವೆಂದರೆ ಸಾಮಾನ್ಯವಾಗಿ ಜನರು ಅದಕ್ಕೆ ಮಾಡಿಕೊಳ್ಳುವ ಅರ್ಥದ ಸಂಸ್ಥೆಯೆಂದಿಗೂ ಅಲ್ಲ ಎಂಬದನ್ನು ತಿಳಿಸಿ ಕೊಡುವದು ಅವಶ್ಯವಾಗಿತ್ತು. ಡಾ. ಸ್ಟ್ಯಾನ್ಲೆ ಜೋನ್ಸರು ಬರೆದ ಮ. ಗಾಂಧಿ-ಒಂದು ಭಾಷ್ಯ ಎಂಬ ಪುಸ್ತಕದಲ್ಲಿ ಸರ್ವೋದಯ ಚಳವಳಿ ಎಂಬದಾಗಿ ಪಾಶ್ಚಾತ್ಯರಿಗಾಗಿ ಅನುವಾದಿಸಿ ತಿಳಿಸಿದ್ದಾರೆ. ಆಂಗ್ಲ ಭಾಷೆಯಲ್ಲಿ ಕದಾಚಿತ್ ಆ ಶಬ್ದವೇ ಹೆಚ್ಚು ಸ್ಪಷ್ಟೀಕರಣ ಮಾಡಬಹುದು. ರಾಮರಾಜ್ಯ, ಇಲ್ಲವೆ ಪೃಥ್ವಿಯಲ್ಲಿ ದೇವರ ರಾಜ್ಯದಂತಹ ಶಬ್ದಗಳಂತೆ ಈ ವಾಕ್ಯಭಾಗದಿಂದಲೂ ಯೋಜನೆಯ ಸಂಪೂರ್ಣ ವಿವರಣೆ ಗೊತ್ತಾಗುವದಿಲ್ಲ; ಆದರೂ ಮಾನವನ ಧ್ಯೇಯ ವಾವುದಾಗಿರಬೇಕು ಮತ್ತು ಅವನ ಜೀವನ ಪದ್ಧತಿ ಎಂತಿರಬೇಕು ಎಂಬುದಕ್ಕೆ ಸಾಕಷ್ಟು ಸೂಚಕವಾದ ಆಸೆ ಮತ್ತು ಕಲ್ಪನೆಯ ದ್ಯೋತಕವಾಗಿದೆ ಅದು. ಸರ್ವೋದಯ ಶಬ್ದವನ್ನು ಕೂಡಲೆ ಹಿಂದುಸ್ತಾನದಲ್ಲಿ ಮತ್ತು ಪರದೇಶಗಳಲ್ಲಿ ಕೂಡ ಒಳ್ಳೆ ಆಸ್ಥೆಯಿಂದ ಸ್ವೀಕರಿಸಿದ್ದನ್ನು ನೋಡಿದರೆ ; ಗಾಂಧೀಜಿಯ ವಿಚಾರಗಳಿಗೆ ಮತ್ತು ತಮ್ಮ ಅಂತರಾತ್ಮದ ಕರೆಗೆ ಸರಿಹೋಗುವಂಥದೇನೋ ಅದರಲ್ಲಿ ಇದೆ ಎಂದು ಎಲ್ಲರೂ ಭಾವಿಸುವರು. ಈ ವಿಚಾರದಿಂದ ಸ್ಫೂರ್ತಿಗೊಂಡು ಅವನ್ನು ಕಾರ್ಯರೂಪದಲ್ಲಿ ತರಲು ಬಯಸಿದ ಜನರ ಅಂದರೆ ಈ ಸೇವಕರ ಯಾದಿಯನ್ನು ಇಡುವದರಿಂದ ಪರಸ್ಪರ ಸಹಕಾರ ಮತ್ತು ಸಂಬಂಧ ಬೆಳೆಯಲು ಅವಕಾಶವನ್ನು ಕಲ್ಪಿಸಿಕೊಳ್ಳುವದಾಗಿದೆ.

### ಸ್ವರೂಪವ್ಯಾಪ್ತಿಯಲ್ಲಿ ಬದಲಾವಣೆ

ಕಳೆದ ವರುಷ ಸರ್ವೋದಯ ಸಮಾಜದ ಸ್ವರೂಪವ್ಯಾಪ್ತಿಯ ಬಗ್ಗೆ ಮಾಡಿದ ಗೊತ್ತುವಳಿಯನ್ನು ಮತ್ತು ಈ ವರುಷದಲ್ಲಿ ಸಾಧಿಸಿದ ಪ್ರಗತಿಯನ್ನು ಪರಿಶೀಲಿಸಲಾಗಿ ಶಬ್ದರಚನೆಯಲ್ಲಿ ಅಲ್ಪ ಸ್ವಲ್ಪ ಬದಲಾವಣೆಯನ್ನು ಮಾಡುವದು ಅವಶ್ಯವೆನಿಸಿತು. ಅವುಗಳಲ್ಲಿ ಹೆಚ್ಚಿನವು ಕೇವಲ ಶಾಬ್ದಿಕ ಬದಲಾವಣೆಗಳಾಗಿದ್ದವು. ಸಂಘಟನವೆಂಬ ಶಬ್ದವು ಮೊದಲನೆಯ ವಾಕ್ಯಭಾಗದಲ್ಲಿ ಮತ್ತು ಪೀಠಿಕೆಯಲ್ಲಿ ಸ್ವಲ್ಪ ಶಿಥಿಲವಾಗಿದ್ದವು. ಅದು ಅನವಶ್ಯಕವೆಂದು ಭಾವಿಸಲಾಯಿತು ಆದುದರಿಂದ ಆ ಶಬ್ದವನ್ನು ತೆಗೆದುಹಾಕಲಾಯಿತು. ಸರ್ವೋದಯ ಜೀವನಮಾರ್ಗದ ಮುಖ್ಯ ವಿಚಾರವನ್ನು ಒತ್ತಿ ಹೇಳುವದಕ್ಕಾಗಿ ಉದ್ದೇಶ ನಿರೂಪಣೆಯ ವಾಕ್ಯದ ನಂತರ ಒಂದು ಮಹತ್ವದ ವಾಕ್ಯವನ್ನು ಸೇರಿಸಲಾಯಿತು. ಸಾಧ್ಯದಷ್ಟೇ ಸಾಧನಗಳೂ ವಿಶುದ್ಧವಾಗಿರಬೇಕೆಂದು ಒತ್ತಾಯಪಡಿಸುವದು ಅದರ ಮೂಲಭೂತ ಧ್ಯೇಯವಾಗಿದೆ. ಈ ಬದಲಾವಣೆಯು ಮತ್ತು ಕೆಲ ಸಣ್ಣ ಸಣ್ಣ, ತಿದ್ದುಪಡಿಗಳು ಒಮ್ಮತದಿಂದ ಸ್ವೀಕೃತವಾದವು.

### ಮೇಳಾಗಳು

ಕಳೆದ ವರುಷದ ನಿರ್ಣಯದಂತೆ ಕಳೆದ ಜನೆವರಿ ೩೦ ನೇ ತಾರೀಕಿಗೆ ಹಿಂದುಸ್ತಾನದ ಯಾವದೊಂದು ಭಾಗದಲ್ಲಿ ಅಖಿಲಭಾರತೀಯ ವಾರ್ಷಿಕ ಜಾತ್ರೆಯೊಂದು ಕೂಡಬೇಕಿದ್ದಿತು. ಸಾಬರಮತಿಯಲ್ಲಿಯೆ ಈ ಜಾತ್ರೆ ಕೂಡತಕ್ಕದ್ದೆಂದು ಸರ್ವೋದಯ ಸಮಾಜ ಸಮಿತಿಯು ನಿರ್ಧರಿಸಿದ್ದಿತು. ಈ ಜಾತ್ರೆಯ ಕಾಲಕ್ಕೆ ಸಾಬರಮತಿಯಲ್ಲಿಯೆ ಸೇವಕರ ವಾರ್ಷಿಕ ಸಮ್ಮೇಲನವನ್ನು ಕರೆಯಬೇಕೆಂದೂ ಸಮಿತಿಯವರು ನಿರ್ಧರಿಸಿದ್ದರು ಆದರೆ ಗುಜರಾಥದಲ್ಲಿಯ ಬರಗಾಲ ಪರಿಸ್ಥಿತಿಯ ಮೂಲಕ ಆ ಸ್ಥಳವನ್ನು ಬಿಟ್ಟುಗೊಡಬೇಕಾಯಿತು. ಆ ನಂತರ ಈ ಮೊದಲನೇ ಜಾತ್ರೆಯನ್ನು ರಾಜಘಾಟದಲ್ಲಿ ಸೇರಿಸಬೇಕೆಂದು ನಿರ್ಧರಿಸಲಾಯಿತು. ಮತ್ತು ಸಮ್ಮೇಲನವನ್ನು ಹಿಂದುಗಡೆ ಮಾಡಬೇಕೆಂದು ಗೊತ್ತಾಯಿತು. ಆದರೆ ಸರ್ವೋದಯ ದಿನವನ್ನು ಒಂದೇ ಸ್ಥಳಕ್ಕೆ ಮರ್ಯಾದಿತಗೊಳಿಸುವದು ಶಕ್ಯವಿಲ್ಲೆಂದು ಅನುಭವದಿಂದ ಕಂಡುಬಂದಿತು. ಅಂತೆಯೇ ಇಡೀ ಹಿಂದುಸ್ತಾನದಲ್ಲಿ ಅದು ಆಚರಿಸಲ್ಪಟ್ಟಿತು. ಅಲ್ಲದೆ ಕಳೆದ ವರುಷ ಫೆಬ್ರುವರಿ ೧೨ ಕ್ಕೆ ಗಾಂಧೀಜಿಯ ಚಿತಾಭಸ್ಮ ಎಲ್ಲೆಲ್ಲಿ ವಿಸರ್ಜಿತವಾಯಿತೋ ಆ ಸ್ಥಳಗಳಲ್ಲೆಲ್ಲ ಮೇಳಾ ಕೂಡಿಸಬೇಕೆಂಬುದರ ವಿಚಾರವು ಬಹುಶಃ ಮೂರ್ತಸ್ವರೂಪಕ್ಕೆ ಬಂದಿತು. ಈ ರೀತಿಯಾಗಿ ಮೊದಲು ವಿಚಾರ ಮಾಡಿದ್ದಕ್ಕಿಂತ ವ್ಯಾಪಕ ರೀತಿಯಲ್ಲಿ ಮೇಳಾ ಕೂಡಿಬಿಟ್ಟಿತು. ಮೊದಲಿನ ವಿಚಾರ ಬಿಟ್ಟುಗೊಟ್ಟು ಇದನ್ನೇ ಒಪ್ಪಿಕೊಳ್ಳಬೇಕೆಂದು ಗೊತ್ತಾಯಿತು. ಆದುದರಿಂದ ಸರ್ವೋದಯ ದಿನವನ್ನು ಜನೆವರಿ ೩೦ ಕ್ಕೆ ಪ್ರತಿಯೊಂದು ಮನೆಯಲ್ಲಿ ಮತ್ತು ಪ್ರತಿಯೊಂದು ಹಳ್ಳಿಯಲ್ಲಿ ಆಚರಿಸಬೇಕೆಂದು ಗೊತ್ತಾಯಿತು ಮತ್ತು ಚಿತಾಭಸ್ಮದ ವಿಸರ್ಜನೆಯಾದ ಸ್ಥಳಗಳಲ್ಲೆಲ್ಲ ಫೆಬ್ರುವರಿ ೧೨ ಕ್ಕೆ ಮೇಳಾಗಳನ್ನು ಕೂಡಿಸಬೇಕೆಂದೂ ಗೊತ್ತು ಮಾಡಲಾಯಿತು.

### ಸಮ್ಮೇಲನ

ಇನ್ನುಳಿಯಿತು ಸಮ್ಮೇಲನದ ವಿಷಯ. ಇದನ್ನು (ರಾವ) ದಲ್ಲಿ ಕೂಡಿಸಲಾಯಿತು. ಯೋಜನೆಯೆಲ್ಲ ಯೋಗ್ಯ ರೀತಿಯಲ್ಲಿ ಮಾಡಲ್ಪಟ್ಟಿದ್ದರೂ ಸಮ್ಮೇಲನದ ದಿನಗಳು ಅನುಕೂಲವಾಗಿರಲಿಲ್ಲೆಂದು ಕಂಡುಬಂದಿತು. ಎಲ್ಲ ಶಾಸನ ಸಭಾಸದಸ್ಯರಿಗೂ ಸರಕಾರಿ ಸದಸ್ಯರಿಗೂ ಇದು ತುಂಬ ಕೆಲಸ ವಿದ್ದ ಕಾಲ. ಮುಂಗಡ ಪತ್ರದ ಚರ್ಚೆ ನಡೆದಿರುವಾಗ ಯಾನನೊಬ್ಬನೂ ತನ್ನ ಸ್ಥಳವನ್ನು ಸಹಜವಾಗಿ ಬಿಡಲಾರನು. ಅವರ ಅನುಪಸ್ಥಿತಿಯು ಕಾಣಬರುವಂತಹದಿದ್ದಿತು. ಆದರೆ ಅದಕ್ಕಾಗಿ ಅವರು ದೋಷಾರ್ಹರಾಗಲಾರರು.

ಸುದೀರ್ಘ ಚರ್ಚೆಯ ನಂತರ ಇನ್ನು ಮುಂದೆ ರಾಷ್ಟ್ರೀಯ ಸಪ್ತಾಹದಲ್ಲಿ (ಎಪ್ರಿಲ ೬ ರಿಂದ ೧೩) ರಚನಾತ್ಮಕಕಾರ್ಯಕರ್ತರ ಸಮ್ಮೇಲನವನ್ನು ಕೂಡಿಸಬೇಕೆಂದು ನಿರ್ಧರಿಸಲಾಯಿತು. ಮತ್ತು ಅದರ ಜೊತೆಯಲ್ಲಿಯೆ ಸರ್ವೋದಯ ಸಮ್ಮೇಲನವನ್ನು ಕೂಡಿಸಬೇಕೆಂದು ಗೊತ್ತುಮಾಡಲಾಯಿತು. ಬೇರೆ ಬೇರೆ ಉದ್ದೇಶಗಳಿಗಾಗಿ ಪ್ರತಿವರ್ಷ ಬೇರೆ ಬೇರೆ ಸಮ್ಮೇಲನಗಳನ್ನು ಕೂಡಿಸುವದು ಅವಶ್ಯವಿಲ್ಲ. ಉದಾಹರಣಾರ್ಥವಾಗಿ ಚರಕಸಂಘ, ಗ್ರಾಮೋದ್ಯೋಗ ಸಂಘ ತಾಲೀಮಿ ಸಂಘ, ಹರಿಜನ ಸೇವಕಸಂಘ, ಗೋಸೇವಾ ಸಂಘ, ಕಸ್ತೂರಬಾ ಟ್ರಸ್ಟ ಇತ್ಯಾದಿಗಳ ಮೊದಲಾದವು ವರುಷಕ್ಕೆ ಒಮ್ಮೆಯಾದರೂ ಕಾರ್ಯಕರ್ತರುಗಳ ವಿಚಾರಣೆಗಾಗಿ ಮತ್ತು ತಾಂತ್ರಿಕ ವಿಷಯದ ಚರ್ಚೆಗಾಗಿ ಕೂಡಬೇಕಾಗುವದು. ಇನ್ನುಮುಂದೆ ಗಾಂಧಿ ಸ್ಮಾರಕ ನಿಧಿಯ [illegible] ಸಭೆಯೂ ಕೂಡಬೇಕಾಗುವದು. ಇವುಗಳಲ್ಲಿ ಹಲವಾರು ಸಂಸ್ಥೆಗಳಲ್ಲಿ ಇವರಲ್ಲಿ ಅನೇಕರು ಸದಸ್ಯರಾಗಿರುವರು. ಸದ್ಯದ ಪರಿಸ್ಥಿತಿಯಲ್ಲಿ ಒಂದು ಸಮ್ಮೇಲನದ ನಂತರ ಮತ್ತೊಂದು ಸಮ್ಮೇಲನಕ್ಕೆ ಹೋಗುವದೆಂದರೆ ಇಡೀ ವರುಷ ಕಾರ್ಯಕ್ರಮವನ್ನೇ ಇಟ್ಟುಕೊಳ್ಳಬೇಕಾಗುವದು. ಕಾಲ, ಹಣ ಮತ್ತು ದೈನಿಕ ಕಾರ್ಯಕ್ರಮದ ಹಾನಿ ಇದರಿಂದಾಗುವದು— ಇವೆಲ್ಲ ಸಮ್ಮೇಲನಗಳನ್ನು ಒಂದೇ ಸ್ಥಳದಲ್ಲಿ ೮-೧೦ ಇಲ್ಲವೆ ಅದಕ್ಕೂ ಹೆಚ್ಚು ದಿನಗಳ ವರೆಗೆ ಇಟ್ಟಿದ್ದಾದರೆ ಎಲ್ಲರಿಗೂ ಹೆಚ್ಚು ವಿರಾಮವೆನಿಸಬಹುದು ಮತ್ತು ವ್ಯವಹಾರ್ಯವೂ ಆಗುವದು ಮತ್ತು ಸರ್ವೋದಯ ಸಮಾಜದ ಸದಸ್ಯರಿಗೆ ಪರಸ್ಪರ ಸಂಬಂಧ, ಅಭ್ಯಾಸ ಮತ್ತು ವಿಚಾರವಿನಿಮಯ ಮಾಡಿಕೊಳ್ಳಲಿಕ್ಕೆ ಅನುಕೂಲವಾಗುವದು. ಪ್ರದರ್ಶನವನ್ನೂ ಏರ್ಪಡಿಸಬಹುದು.

ಚರಕ ಸಪ್ತಾಹ ಮತ್ತು ಸರ್ವೋದಯ ಪಕ್ಷ ಇವು ರಾಷ್ಟ್ರಕ್ಕೆ ವಿಕೇಂದ್ರೀಕೃತ ಕಾರ್ಯಕ್ರಮವನ್ನು ಈ ಮೊದಲು ಕೊಟ್ಟವೆ. ಪ್ರವೃತ್ತ ಕಾರ್ಯಕರ್ತರೆಲ್ಲ ತಮ್ಮ ಸ್ಥಳಗಳ ಸಮೀಪದಲ್ಲಿಯೆ ಇರಬೇಕೆಂದು ಅದರ ಆಶಯ. ಅಲ್ಲದೆ ಅವು ಅನುಕ್ರಮವಾಗಿ ಮಳೆ ಮತ್ತು ಚಳಿಗಾಲದಲ್ಲಿ ಬರುವವು ಆದುದರಿಂದಲೇ ದೊಡ್ಡ ದೊಡ್ಡ ಸಮ್ಮೇಲನಗಳನ್ನು ಕೂಡಿಸಲು (ಆಗಾಗ ಅಂಥ ಸಮ್ಮೇಲನಗಳನ್ನು ಕೂಡಿಸುತಿದ್ದರೂ) ಆ ಕಾಲ ಅನುಕೂಲವಾದುವು.

೧೯೪೭ ನೇ ಆಗಷ್ಟಕ್ಕಿಂತ ಮೊದಲು ರಾಷ್ಟ್ರೀಯ ಸಪ್ತಾಹಕ್ಕೆ ವಿಶೇಷಾರ್ಥವಿದ್ದಿತು. ಬ್ರಿಟಿಶ ರಾಜ್ಯದ ನಿಷೇಧಕ ಸಪ್ತಾಹ ಅದಾಗಿತ್ತು. ಆ ಉದ್ದೇಶವೀಗ ಇರುವುದಿಲ್ಲ. ಆದರೆ ಐತಿಹಾಸಿಕ ಹಿನ್ನೆಲೆಯುಳ್ಳ ಒಳ್ಳೆ ಪ್ರಸಿದ್ಧಿ ಹೊಂದಿದ ಸಪ್ತಾಹವದು. ಅದು ಸರ್ವೋದಯ ಸಪ್ತಾಹವಾಗಿ ಪರಿಣಮಿಸಿ ಅದರ ಸಂಪೂರ್ಣ ಮತ್ತು ಹೆಚ್ಚು ಯೋಗ್ಯ ರೀತಿಯಿಂದ ಉಪಯೋಗ ಮಾಡಿಕೊಳ್ಳುವದು ಅವಶ್ಯವಾಗಿದೆ. ಕೆಲ ಕಡೆ ಆಗ ಬಹಳ ಬಿಸಿಲಿದ್ದರೂ ಆ ಕಾಲ ಅಷ್ಟೇನು ಕ್ಲೇಶಕರವಾದ ಕಾಲವಲ್ಲ. ಜನರು ಕಡಮೆ ಬಟ್ಟೆ ಮತ್ತು ಸಾಮಾನುಗಳನ್ನು ತೆಗೆದುಕೊಂಡು ಹೋಗಬಹುದು. ಮಳೆಯ ಅಂಜಿಕೆಯೂ ಇರುವದಿಲ್ಲ. ವಿಶೇಷ ಪರಿಶ್ರಮವಿಲ್ಲದೆ ನಮ್ಮ ಧುರೀಣರು ಸಮ್ಮೇಲನಗಳಿಗೆ ಬರಬಲ್ಲರು. ರಚನಾತ್ಮಕ ಕಾರ್ಯಕ್ರಮಗಳಲ್ಲಿ ಬಹಳಷ್ಟು ಕೆಲಸ ಯಾವ ಸ್ಥಳದಲ್ಲಿ ಆಗಿದೆಯೋ ಅಂಥಲ್ಲಿ ಈ ಸಮ್ಮೇಲನಗಳನ್ನು ಕೂಡಿಸಬಹುದು. ಈಯೆಲ್ಲ ದೃಷ್ಟಿಯಿಂದ ವಿಚಾರಮಾಡಿ ಇನ್ನುಮುಂದೆ ರಾಷ್ಟ್ರೀಯ ಸಪ್ತಾಹದ ಕಾಲಕ್ಕೆ ಸರ್ವೋದಯ ಸಮ್ಮೇಲನ ಕೂಡಿಸಬೇಕೆಂದು ನಿರ್ಧರಿಸಲಾಯಿತು.

ಕಿ. ಘ. ಮಶ್ರೂವಾಲಾ

ರಾವ ೧೨-೩-೪೯

೨

ನನ್ನ ಮೊದಲನೆ ಲೇಖದಲ್ಲಿ ನಾನು "ಮಹಾತ್ಮಾ ಗಾಂಧಿ- ಒಂದು ಭಾಷ್ಯ" Mahatma Gandhi- An Interpretation) ಎಂಬ ಡಾ. ಈ ಸ್ಟ್ಯಾನ್ಲಿ ಜೋನ್ಸರ ಪುಸ್ತಕದ ಪ್ರಸ್ತಾವ ಮಾಡಿದ್ದೇನೆ. 'ಸರ್ವೋದಯ'ದ ಅಭಿಪ್ರಾಯವನ್ನು ಅವರು ಪಾಶ್ಚಾತ್ಯ ಜಗತ್ತಿನ ಮುಂದೆ ಈ [illegible]ಯಾಗಿ ಮುಂದಿಟ್ಟಿದ್ದಾರೆ.

ಸರ್ವೋದಯವೆಂಬ ಚಳವಳಿ ಇನ್ನೊಂದಿದೆ. ಇದರ ಶಬ್ದಾರ್ಥ 'ಎಲ್ಲರ ಏಳಿಗೆ'. ಈ ಚಳವಳಿಗೆ ಒಂದು ಸಂಸ್ಥೆಯಿಲ್ಲ. ಮಹಾತ್ಮಾ ಗಾಂಧಿಯವರ ಮುಖ್ಯ ತತ್ವಗಳಾದ ಸತ್ಯ ಮತ್ತು ಅಹಿಂಸೆಗಳನ್ನು ಮನಃಪೂರ್ವಕವಾಗಿ ಒಪ್ಪಿಕೊಳ್ಳುವವರಲ್ಲಿ ವ್ಯಾಪ್ತವಾದ ಭಾವದ ಪ್ರತೀಕವದು. ಅದೊಂದು ಆಧ್ಯಾತ್ಮಿಕ ಬಾಂಧವ್ಯ. ವರ್ಷಕ್ಕೊಮ್ಮೆ ಸಾಧ್ಯವಿದ್ದಷ್ಟು ಜನರು "ಮೇಳ" ದಲ್ಲಿ ಕೂಡಿ, ಮಹಾತ್ಮರ ಕಲ್ಪನೆಗಳನ್ನು ಭಾರತದಲ್ಲಿಯೂ ಜಗತ್ತಿನಲ್ಲಿಯೂ ಪಸರಿಸಲು ಏನು ಮಾಡಬೇಕೆಂದು ಚರ್ಚಿಸುವರು. ಜಗತ್ತಿನ ಬೇರೆ ಭಾಗದ ಜನರ ಸಹಕಾರವನ್ನೂ ಕೋರುವರು. ಸರ್ವೋದಯವು [illegible] ಸಾಕಾರ [illegible] ಕಾರಣವಾಗಿ [illegible] ಬೇಕೆಂದು [illegible] "ಗಾಂಧೀಜಿಯ ಕಲ್ಪನೆಗಳಿಗಿಂತ ಸತ್ಯ ಅಹಿಂಸೆಗಳನ್ನು ಅಂಗೀಕರಿಸುವದೇ ಸಾಕು, ಅಷ್ಟರಿಂದಲೇ ಅವರು ಸಾಮಾಜಿಕ ಸದಸ್ಯರಾದಂತಾಗುವರು."

ಈ ಉದ್ದೇಶದ ಫಲವಾಗಿ ಜಗತ್ತಿನ ಬೇರೆ ಬೇರೆ ಭಾಗಗಳಿಂದ ಸರ್ವೋದಯ ಸಮಾಜದೊಡನೆ ಸಂಬಂಧವಿಟ್ಟುಕೊಳ್ಳುವ ಇಚ್ಛೆಯನ್ನು ವ್ಯಕ್ತಗೊಳಿಸುವ ಅನೇಕ ಪತ್ರಗಳು ಬಂದವು. ಸಮ್ಮೇಲನದಲ್ಲಿ ಅಂಗೀಕೃತವಾದ ಎರಡನೆ ಗೊತ್ತುವಳಿಯಲ್ಲಿ ಈ ಗೆಳೆಯರನ್ನು ಸಮಾಜಕ್ಕೆ ಸ್ವಾಗತಿಸಿ, ಜಗತ್ತಿನ ಅನೇಕ ಭಾಗಗಳಲ್ಲಿ ಆಗಬಹುದಾದ ರಚನಾತ್ಮಕ ಕಾರ್ಯಗಳು ಸಣ್ಣ ಎಂಥಾದರೂ ಇವೆಯೆಂದು ಅವರ ಗಮನಕ್ಕೆ ತರಲಾಗಿದೆ. ಉದಾಹರಣೆಗಾಗಿ ಮೂಲಶಿಕ್ಷಣ, ಗ್ರಾಮೋದ್ಯೋಗ, ಮದ್ಯನಿಷೇಧ, ವರ್ಣ ಮತ್ತು ಜನಾಂಗಿಕ ಭೇದಭಾವಗಳನ್ನು ಕಡಿಮೆಗೊಳಿಸುವದು, ಕುಷ್ಠರೋಗಿಗಳ ಸೇವೆ ಇತ್ಯಾದಿ. ಇವಲ್ಲದೆ ಶಾಂತಿಗಾಗಿ ಪ್ರಯತ್ನಿಸುವದೂ ಖಾದೀ ಸಂದೇಶವೂ ಇದ್ದೇ ಇವೆ. ಕೊನೆಯ ಅಂಗವನ್ನು ಉಲ್ಲೇಖಿಸಿದ್ದರಿಂದ ಕೆಲವರಿಗೆ ಆಶ್ಚರ್ಯವಾಗಬಹುದು. ಆದರೆ ಶ್ರೀ ಕಾಕಾಸಾಹೇಬ ಕಾಲೇಲಕರರು ಅನೌಪಚಾರಿಕ ಸಭೆಯಲ್ಲಿಯೂ ಶ್ರೀ ವಿನೋಬಾ ಅವರು ಸಮ್ಮೇಲನದ ಪ್ರಥಮ ದಿನದ ಭಾಷಣದಲ್ಲಿಯೂ ತೋರಿಸಿಕೊಟ್ಟಂತೆ ಖಾದಿಯು ಗಾಂಧೀಜಿಯ ರಚನಾತ್ಮಕ ಕಾರ್ಯಕ್ರಮದಲ್ಲಿ— ಭಾರತಕ್ಕೆ ಮಾತ್ರವಲ್ಲ, ಇಡಿ ಜಗತ್ತಿಗೇ, ಕೇಂದ್ರ ಸ್ಥಾನದಲ್ಲಿದೆಯೆಂದು ಲಕ್ಷಿಸಬೇಕು. ಖಾದಿಯು ಅರಳೆಯ ಬಟ್ಟೆಗಳಿಗೆ ಮಾತ್ರ ಮಿತವಾಗಿಲ್ಲವೆಂದೂ ನಾವು ನೆನಪಿನಲ್ಲಿಡಬೇಕು. ಕೈನೂಲಿನ ಕೈಮಗ್ಗದ ರೇಶ್ಮೆ ಮತ್ತು ಉಣ್ಣೆಯ ಬಟ್ಟೆಯೂ ಖಾದಿಯೆ. ಸರ್ವೋದಯ ಧ್ಯೇಯವನ್ನು ಪರಿಪೂರ್ಣವಾಗಿ ವಿಚಾರಿಸಿದವರಿಗೆ ಭಾರತದಲ್ಲಿ ಮಾತ್ರವಲ್ಲ, ಯುರೋಪ ಅಮೇರಿಕೆಗಳಲ್ಲಿನ ಅತ್ಯಂತ ಯಾಂತ್ರಿಕ ಮತ್ತು ಔದ್ಯೋಗೀಕೃತ ರಾಷ್ಟ್ರಗಳಲ್ಲಿಯೂ ಜೀವನದ ಈ ಪ್ರಾಥಮಿಕ ಅವಶ್ಯಕತೆಯ ವಿಷಯದಲ್ಲಿ ಪ್ರತಿಯೊಂದು ಮನೆಯನ್ನೂ ಸ್ವಾವಲಂಬಿಯಾಗಿ ಮಾಡುವದವಶ್ಯವೆಂದು ಮನವರಿಕೆಯಾಗದಿರದು. ನಿಜವಾಗಿ ಶ್ರೀ ವಿನೋಬಾ ಅವರು ಕೆಲ ತಿಂಗಳ ಹಿಂದೆ ತೋರಿಸಿಕೊಟ್ಟಂತೆ ಸುಧಾರಿತ ಸಮಾಜದಲ್ಲಿ ಆಹಾರಕ್ಕಿಂತಲೂ ವಸ್ತ್ರವೇ ಹೆಚ್ಚು ಮಹತ್ವದ್ದಾಗಿದೆ. ಕೆಲದಿನಗಳಿಂದ ಹಸಿದಿದ್ದರೂ ನಾವು ನಾಚಿಕೊಳ್ಳದೆ ಜಗತ್ತಿನಲ್ಲಿ ಬೇಕಾದ ಕಡೆ ಅಡ್ಡಾಡಬಹುದು ಆದರೆ ಅಧುನಿಕ ಸುಧಾರಿತ ಸಮಾಜದಲ್ಲಿ ನಮ್ಮ ಸ್ವಂತ ಮನೆಯಲ್ಲಿ ಕೂಡ ಎಲ್ಲ ಕಡೆ ನಿರ್ವಸ್ತ್ರರಾಗಿ ತಿರುಗಾಡಲು ನಮಗೆ ಅನುಮತಿಯಿಲ್ಲ. [illegible] ಇದು ಆಹಾರೋತ್ಪಾದನೆಗಿಂತಲೂ ಸುಲಭವಾಗಿದೆ. ಅಲ್ಲದೆ ನೈತಿಕ ಕ್ಷೇತ್ರದಲ್ಲಿ ಖಾದಿಯೆಂಬುದು ಶಾಂತ ಅಹಿಂಸಾತ್ಮಕ [illegible] ಹೆಗ್ಗುರುತಾಗಿದೆ. ಅದು ಉದ್ಯಮಶೀಲತೆಯ, ಜೀವನಕ್ಕಾಗಿ ದುಡಿಯುವ, ಅಲೋಭತನದ ಮತ್ತು [illegible] ದ್ಯೋತಕವೂ ಆಗಿದೆ. ಸರ್ವೋದಯ ಚಳವಳಿಯ ಅಭಿಮಾನಿಗಳು ಇದನ್ನು ಎಷ್ಟು ಮಟ್ಟಿಗೆ ಮನಗಾಣುವರೊ ನಾವರಿಯೆವು. ಆದರೆ ಶ್ರೀ ಕಾಕಾಸಾಹೇಬ ಕಾಲೇಲಕರರು ದಿಟ್ಟತನದಿಂದ [illegible] ಈ ಮಾತು [illegible] ಸ್ವೀಕೃತವಾಗುವ ಮತ್ತು ವಿದೇಶಗಳಿಗೆ ಹೋಗುವ ಭಾರತೀಯರು ಅತ್ಯಂತ ಔದ್ಯೋಗಿಕ ರಾಷ್ಟ್ರದ ಮುಂದೆ ರಾಟೆ ಮತ್ತು ಕೈಮಗ್ಗವನ್ನು [illegible] ಪ್ರತಿಪಾದಿಸಲು [illegible] ದಿನಗಳು ಬಂದೇಬರುವವು.

ಅನಂತರ ಸರ್ವ ಸೇವಾಸಂಘದ ಕಾರ್ಯದರ್ಶಿಗಳಾದ ಶ್ರೀ [illegible] ಒಂದೇ [illegible] ಮತ್ತು [illegible] ಸಮೀಕೃತವಾದ ಎಲ್ಲ ರಚನಾತ್ಮಕ ಸಂಸ್ಥೆಗಳ ವಿಷಯದಲ್ಲಿ ಕಳೆದ [illegible] ಆ ಸಂಸ್ಥೆಗಳ [illegible] ವಿವರಪೂರ್ಣವಾದ [illegible] ಅದರಿಂದ [illegible] ಇಲ್ಲಿ [illegible] ಎರಡು [illegible] ಎತ್ತಿ ಹೇಳಬಹುದು, [illegible]

— … ನೇ ಪುಟಕ್ಕೆ

# ಕ ರ್ಮ ವೀ ರ

ಶ್ರೀಮುಜ್ಜಾಲುಕ್ಕ ವಿಕ್ರಮ ವರ್ಷ ೮೮೦
ಫಾಲ್ಗುಣ ವ॥ ೧೪ ಸೋಮವಾರ


## ಅಟ್ಲಾಂಟಿಕ ಒಪ್ಪಂದ

ರಾಜಕೀಯ- ಅರ್ಥಿಕ ಪ್ರಭುತ್ವದ ಲಾಲಸೆ ಜಗತ್ತಿನಲ್ಲಿಯ ಪ್ರಮುಖ ರಾಷ್ಟ್ರಗಳಲ್ಲಿ ಹೆಚ್ಚುತ್ತ ನಡೆದಂತೆ ಅಂತರ್‌ರಾಷ್ಟ್ರೀಯ ರಾಜಕಾರಣವು ಕಲಿಬಿಲಿಯಾಗಹತ್ತಿದೆ. ಕೋರಿಕೆಯ ಒಪ್ಪಂದಗಳು ಮಾಡಲ್ಪಟ್ಟು ಸಂಘ ಸಂಸ್ಥೆಗಳೂ ನಿರ್ಮಾಣ ಹೊಂದುತ್ತವೆ. ಜಗತ್ತಿನಲ್ಲಿ ಶಾಂತಿಸ್ಥಾಪನೆಯ ಘನೋದ್ದೇಶದಿಂದ ಇವೆಲ್ಲ ಅಸ್ತಿತ್ವದಲ್ಲಿ ಬಂದರೆ ಒಳಿತು; ಆದರೆ ಈವರೆಗಿನ ಅನುಭವವನ್ನು ನೋಡಿದರೆ ಅಂತರ್‌ರಾಷ್ಟ್ರೀಯ ರಂಗದಲ್ಲಿ ಪ್ರಾಮಾಣಿಕತೆ, ನಿಃಸ್ವಾರ್ಥ ಮತ್ತು ಅಶೋಷಣವೃತ್ತಿ ಕಡಮೆಯಾಗುತಿರುವದು ಸ್ಪಷ್ಟವಾಗದಿರದು. ಇತ್ತೀಚೆ ಅಮೇರಿಕೆ, ಬ್ರಿಟನ್ ಫ್ರಾನ್ಸ, ಬೆಲ್ಜಿಯಂ, ಕಾನಡಾ, ಲಕ್ಸೆಂಬರ್ಗ ಮತ್ತು ಹಾಲಂಡ ಈ ಏಳು ರಾಷ್ಟ್ರಗಳು ಕೂಡಿ ಹೊಸದೊಂದು ಒಪ್ಪಂದವನ್ನು ಮಾಡಿಕೊಂಡಿರುವವು. ಇನ್ನು ಅಯಿದು ರಾಷ್ಟ್ರಗಳೂ ಇದಕ್ಕೆ ಕೂಡಿವೆ. ಅಟ್ಲಾಂಟಿಕ ಒಪ್ಪಂಗವೆಂದು ನಾಮಕರಣ ಹೊಂದಿದೆ ಇದು.

ಯುಕ್ತ ರಾಷ್ಟ್ರಸಂಘದ ತಾಮ್ರಪಟದಲ್ಲಿ ಹೇಳಿದ ಸೂಚನೆಗಳನ್ವಯ ಜಾಗತಿಕ ಭದ್ರತೆ, ಶಾಂತಿ, ನ್ಯಾಯ ಇವುಗಳಿಗೆ ಧಕ್ಕೆ ತಟ್ಟದಂತೆಯೂ ಯುಕ್ತ ರಾಷ್ಟ್ರಸಂಘದ ಉದ್ದೇಶಕ್ಕೆ ಬಾಧೆ ಬರದಂತೆಯೂ ಶಾಂತವಾದ ರೀತಿಯಿಂದ ಅಂತರ್‌ರಾಷ್ಟ್ರೀಯ ವಿವಾದಗಳನ್ನು ಬಿಡಿಸಲು ಈ ರಾಷ್ಟ್ರಗಳು ಒಪ್ಪಿಕೊಂಡಿವೆ. ತಾವು ಇಟ್ಟುಕೊಂಡ ಈ ಎಲ್ಲ ಉದ್ದೇಶಗಳು ಸಫಲವಾಗುವಂತೆ ಈ ರಾಷ್ಟ್ರಗಳು ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಪ್ರಯತ್ನಿಸುವವಲ್ಲದೆ ಪರಕೀಯ ಸಶಸ್ತ್ರ ದಾಳಿಗಳನ್ನೆದುರಿಸಲು ಸಿದ್ಧವಾಗಿವೆ. ಯುರೋಪ ಅಥವಾ ಉತ್ತರ ಅಮೇರಿಕೆಯಲ್ಲಿ ದಾಳಿಯಾದರೆ ಯುಕ್ತ ರಾಷ್ಟ್ರಸಂಘದ ತಾಮ್ರಪಟದ ೫೧ ನೆಯ ಕಲ್ಮಿನನ್ವಯ ಸಂರಕ್ಷಣೆಯ ಬಗ್ಗೆ ಇರುವ ಅಧಿಕಾರವನ್ನುಪಯೋಗಿಸಿ ಸಂರಕ್ಷಣೋಪಾಯ ಕೈಕೊಳ್ಳಬೇಕಲ್ಲದೆ ಉತ್ತರ ಅಟ್ಲಾಂಟಿಕ ಪ್ರದೇಶದ ಭದ್ರತೆಯ ದೃಷ್ಟಿಯಿಂದ ಸಶಸ್ತ್ರ ದಲಗಳ ಉಪಯೋಗವನ್ನೂ ಮಾಡತಕ್ಕದ್ದೆಂದು ಗೊತ್ತುಮಾಡಿಕೊಳ್ಳಲಾಗಿದೆ. ಇದೇ ಬಗೆಯ ಉದ್ದೇಶವನ್ನಿಟ್ಟುಕೊಂಡು ಸ್ಥಾಪಿತವಾದ ಯುಕ್ತ ರಾಷ್ಟ್ರ ಸಂಘವು ಅಸ್ತಿತ್ವದಲ್ಲಿ ಇರುವಾಗ ಈ ದ್ವಾದಶರಾಷ್ಟ್ರಗಳ ಒಕ್ಕೂಟದ ಅವಶ್ಯಕತೆಯೇನಿದ್ದಿತೋ ತಿಳಿಯದು. ಇಂತಹ ಸಣ್ಣಸಣ್ಣ ಗುಂಪುಗಳನ್ನು ನಿರ್ಮಿಸಿಕೊಳ್ಳುವುದರಿಂದ ವಿಶ್ವಶಾಂತಿಯ ಘನೋದ್ದೇಶವು ಸಾಧಿಸುವದು ಕಠಿನವಾಗುವದು. ಯುಕ್ತರಾಷ್ಟ್ರ ಸಂಘದಂತಹ ಒಂದೇ ಜಾಗತಿಕ ಸಂಸ್ಥೆಯು ಮುಖಾಂತರ ಜಗತ್ತಿನಲ್ಲಿ ಶಾಂತಿ ಸುವ್ಯವಸ್ಥೆಯನ್ನು ಸಂಸ್ಥಾಪಿಸಲು ಪ್ರಯತ್ನಿಸುವದೇ ಶ್ರೇಷ್ಠ ಮತ್ತು ಸರ್ವಸಮ್ಮತ ಮಾರ್ಗವು.

ಇದರಿಂದ ಪೂರ್ವ ಪಶ್ಚಿಮ ರಾಷ್ಟ್ರಗಳಲ್ಲಿ ತಿಕ್ಕಾಟವುಂಟಾಗಬಹುದೆಂದು ಈಗಾಗಲೆ ಭೀತಿ ವ್ಯಕ್ತಪಡಿಸಲಾಗುತ್ತದೆ. ರಶಿಯವು ಈ ಒಪ್ಪಂದವನ್ನು ವಿರೋಧಿಸಲಣಿಯಾಗಿದ್ದು ಕಳೆದ ವರುಷ ಪ್ರಾರಂಭಿಸಲ್ಪಟ್ಟ ಕೊಮಿನ್‌ಫಾರ್ಮ ಸಂಸ್ಥೆಯು ಇದರ ಮೊದಲ ಮೆಟ್ಟಲೆಂದೂ ಹೇಳಲಾಗುತ್ತದೆ. ಇದು ರಶಿಯವು ಈ ಒಪ್ಪಂದಕ್ಕೆ ಕೊಟ್ಟ ಉತ್ತರವೆಂದೇ ಹೇಳಲಾಗುತ್ತದೆ. ಪಶ್ಚಿಮ ಪೂರ್ವ ರಾಷ್ಟ್ರಗಳಲ್ಲಿ ಯಾವದೇ ಬಗೆಯ ತಿಕ್ಕಾಟವುಂಟಾಗದಂತೆ ಅಟ್ಲಾಂಟಿಕಒಪ್ಪಂದವು ಕಾರ್ಯರೂಪದಲ್ಲಿ ಬಂದರೆ ಸ್ವಾಗತಾರ್ಹವೆ. ಆದರೆ ತದ್ವಿರುದ್ಧ ಇದು ಶಾಂತಿಗೆ ಮಾರಕವಾದರೆ ಇದಕ್ಕೆ ಬೇಗ ಸಮಾಧಿ ಕಟ್ಟುವದು ಅವಶ್ಯ.



## ಅಂತರ್ ವಸಾಹತು ಸುದ್ದಿ ಪರಿಷತ್ತಿಗೆ ತೆರಳಿದ ಹಿಂದೀ ಶಿಷ್ಟಮಂಡಳ



ಹಿಂದೀ ಶಿಷ್ಟಮಂಡಳವು ಸೋಮವಾರ ದಿವಸ ಕರಾಚಿಗೆ ಹೊರಟಾಗ ವೆಲಿಂಗಟನ್ ವಿಮಾನ ಸಿಲ್ದಾಣದಲ್ಲಿ ತೆಗೆದ ಚಿತ್ರ.
ಎಡದಿಂದ ಬಲಕ್ಕೆ:– ಬಿ. ಎಲ್. ಶರ್ಮಾ, ಜಿ. ನಟರಾಜನ, ಎಂ. ಎಲ್ ಚಾವಲಾ, ಆರ್. ಆರ್. ದಿವಾಕರ (ಧುರೀಣರು), ಛಿಡೆ, ದುರ್ಗಾದಾಸ, ಟಿ. ಕೆ. ಘೋಷ, ಪಿ. ಸಿ. ಚೌಧರಿ ಮತ್ತು ಆರ್. ಶ್ರೀನಿವಾಸರಾವ

# ವಾ ರ ದ ಸಿಂ ಹಾ ವ ಲೋ ಕ ನ

## ಫ್ರೆಂಚ ವಸಾಹತುಗಳು

ಬ್ರಿಟಿಶ ಸಾಮ್ರಾಜ್ಯದಲ್ಲಿ ಸೂರ್ಯನೆಂದೂ ಮುಳುಗುವದಿಲ್ಲ ಎಂದು ಮುಂತಾಗಿ ಹೆಮ್ಮೆ ಕೊಚ್ಚಿಕೊಳ್ಳುತಿದ್ದ ಬ್ರಿಟಿಶರು ಹಿಂದುಸ್ತಾನದ ಮೇಲಿನ ತಮ್ಮ ಪ್ರಭುತ್ವವನ್ನು ಬಿಟ್ಟುಗೊಟ್ಟು ಸ್ವದೇಶಕ್ಕೆ ತೆರಳಿರುವಾಗ ಇಲ್ಲಿರುವ ಫ್ರೆಂಚ, ಪೋರ್ತುಗೀಜದಂಥ ಸಣ್ಣ ರಾಷ್ಟ್ರಗಳು ಯುಕ್ತಿ ಪ್ರಯುಕ್ತಿಗಳಿಂದ ಇಲ್ಲಿಯೆ ತಳವೂರಲು ಪ್ರಯತ್ನಿಸುವದು ಹಾಸ್ಯಾಸ್ಪದವಾಗಿದೆ. ಪ್ರಜಾಭಿಪ್ರಾಯದ ನೆವ ಮುಂದೆ ಮಾಡಿ ಈ ರಾಷ್ಟ್ರಗಳು ಸ್ವಾರ್ಥವನ್ನು ಸಾಧಿಸಿಕೊಳ್ಳುವದು ಕಂಡು ಬರುವದು. ಹಿಂದುಸ್ತಾನದಲ್ಲಿಯ ಫ್ರೆಂಚ ವಸಾಹತುಗಳಲ್ಲಿಯ ನಗರಸಭೆಗಳ ಪ್ರತಿನಿಧಿಗಳು ಕಳೆದ ವಾರ ಸಭೆಸೇರಿ ವಿಚಿತ್ರ ಗೊತ್ತುವಳಿಯೊಂದನ್ನು ಸ್ವೀಕರಿಸಿದ್ದು ಅದರ ಮುಖ್ಯಾಶಯವನ್ನು ಇದೇ ಸಂಚಿಕೆಯಲ್ಲಿ ಬೇರೆ ಕಡೆ ಕೊಟ್ಟಿದ್ದೇವೆ. ನಗರ ಸಭೆಗಳ ಇತಿಹಾಸವನ್ನು ಬಲ್ಲವರಿಗೆ ಅಲ್ಲಿ ಈ ಬಗೆಯ ಗೊತ್ತುವಳಿ ಸ್ವೀಕೃತವಾದುದು ಆಶ್ಚರ್ಯಕರವೆಂದೆನಿಸದು. ಅಲ್ಲದೆ ಇಡೀ ಜನತೆಯ ಅಭಿಪ್ರಾಯವೂ ಅದಾಗದು. ವಸಾಹತುಗಳಲ್ಲಿ ಆಡಳಿತೆಯಕ್ರಮವನ್ನು ಕೈಕೊಳ್ಳುವದು ನ್ಯಾಯ್ಯವು ಮತ್ತು ಸಮಂಜಸವು. ಅದಕ್ಕಾಗಿ ಮೊದಲೆ ಸ್ವಾಯತ್ತತೆಯ ಕರಾರು ಹಾಕುವದು ಯಾವ ಬಗೆಯಿಂದಲೂ ನ್ಯಾಯ್ಯವಾಗದು. ಸ್ವಾಯತ್ತತೆಯ ಮೋಹವನ್ನು ತೋರಿ ಫ್ರೆಂಚ ಕಮೀಶನರರು ಜನತೆಯನ್ನು ವಂಚಿಸಲು ಪ್ರಯತ್ನಿಸುವದು ಸರಿಯಾದುದಲ್ಲ. ಮತಗಣನೆಯು ನ್ಯಾಯ್ಯವಾದ ರೀತಿಯಲ್ಲಿ ಸಾಗುವಂತೆ ನೋಡಿಕೊಳ್ಳುವದು ಅವಶ್ಯವಾಗಿದೆ. ಅದೇರೆ ಏನೇ ಪ್ರಯತ್ನ ಮಾಡಿದರೂ ಈ ವಸಾಹತುಗಳು ಇನ್ನು ಮುಂದೆ ತನ್ನ ಅಧೀನದಲ್ಲಿ ಉಳಿಯಲಾರವೆಂಬುದರ ಮರ್ಮವನ್ನು ತಿಳಿದುಕೊಂಡು ಫ್ರೆಂಚ ಸರಕಾರವು ತಾನಾಗಿಯೇ ಈ ಪ್ರದೇಶಗಳ ಮೇಲಿನ ತನ್ನ ಪ್ರಭುತ್ವವನ್ನು ಸ್ವತಂತ್ರ ಭಾರತ ಸರಕಾರಕ್ಕೆ ಒಪ್ಪಿಸಿಕೊಟ್ಟು ಸ್ವದೇಶದ ದಾರಿ ಹಿಡಿಯುವದು ಹಿತಕರವಾಗಿದೆ. ಇದರಿಂದ ನಿರರ್ಥಕವಾದ ಭಾವೀ ಘರ್ಷಣೆಗೂ ಅವಕಾಶ ವುಳಿಯಲಾರದು.

## ಸ್ವಾಗತಾರ್ಹ ನಿರ್ಧಾರ

"ಎರಡು ವರುಷಗಳಲ್ಲಿ ಹಿಂದುಸ್ತಾನವು ಆಹಾರ ವಿಷಯಗಳಲ್ಲಿ ಸ್ವಾವಲಂಬಿಯಾಗುವಂತೆ ನೋಡಿಕೊಳ್ಳಲಾಗುವದು. ಅತಿವೃಷ್ಟಿ, ಬೆಳೆಗೆ ರೋಗ ಬೀಳುವದು ಮೊದಲಾದ ಕಾರಣಗಳಿಂದ ಬರಗಾಲ ಬಿದ್ದರೆ ಅದನ್ನು ಎದುರಿಸಲು, ಆಹಾರ ಧೋರಣ ಸಮಿತಿಯ ಸಲಹೆಯಂತೆ ಕೇಂದ್ರ ಧಾನ್ಯ ಸಂಗ್ರಹವನ್ನು ಮಾಡಲು ಮಾತ್ರ ವಿದೇಶಗಳಿಂದ ಆಹಾರ ಧಾನ್ಯಗಳನ್ನು ತರಿಸಲಾಗುವದು" ಎಂದು ಹಿಂದುಸ್ತಾನ ಸರಕಾರದ ಆಹಾರ ಮಂತ್ರಿಗಳಾದ ಶ್ರೀ ಜಯರಾಮದಾಸ ದೌಲತರಾಮರು ಹಿರಿಯೋಲಗದಲ್ಲಿ ಆಹಾರ ಕಾಪಿಯ ಬೇಡಿಕೆಗಳ ಮೇಲೆ ಭಾಷಣ ಮಾಡುತ್ತ ಘೋಷಿಸಿದರು. ಸರಕಾರವು ಇಟ್ಟುಕೊಂಡ ಈ ಧೋರಣವು ಮತ್ತು ಮಾಡಿಕೊಂಡ ನಿರ್ಧಾರವು ಸ್ವಾಗತಾರ್ಹವಾಗಿವೆಯೆಂಬಲ್ಲಿ ಯಾವ ಸಂದೇಹವೂ ಇಲ್ಲ. ಆಹಾರ ಪದಾರ್ಥಗಳ ಆಯಾತಗಳಿಗೆ ನಮ್ಮ ಎಲ್ಲ ಡಾಲರುಗಳು ಕರಗಿ ಹೋದರೆ ಅವಶ್ಯಕವಾದ ಇತರ ಪದಾರ್ಥಗಳನ್ನು ತರಿಸುವದಕ್ಕೆ ಹಣವೇ ಉಳಿಯದು. ಹಿಂದುಸ್ತಾನದಂಥ ಕೃಷಿಪ್ರಧಾನ ವಿಶಾಲ ರಾಷ್ಟ್ರದಲ್ಲಿ ಸಾಕಷ್ಟು ಆಹಾರ ಪದಾರ್ಥಗಳು ಬೆಳೆಯುವುದಿಲ್ಲ ಎಂದು ಪರರಾಷ್ಟ್ರಗಳ ಮುಂದೆ ಮೋರೆ ಒಣಗಿಸಿಕೊಂಡು ಹೇಳುವದೂ ಹಾಸ್ಯಾಸ್ಪದ. ಸರಕಾರದವರು ಒಕ್ಕಲಿಗರು ಮತ್ತು ಜಮೀನದಾರರು ಒಮ್ಮನಸ್ಸಿನಿಂದ ಮತ್ತು ನಿಶ್ಚಿತ ನಿರ್ಧಾರದಿಂದ ಪ್ರಯತ್ನಿಸಿದ್ದಾದರೆ ಆಹಾರ ಮಂತ್ರಿಗಳು ಘೋಷಿಸಿದಂತೆ ಹಿಂದುಸ್ತಾನವು ಆಹಾರ ವಿಷಯದಲ್ಲಿ ಸ್ವಾವಲಂಬಿಯಾಗುವಲ್ಲಿ ಸಂದೇಹವಿಲ್ಲ. ಈ ವರೆಗೆ ಪರಕೀಯ ಸರಕಾರವು ನಮ್ಮ ರಾಷ್ಟ್ರವನ್ನು ಸ್ವಾವಲಂಬಿಯನ್ನಾಗಿ ಮಾಡುವತ್ತ ಗಮನಿಸದೆ, ಅವಶ್ಯಬಿದ್ದಾಗೆಲ್ಲ ಹೊರಗಿನಿಂದಲೆ ಧಾನ್ಯ ತರಿಸಿ ಆಹಾರದ ಕೊರತೆಯಾಗದಂತೆ ನೋಡಿಕೊಂಡದ್ದರಿಂದ ಅದರ ಕಹಿಫಲಗಳನ್ನು ನಾವೀಗ ಭೋಗಿಸಬೇಕಾಗಿದೆ. ಸರಕಾರವು ಇಟ್ಟುಕೊಂಡ ಈ ಘನೋದ್ದೇಶವು ಸಫಲವಾಗುವಂತೆ ಎಲ್ಲರೂ ಮನಸಾ ಪ್ರಯತ್ನಿಸಿ ಹಿಂದುಸ್ತಾನವು ಆಹಾರ ವಿಷಯದಲ್ಲಿ ಸ್ವಾವಲಂಬಿಯಾಗುವಂತೆ ನೋಡಿಕೊಳ್ಳಬೇಕೆಂದು ಬಲವಾಗಿ ಸೂಚಿಸುತ್ತೇವೆ.

## ಅಣುಶಕ್ತಿಯ ಸಂಶೋಧನೆ

ರಾಷ್ಟ್ರದಲ್ಲಿ ವಿಧಾಯಕ ಕಾರ್ಯಗಳಿಗಾಗಿ ಅಣುಶಕ್ತಿಯ ಸಂಶೋಧನಕಾರ್ಯವನ್ನು ಹಿಂದುಸ್ತಾನ ಸರಕಾರವು ಡಾ. ಭಾಭಾ ಇವರ ನೇತೃತ್ವದಲ್ಲಿ ನಡೆಸುವದು, ವಿನಾಶಕವಾದ ಅಟಂಬಾಂಬಿನ ಉತ್ಪಾದನೆಯ ವಿಚಾರವನ್ನು ಹಿಂದುಸ್ತಾನ ಸರಕಾರವು ಮಾಡಿಲ್ಲ ಎಂದು ಮುಂತಾಗಿ ಹಿರಿಯೋಲಗದಲ್ಲಿ ಕೇಳಲಾದ ಪ್ರಶ್ನೆಗಳಿಗೆ ಮುಖ್ಯ ಮಂತ್ರಿ ಪಂಡಿತ ಜವಾಹರಲಾಲರು ಉತ್ತರ ಕೊಟ್ಟರು. ಅಣುಶಕ್ತಿಯ ವಿಚಾರದಲ್ಲಿದ್ದ ಕೆಲ ಗುಪ್ತ ಸಂಗತಿಗಳನ್ನು ಬಿಟ್ಟುಗೊಟ್ಟರೂ ಉಳಿದ ವಿಷಯಗಳನ್ನೆಲ್ಲ ನಮ್ಮ ವಿಜ್ಞಾನಿಗಳು ಅರಿಯಬಹುದು ಎಂದೂ ಮುಖ್ಯ ಮಂತ್ರಿಗಳು ಹೇಳಿದರು. ಜಗತ್ತಿನಲ್ಲಿ ವಿಜ್ಞಾನ ಸಂಶೋಧನೆಯೆತ್ತ ಸಾಗಿರುವಾಗ ಹಿಂದುಸ್ತಾನವು ಹಿಂದೆ ಬೀಳದು. ಆದರೆ ಪರರಾಷ್ಟ್ರಗಳಿಟ್ಟುಕೊಂಡಂತೆ ಹಿಂದುಸ್ತಾನವು ಈ ಅಣುಶಕ್ತಿಯ ಉಪಯೋಗವನ್ನು ವಿಧ್ವಂಸಕ ಯೋಜನೆಗಳಲ್ಲಿ ಮಾಡಿಕೊಳ್ಳದಂತೆ ದಕ್ಷತೆ ವಹಿಸುವದು ಅವಶ್ಯವಾಗಿದೆ. ಸಂಶೋಧನೆಯ ಫಲವಾಗಿ ನಮ್ಮ ರಚನಾತ್ಮಕ ಕಾರ್ಯಗಳು ಹೆಚ್ಚು ಪ್ರಗತಿ ಹೊಂದುವದು ಇಷ್ಟವಾಗಿದೆ. ಆದರೆ ಈ ಮೊದಲು ಹೇಳಿದಂತೆ ವಿನಾಶಕ ಚಟುವಟಿಕೆಗಳಲ್ಲಿ ಇವುಗಳ ಉಪಯೋಗವಾಗದಂತೆ ಎಚ್ಚರಪಡುವದು ಮಾತ್ರ ಅತ್ಯವಶ್ಯವಾಗಿದೆಂದು ಪ್ರತ್ಯೇಕ ಹೇಳಬೇಕಿಲ್ಲ.

## ಸಮಗ್ರ ಗ್ರಾಮಸೇವೆ

ಬ್ರಿಟಿಶರ ಆಳಿಕೆಯ ಕಾಲದಿಂದ ಹದಗೆಟ್ಟ ಭಾರತದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವದಕ್ಕಾಗಿ ಮಹಾತ್ಮಾ ಗಾಂಧಿಯವರು, ತಮ್ಮ ಕಡೆಗೆ ದೇಶದ ಧುರೀಣತ್ವ ಬಂದಂದಿನಿಂದ ಪ್ರಯತ್ನಿಸುತಿದ್ದರು. ದಿಲ್ಲಿಯ ಅಧಿಕಾರ ಹಳ್ಳಿಗಳಿಗೆ ಬರಬೇಕು, ಹಳ್ಳಿಗಳೇ ಉಗಮ ಸ್ಥಾನಗಳಾಗಬೇಕೆಂಬುದೆ ಅವರ ಹಿರಿಗುರಿಯಾಗಿದ್ದಿತು. ಅವರ ಮರಣದ ನಂತರ ಅವರ ಶಿಷ್ಯೋತ್ತಮರೂ ಇದೇ ಮಾತನ್ನು ಪ್ರತಿಪಾದಿಸುತಿರುವರು. ಅಲ್ಲಲ್ಲಿ ಸಮಗ್ರ ಗ್ರಾಮಸೇವಾ ಶಿಬಿರಗಳನ್ನು ಸ್ಥಾಪಿಸಿ ಸರ್ವೋದಯ ಸಮಾಜವನ್ನು ನಿರ್ಮಿಸುವ ಪ್ರಯತ್ನಗಳು ನಡೆದಿವೆ. ಇಂಥದೊಂದು ಸಮಗ್ರ ಗ್ರಾಮಸೇವಾ ಶಿಬಿರವು ಕಳೆದ ವಾರ ಗರಗಿನಲ್ಲಿ ಪ್ರಾರಂಭವಾಗಿದೆ. ಅಖಿಲ ಭಾರತ ಚರಖ ಸಂಘದ ಅಧ್ಯಕ್ಷರಾದ ಶ್ರೀ ಧೀರೇಂದ್ರಭಾಯಿ ಮುಜುಮದಾರರು ಮತ್ತು ಕಾರ್ಯದರ್ಶಿಗಳಾದ ಶ್ರೀ ಕೃಷ್ಣದಾಸ ಗಾಂಧಿಯವರು ಈ ಸಮಾರಂಭಕ್ಕೆ ಬಂದಿದ್ದರು. ಈ ಸಮಯದಲ್ಲಿ ಶ್ರೀ ಧೀರೇಂದ್ರಭಾಯಿಯವರು ಮನನೀಯ ವಿಚಾರಗಳನ್ನು ವ್ಯಕ್ತಪಡಿಸಿ ಸರ್ವೋದಯ ಸಮಾಜ ಸ್ಥಾಪನೆಯ ಅವಶ್ಯಕತೆಯನ್ನು ಪ್ರತಿಪಾದಿಸಿದರು– ರಾಷ್ಟ್ರೀಯ ಹಾಗು ಆರ್ಥಿಕ ತತ್ವದ ಮೇಲೆ ನಾವು ಹೊಸ ಪಕ್ಷವನ್ನು ಕಟ್ಟಬೇಕು. ಭಾಷೈಕ, ಪ್ರಾಂತೀಯ ಹಾಗು ಸಾಂಪ್ರದಾಯಿಕ ಜಾತೀಯ ಪಕ್ಷ ಕಟ್ಟಿದರೆ ನಮ್ಮ ನಾಶವು ಖಂಡಿತ. ಅಮೇರಿಕೆ ಇಲ್ಲವೆ ಇಂಗ್ಲಂಡ ಯಾವದನ್ನು ನಾವು ಸೇರಿದರೂ ಅವು ನಮ್ಮನ್ನು ನುಂಗತಕ್ಕವೇ. ಆದುದರಿಂದ ಯಾವ ರಾಷ್ಟ್ರಕ್ಕೂ ಸೇರದೆ ಗಾಂಧೀಜಿಯ ತತ್ವದಂತೆ ಸರ್ವೋದಯ ಸಮಾಜವನ್ನು ಸ್ಥಾಪಿಸುವದು ಹಿತಕರ ಎಂದು ಅವರು ಹೇಳಿದ್ದು ಉಚಿತವಾಗಿದೆ.

## ಸರ್ವೋದಯ ಸಮ್ಮೇಲನ

(೭ ನೆಯ ಪುಟದಿಂದ)

ಇನ್ನು ಮೇಲೆ ಅದು ರಾಷ್ಟ್ರೀಯ ವಾರದಲ್ಲಿ ಸರ್ವೋದಯ ಪರಿಷತ್ತನ್ನು ಕರೆವ ಕೆಲಸ ದಿಂದ ಸರ್ವೋದಯ ಸಮಾಜ ಸಮಿತಿಯನ್ನು ಮುಕ್ತಗೊಳಿಸುತ್ತದೆ; ಎರಡನೆಯದಾಗಿ, ಶ್ರೀ ಕಾಶೀನಾಥ ತ್ರಿವೇದಿಯವರ ಸಂಪಾದಕತ್ವ ದಲ್ಲಿ 'ಸರ್ವೋದಯ' ಎಂಬ ಹಿಂದುಸ್ತಾನೀ ಮಾಸಪತ್ರಿಕೆಯನ್ನು ಹೊರಡಿಸಲು ಅದು ನಿರ್ಧರಿಸಿದೆ. ಈ ಮಾಸಿಕದ ವಿವರಗಳಿನ್ನೂ ರೂಪಿತವಾಗಿಲ್ಲ; ಆದರೆ ಈ ಹೊಸ ಪತ್ರಿಕೆ ಹೊರಡಲು ಬಹಳ ಕಾಲ ಹಿಡಿಯಲಾರದೆಂದು ನಂಬಲಾಗಿದೆ.

ಈ ಕೆಲಸ ಮಾಡಿದ ಮೇಲೆ ಪರಿಷತ್ತು ವರ್ತ ಮಾನಕಾಲದ ಕೆಲವು ಅವಸರದ ಸಮಸ್ಯೆ ಗಳನ್ನು ಚರ್ಚಿಸಿತು. ನಿಯಂತ್ರಣ, ಲಾಭ ಬಡಕತನ, ಕಳ್ಳಪೇಟೆಗಾರಿಕೆ, ಲಂಚ, ಭ್ರಷ್ಟಾಚಾರ, ಅತಿಮೂಲ್ಯ ಮುಂತಾದ ಕೇಡುಗಳ ಭಾರ ಹೊತ್ತು ಜನರು ಗದ್ಗದಕಂಠ ದಿಂದ ಕರುಣಕ್ರಂದನ ಮಾಡುತ್ತಿದ್ದಾರೆ. ಈ ಕೇಡುಗಳ ನಿವಾರಣೆಗೆ ಸರಕಾರದ ಮುಖ ನೋಡುತ್ತ ಕುಳಿತುಕೊಳ್ಳುವ ಪ್ರವೃತ್ತಿ ಹೆಚ್ಚಾಗುತ್ತಿದೆ. ಇಂದು ಘಟಿತವಾಗಿರುವ ಸರ ಕಾರಗಳಿಗೆ ದಂಡನೆಯ ಮೂಲಕ ಈ ಕೇಡು ಗಳನ್ನು ಓಡಿಸುವ ಒಂದೇ ಒಂದು ಮಾರ್ಗ ಗೊತ್ತಿದೆ. ಆದರೆ ಅನುಭವದಿಂದ ಹೇಳುವು ದಾದರೆ ದಂಡನೆ ಕೇಡುಗಳನ್ನು ಕೊನೆಗೊಳಿಸ ಲಾರದು. ಜನರಲ್ಲೀ ಸ್ವತಃ ನೈತಿಕ ಪ್ರಬೋಧ ವಾದಲ್ಲದೆ, ಬರಿಯ ಶಿಕ್ಷೆ ಅವನ್ನು ತಡೆಯಲಾರದು. ಏಕೆಂದರೆ, ರಾಜ್ಯದ ಆಡಳಿತೆಗಾರರಾದರೂ ಆ ಅಪರಾಧಿ ಜನರ ಸಮಾಜದಿಂದಲೇ ಬಂದವರು. ತಮ್ಮನ್ನು ಸಾಕಿ ಸಲಹಿದ ಸಮಾಜಕ್ಕಿಂತ ಹೆಚ್ಚಿನ ನೈತಿಕಮಟ್ಟ ಅವರಿಗಿರಲಾರದು. ಆಡ ಳಿತೆಯ ಕೆಲಸವನ್ನು ಆಯ್ದ ಸುಪರೀಕ್ಷಿತ ವರ್ಗದವರಿಗೊಪ್ಪಿಸದೆ ಎಲ್ಲ ವರ್ಗದವರಿಗೂ ತೆರೆದಿಟ್ಟಿರುವಾಗ ಹೀಗಾಗುವುದು ವಿಶೇಷತಃ ಹೆಚ್ಚು. ಆದರಿಂದಕೇಡುಗಳನ್ನು ಕೊನೆಗೊಳಿಸ ಬೇಕಾದರೆ ಇಡೀ ಸಮಾಜದ ನೀತಿನಿಯಮ ಗಳ ಮಟ್ಟವನ್ನೇ ಮೇಲಕ್ಕೆ ತರುವುದು ಅವ ಶ್ಯಕವೆನಿಸುವುದು. ಶ್ರೀ ಗುಲಜಾರಿಲಾಲ ನಂದರು ಈ ವಿಷಯವನ್ನು ಸಮರ್ಥವಾಗಿ ವಿವರಿಸಿದ್ದಾರೆ.

ಗೋದ್ರಾದ ಶ್ರೀ ಮಾಮಾಸಾಹೇಬ ಫಡಕೆ ಯವರು ಒಳ್ಳೆ ಕಳಕಳಿಯ ಭಾಷಣಮಾಡಿ ಹರಿಜನರ ಸಮಸ್ಯೆಗಳನ್ನು ಸಮ್ಮೇಲನದ ಮುಂದೆ ಮಂಡಿಸಿದರು. ಸ್ವತಂತ್ರ ಹಿಂದು ಸ್ತಾನದ ಬೇರೆ ಬೇರೆ ಸರಕಾರಗಳು ಕಾಯದೆ ಮಾಡಿ ಹರಿಜನರ ಸಾಮಾಜಿಕ ಅಪಾತ್ರತೆ ಗಳನ್ನು ದೂರಮಾಡಿದಂದಿನಿಂದ ಅನೇಕ ಕಾರ್ಯಕರ್ತರಲ್ಲಿ ಕೃತಾರ್ಥತೆಯ ಅಸತ್ಯವಾದ ಭಾವನೆ ಬಂದಿದೆ. ಹರಿಜನ ಸಮಸ್ಯೆಯೀಗ ಬಗೆಹರಿದು ಬಿಟ್ಟಂತಾಗಿದೆ ಮತ್ತು ಹರಿಜನರೀಗ ಹಿಂದುಳಿದ ವರ್ಗದ ದರ್ಜೆಯಲ್ಲಿರಿಸಲ್ಪಟ್ಟಿರು ವರು ಎಂದು ಅವರ ಭಾವನೆಯಾಗಿದೆ. ಈ ಹಿಂದುಳಿದ ವರ್ಗದವರಾದರೋ ಹರಿಜನರಂತೆ ಅಸ್ಪೃಶ್ಯರಾಗಿ ಪರಿಣಮಿಸಲ್ಪಡುತಿಲ್ಲವಾದರೂ ಆರ್ಥಿಕ ಮತ್ತು ಶೈಕ್ಷಣಿಕ ದೃಷ್ಟಿಯಿಂದ ಅಷ್ಟೆ ಹಿಂದುಳಿದವರು ಮತ್ತು ಹತ್ತಿಕ್ಕಲ್ಪಟ್ಟವರು ಆಗಿರುವರು. ಸಾಮಾನ್ಯವಾದ ದೃಷ್ಟಿಯಿಂದ ಇದೀ ಸಮಸ್ಯೆಯನ್ನು ಇನ್ನು ಮುಂದೆ ವಿಚಾರಿ ಸಲು ಅವಕಾಶವಿದೆಯೆಂದು ಕೆಲವರು ಭಾವಿಸುವರು. ವಸ್ತುತಃ ಹರಿಜನರ ಸಮಸ್ಯೆ ಮತ್ತು ಹಿಂದುಳಿದ ವರ್ಗ ದವರ ಸಮಸ್ಯೆಗಳು ತೀರ ಭಿನ್ನವಾಗಿವೆ ಎಂಬುದನ್ನು ಶ್ರೀ ಫಡಕೆಯವರು ತೋರಿಸಿ ಕೊಟ್ಟರು. ಮೊದಲನೆಯದಾಗಿ ಹರಿಜನರ ಅಪಾ ತ್ರತೆಗಳನ್ನು ಕಾಯದೆಯಿಂದ ದೂರಮಾಡಿ ದ್ದರೂ ಸಮಾಜದಲ್ಲಿ ಈಗಲೂ ಅವು ಅಸ್ತಿತ್ವ ದಲ್ಲಿ ಇವೆ. ಎರಡನೆಯದಾಗಿ ಸ್ಪೃಶ್ಯಹಿಂದುಳಿದ ವರ್ಗದವರು ಒಂದೇ ಭಾಗದಲ್ಲಿ ಇರುವರು ಮತ್ತು ಬಹುಸಂಖ್ಯರಾಗಿ ಇರುವರು ಹರಿಜ ನರು ಸಾಮಾನ್ಯವಾಗಿ ಕೆಲವೆ ಮನೆಗಳಿದ್ದ ಸಣ್ಣ ಸಣ್ಣ ಗುಂಪುಗಳಲ್ಲಿ ಇರುವರು. ಅವರು ಬೇರೆ ಬೇರೆ ಹಳ್ಳಿಗಳಲ್ಲಿ ಹಂಚಲ್ಪಟ್ಟಿರುವರು ಮತ್ತು ಬಹುಶಃ ಯಾವಸ್ಥಳದಲ್ಲಿಯೂ ಅವರು ಎರಡನೆಯವರಿಗಿಂತ ಬಹುಸಂಖ್ಯರಾಗಿರುವ ದಿಲ್ಲ. ಆದುದರಿಂದ ಅವರು ಯಾವಾಗಲೂ ಸವರ್ಣ ಹಿಂದುಗಳ ಕೃಪಾಪೋಷಿತರಾಗಿಯೆ ಇರಬೇಕಾಗುವದು, ಮತ್ತು ಕಾಯದೆಯ ಸಹಾಯವನ್ನು ಅವರು ಪಡೆಯಬಹುದಾಗಿ ದ್ದರೂ ಅದನ್ನು ಪಡೆಯುವದು ಅವರಿಗೆ ಅಶಕ್ಯ ವಾಗಿದೆ. ಹಿಂದುಳಿದ ವರ್ಗದವರು ಬಹು ಸಂಖ್ಯರಾಗಿದ್ದು ಹೆಚ್ಚುಮತಗಳುಳ್ಳವರಾಗಿರು ವುದರಿಂದ ರಾಜಕೀಯ ಕಾರ್ಯಕರ್ತರು ಅವರ ಹಕ್ಕು ಬಾಧ್ಯತೆಗಳನ್ನು ಪುರಸ್ಕರಿಸುವಲ್ಲಿ ನಿರ ತರಾಗಿರುವರು. ಆದರೆ ಹರಿಜನರಸ್ಥಿತಿ ಹಾಗಿ ರುವದಿಲ್ಲ. ರಾಜಕೀಯ ಉದ್ದೇಶವುಳ್ಳ ಸಾಮಾಜಿಕ ಕಾರ್ಯಕರ್ತನು ಹರಿಜನ ಕಾರ್ಯಕರ್ತ ನಾದರೆ ವಿಶೇಷ ಲಾಭವನ್ನೇನೂ ಹೊಂದಲಾ ರನು. ಆದುದರಿಂದ ಹರಿಜನೋದ್ಧಾರ ಕಾರ್ಯವು ನಿಜವಾಗಿ ಯಶಸ್ವಿಯಾಗುವದು ಸವರ್ಣೀಯರ ಹೃದಯ ಪರಿವರ್ತನೆಯಾದಾ ಗಲೇ.

ಶ್ರೀ ಕಾಕಾಸಾಹೇಬ ಕಾಲೇಲಕರರೂ ಈ ಸಮಯವನ್ನು ಸಾಧಿಸಿ ಗಾಂಧಿ ವಸ್ತು ಸಂಗ್ರ ಹಾಲಯ ಮತ್ತು ಗಾಂಧೀ ಸಾಹಿತ್ಯ ಸಂಗ್ರ ಹದ ತಮ್ಮ ಯೋಜನೆಯನ್ನು ಸಭಿಕರ ಮುಂದೆ ಮಂಡಿಸಿದರು- ಗಾಂಧೀಜಿಗೆ ಸಂಬಂ ಧಿಸಿದ ವಸ್ತುಗಳನ್ನು ಎಲ್ಲಿ ಕಾಯ್ದಿಡಬೇಕೆಂ ಬುದನ್ನು ಕೊನೆಯದಾಗಿ ನಿರ್ಧರಿಸಲ್ಪಡುವ ವರೆಗೆ ಅವನ್ನು ಸಂಗ್ರಹಿಸಿ ಪ್ರಿನ್ಸ ಅಫ ವೆಲ್ಸಮ್ಯುಜಿಯಂದಲ್ಲಿ ಪ್ರದರ್ಶಿಸಬೇಕೆಂದೂ ಗಾಂಧೀ ಸಾಹಿತ್ಯವನ್ನು ರಾಯಲ್ ಏಶಿಯಾ ಟಿಕ ಸೊಸಾಯಿಟಿಯ ಲಾಯಬ್ರರಿಯಲ್ಲಿ ಇಡ ಬೇಕೆಂದೂ ನಿರ್ಧರಿಸಲಾಯಿತು.

ಅಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರು ಶ್ರೀ ವಿನೋಬಾ ಮತ್ತು ಶ್ರೀ ಕಾಕಾ ಕಾಲೇ ಲಕರರು, ಇವರು ಒಳ್ಳೆ ವಿಚಾರ ಪ್ರಚೋದಕ ಭಾಷಣ ಮಾಡಿದರು. ಶ್ರೀ ಶಂಕರರಾವ ದೇವ, ಆಚಾರ್ಯ ಕೃಪಲಾಣಿ ಮಿ. ಹೊರೇಸ ಅಲೆಕ್ಸಾಂಡರ, ಮಿಸ್ ಅಗಾಥಾ ಹ್ಯಾರಿಸನ್ ಮತ್ತು ಇನ್ನುಳಿದ ಹಲವರು ಮಹತ್ವದ ಭಾಗ ವಹಿಸಿದರು. ಇವುಗಳಲ್ಲಿ ಕೆಲವು ಭಾಷಣ ಗಳನ್ನು ಈ ಅಂಕಣಗಳಲ್ಲಿ ಪ್ರಕಟಿಸಲಾಗು ವದು. ಆದರೆ ಸಮ್ಮೇಲನದ ವಿವರವಾದ ವರದಿಗಾಗಿ ವಾಚಕರು ಸಮ್ಮೇಲನದ ಸಂಘಟ ಕರು ಪ್ರಸಿದ್ಧಿಸುವ ವರದಿಗಾಗಿ ತಡೆಯ ಬೇಕು. ಕಳೆದ ವರುಷದ ವಿವರವಾದ ವರ ದಿಯು ಹಿಂದಿಯಲ್ಲಿ ಪ್ರಸಿದ್ಧವಾಗಿದ್ದು ಅದರ ಪ್ರತಿಗಳಿಗಾಗಿ ಆರ್. ಎಸ್. ಧೋತ್ರೆ ಸೆಕ್ರೆಟರಿ ಸರ್ವೋದಯ ಸಮಾಜ ವರ್ಧಾ ಈ ವಿಳಾಸಕ್ಕೆ ಬರೆಯಬೇಕು.

ವರ್ಧಾ — ಕಿ. ಘ. ವಷ್ಟ

೧೬-೩-೪೯

# ಸತ್ಕಾರ್ಯಕ್ಕಾಗಿ ಚಳವಳಿ

(ಸರ್ವೋದಯ ಸಮ್ಮೇಲನದಲ್ಲಿ ಚರ್ಚಿಸ ಲ್ಪಟ್ಟ ವಿಷಯಗಳಲ್ಲಿ, ಎಲ್ಲ ಕೆಲಸಗಳಲ್ಲಿಯೂ ಪ್ರಾಮಾಣಿಕತೆ ಮತ್ತು ನಂಬಿಗತನಗಳಿಂದ ವ್ಯವಹರಿಸುವ ವಾತಾವರಣವನ್ನು ದೇಶದಲ್ಲಿ ನಿರ್ಮಾಣ ಮಾಡುವಂಥ ವ್ಯವಹಾರ್ಯ ಉಪಾಯಗಳನ್ನು ಹುಡುಕುವದೂ ಒಂದಾ ಗಿತ್ತು. ನಿಯಂತ್ರಣ, ಲಾಭಬಡಕತನ, ಕಳ್ಳ ಪೇಟೆ, ಮಿಶ್ರಣ ಮಾಡಿ ಮೋಸಗೊಳಿಸುವದು, ಲಂಚ ವಂಚನೆ, ಅಪ್ರಾಮಾಣಿಕತನ ಮೊದ ಲಾದವುಗಳ ಬಗ್ಗೆ ಪ್ರತಿಯೊಬ್ಬನೂ ದೂರಿ ಕೊಳ್ಳುತ್ತಾನೆ ಮತ್ತು ತನ್ನೊಬ್ಬನನ್ನು ಬಿಟ್ಟು ಉಳಿದ ಇಡಿ ಜಗತ್ತಿನ ತಪ್ಪುಗಳನ್ನೆಣಿಸು ತ್ತಾನೆ. ಪ್ರತಿಯೊಬ್ಬನೂ ಮೊದಲು ತನ್ನ ಹೃದಯವನ್ನುಪರೀಕ್ಷಿಸಿಎಚ್ಚರಗೊಳಿಸಿ, ಸ್ವತಃ ತಾನು ಸತ್ಯಸಂಧತೆಯಿಂದ ನಡೆದುಕೊಳ್ಳಲು ನಿಶ್ಚಯಿಸಬೇಕಾದ್ದು ಅತ್ಯಾವಶ್ಯಕವಾಗಿದೆ ಯೆಂಬದು ಸ್ಪಷ್ಟವಾಗಿಯೆ ಇದೆ. ಶ್ರೀ ಗುಲ ಜಾರಿಲಾಲ ನಂದಾ ಅವರು ಈ ವಿಚಾರದಲ್ಲಿ ಆಳವಾಗಿ ವಿಚಾರ ಮಾಡಿ, ತಮ್ಮ ಅಭಿಪ್ರಾಯ ಗಳನ್ನು ಬರೆದು ತಂದಿದ್ದರು. ಅವರು ಅವು ಗಳನ್ನು ಕೆಳಗೆ ಕಾಣಿಸಿದ ರೂಪದಲ್ಲಿ ಸಮ್ಮೇಲ ನದ ಮುಂದಿರಿಸಿದರು. ಇದು ಸರಿಯಾದ ದಿಶೆಯಲ್ಲಿ ಮಾಡಲ್ಪಟ್ಟ ಸೂಚನೆ. ಸದ್ವರ್ತ ನೆಯ ಮನೋವೃತ್ತಿಯುಳ್ಳ ಸ್ತ್ರೀಪುರುಷರು ಇದನ್ನು ಹೃತ್ಪೂರ್ವಕವಾಗಿ ಪರಿಗ್ರಹಿಸಿ ಆ ಪ್ರಕಾರ ನಡೆವಳಿಯನ್ನಿಟ್ಟುಕೊಂಡರೆ, ದೇಶ ದಲ್ಲಿ ಆತ್ಮಶುದ್ಧಿ ಮಾಡುವ ಸತ್ಕಾರ್ಯದಲ್ಲಿ ನೆರವು ನೀಡಿದ ಪುಣ್ಯಕ್ಕೆ ಅವರು ಭಾಗಿಗಳಾಗು ವರು. —ಕಿ. ಘ. ಮಶ್ರೂವಾಲಾ)

ನಮ್ಮ ದೇಶದಲ್ಲಿ ಒಂದು ಗಂಡಾಂತರದ ಸ್ಥಿತಿ ಉತ್ಪನ್ನವಾಗಿದೆ. ನಮ್ಮ ಎಲ್ಲ ಕ್ಲೇಶಗಳನ್ನು ಶೋಧಿಸಿ ನೋಡಿದರೆ ಅವು ಅನೀತಿಯಲ್ಲಿ ಬೇರು ಬಿಟ್ಟದ್ದು ಕಾಣಬರುವದು. ಈ ರೋಗವನ್ನು ನಾವು ಬೇಗನೆ ವಾಸಿ ಮಾಡ ದಿದ್ದರೆ, ಸಕಲ ಹಿಂದುಸ್ತಾನದಲ್ಲಿ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಕಗ್ಗತ್ತಲು ಕವಿದುಬಿಟ್ಟೀತು. ಸರ್ವ ಪ್ರಯತ್ನಗಳಿಂದ ಈ ಮಹಾವಿಪತ್ತನ್ನು ತಡೆಯಬೇಕು.

ಇದರಲ್ಲಿ ಸರಕಾರದ ಕರ್ತವ್ಯವೇನೋ ಇದ್ದೇ ಇದೆ. ಆದರೆ ಯೋಗ್ಯ ಧೋರಣೆಯೂ ಕಾರ್ಯನಿರ್ವಾಹಕರು ಕೈಕೊಂಡ ಕ್ರಮ ಗಳೂ ಯಶಸ್ವಿಯಾಗಬೇಕಾದರೆ, ಸರಕಾರ ವೆಲ್ಲಾದರೂ ಕರ್ತವ್ಯಪಾಲನೆಯಲ್ಲಿ ಪ್ರಮಾದ ಮಾಡಿದರೂ ಅದು ತನ್ನನ್ನು ತಿದ್ದಿ ಕೊಳ್ಳಲೇಬೇಕಾದ ಪರಿಸ್ಥಿತಿಯನ್ನು ಜನರು ನಿರ್ಮಿಸುವದು ಅತ್ಯವಶ್ಯ. ಅಧಿಕಾಧಿಕ ಜನರೂ ಸಂಸ್ಥೆಗಳೂ ಸದ್ವಿಚಾರ ಸದಾಚಾರ ಗಳಲ್ಲಿ ಪ್ರವೃತ್ತರಾಗಿ ತಾವು ಬಾಯಲ್ಲಿ ಹೊಗ ಳುವ ಮತ್ತು ಉಪದೇಶಿಸುವ ಆದರ್ಶಗಳನ್ನೂ ನಡೆವಳಿಯನ್ನೂ ಸ್ವತಃ ತಾವೇ ಆಚರಿಸ ತೊಡಗಿದರೆ ಮತ್ತು ಅನ್ಯರಲ್ಲಿ ಯಾವುವು ಕಂಡು ಬಂದರೆ ತಾವು ವಿಷಾದ ವ್ಯಕ್ತಗೊಳಿ ಸುವರೋ ಅಂಥ ನಡತೆಗಳಿಂದ ತಾವು ಸ್ವತಃ ದೂರವಾಗಿದ್ದರೆ ಮಾತ್ರ ಅಂಥ ಪರಿಸ್ಥಿತಿ ಉತ್ಪನ್ನವಾಗಬಹುದು. ಅಂಥ ಸ್ತ್ರೀಪುರು ಷರು ಕೆಳಗೆ ಕಾಣಿಸಿದ ಪ್ರತಿಜ್ಞೆಯನ್ನು ತಾವು ಸ್ವೀಕರಿಸುವದಲ್ಲದೆ ಅನ್ಯರೂ ಸ್ವೀಕರಿಸುವಂತೆ ಮನವೊಲಿಸಿದರೆ ಆತ್ಮಶುದ್ಧಿಯ ಚಳವಳಿಗೆ ಶುಭಾರಂಭವಾಯಿತೆಂದೇ ಹೇಳಬೇಕು.

### ಪ್ರತಿಜ್ಞೆ

ಮನುಷ್ಯನ ಇಲ್ಲವೆ ರಾಷ್ಟ್ರದ ಸತ್ವವೂ ಗೌರ ವವೂ ಆದರ ಪ್ರೇಮುಲ, ಪವಿತ್ರ ನಿಸ್ವಾರ್ಥ ಮತ್ತು ಪ್ರಾಮಾಣಿಕ ಗುಣಗಳನ್ನೇ ಅವಲಂ ಬಿಸಿವೆ. ಈ ವಿಶ್ವಾಸದಿಂದ ನಾನು ಈ ಕೆಳಗಿ ನಂತೆ ಸಾರುತ್ತೇನೆ.

೧

೧. ನಾನು ಕಳ್ಳಪೇಟೆಯಲ್ಲಿ ಕೊಳ್ಳಲಾರೆ. ಮತ್ತು ಮಾರಲಾರೆ.

೨. ನಾನು ಲಂಚವನ್ನು ಪಡೆಯಲಾರೆ, ಕೊಡಲಾರೆ.

೩. ನಾನು ನಿಶ್ಚಿತವಾದ ಸ್ವರೂಪಕ್ಕಿಂತ ಕೀಳ್ತರದ ವಸ್ತುಗಳನ್ನುಗೊತ್ತಿದ್ದು ಮಾರಲು ಪ್ರಯತ್ನಿಸಲಾರೆ ಮತ್ತು ಅಳತೆಯಲ್ಲಿ ಮೋಸ ಮಾಡಲಾರೆ.

೪. ಮಾರುವ ಸಾಮುಗ್ರಿಗಳಲ್ಲಿ ಬೆರಕೆ ಮಾಡಿ ಅದನ್ನು ಅಶುದ್ಧ ಮಾಡಲಾರೆ.

೫. ನಾನು ಯಾವನೊಬ್ಬನ ಮೇಲೆಯೂ ಸುಳ್ಳು ಆರೋಪವನ್ನು ಹೊರಿಸಲಾರೆ.

೬. ಯಾವ ಆರೋಪದ ಸತ್ಯತ್ವವನ್ನು ನಾನು ಶೋಧಿಸಿ ನೋಡಿಲ್ಲವೊ ಅದನ್ನು ಉಳಿ ದವರಲ್ಲಿ ನಾನು ಹಬ್ಬಿಸಲಾರೆ.

೭. ನಾನು ಕರ ಕೊಡುವದರಲ್ಲಿ ಮರೆಮೋಸ ಮಾಡಲಾರೆ.

೮. ಯಾವುದಾದರೊಂದು ಸಾರ್ವಜನಿಕ ಸಂಸ್ಥೆ ಅಥವಾ ಕಾರ್ಯದಲ್ಲಿ ನಾನು ಸಲಹೆಗಾರ ನಾಗಿ ಇಲ್ಲವೆ ಸರಕಾರದ ಕಾರ್ಯನಿರ್ವಾಹಕನಾಗಿ ನಾನು ಕೊಡಬಹುದಾದ ಸಲಹೆ ಇಲ್ಲವೆ ವಹಿಸ ಬಹುದಾದ ಪಾತ್ರದಲ್ಲಿ ಸ್ವಂತದ ಇಲ್ಲವೆ ನನಗೆ ಬೇಕಾದ ವಿಶಿಷ್ಟ ವ್ಯಕ್ತಿಗಳ ಲಾಭದ ದೃಷ್ಟಿ ಯಿಂದ ನಾನು ಪ್ರೇರಿತನಾಗಲಾರೆ.

೯. ತಿಕೀಟಿಲ್ಲದೆ ರೇಲು ಮೊದಲಾದವುಗಳಲ್ಲಿ ನಾನು ಸಂಚರಿಸಲಾರೆ.

೨.

ಕೆಳಗಿನವು ಸಮಾಜ ದ್ರೋಹದ ಕಾರ್ಯ ಗಳೆಂದು ನಾನು ನಂಬುತ್ತೇನೆ. ಅವುಗಳಿಂದ ನಾನು ದೂರ ಉಳಿಯುವದಲ್ಲದೆ ಅನ್ಯರನ್ನೂ ದೂರ ಉಳಿಸಲು ಸಾಧ್ಯವಿದ್ದಷ್ಟು ಪ್ರಯತ್ನಿ ಸುವೆ.

೧. ಅಯೋಗ್ಯ ರೀತಿಯಿಂದ ಯಾವುದೇ ಕೆಲಸ, ನೌಕರಿ ಮೊದಲಾದವುಗಳನ್ನು ಪಡೆ ಯುವದು ಇಲ್ಲವೆ ಕೊಡಿಸುವದು.

೨. ಅಯೋಗ್ಯ ರೀತಿಯಿಂದ ಯಾವು ದೊಂದು ಗುತ್ತಿಗೆ, ಲಾಯಸೆನ್ಸ ಅಥವಾ ಇತರ ಲಾಭದಾಯಕ ಸಂಗತಿಗಳನ್ನು ಸಂಪಾದಿಸು ವದು.

೩. ವ್ಯರ್ಥ ಮತ್ತು ದುಂದುಗಾರಿಕೆಯ ವೆಚ್ಚ ಮಾಡುವದು.

೪. ದುರ್ಲಕ್ಷ್ಯದಿಂದ ... ವರಿಸಲು ಮಲಾದಿಗಳನ್ನು ... ಅಥವಾ ಕಾಯ್ತಂಚೆ ಮಾಡುವದು.

..., ಪುತ್ರ ಸುಖಾಪೇಕ್ಷೆಯ ... ಆಡಂಬರಪ್ರಿಯತೆಯ, ಧನ ... ಈ ... ಅನಾಗರಿಕ ವೃತ್ತಿಯನ್ನು ಪ್ರೌಢ ತೊ... ಕನ ಸ್ವಭಾವಕ್ಕೊಪ್ಪುವಂತೆ ಖಂಡಿಸಿ ಯನ್ನು ಮದುವೆಯಾಗಲು ನಿರ್ಧರಿಸುತ್ತಿ ದ್ದನೋ ನೋಡಬಹುದಾಗಿತ್ತು. ನಾಯಿಕೆ ಹಳೆಯಕಾಲದ ಸಂಸ್ಕಾರ ಪಡೆದವಳಾಗಿದ್ದರೆ ಮತ್ತು ನಾಯಕನೊಡನೆ ಆವಳಿಗಿಷ್ಟು ಸರಿಗೆ

(ಮು... ...ಗಳೂರು ೪.

## ಯುದ್ಧದ ನೈತಿಕ ಪರ್ಯಾಯ

ಸಾಮಾನ್ಯವಾಗಿ ಸಾಮ್ರಾಜ್ಯ ಕೀವನಿರ್ಮಿಸಿ ಕೊಳ್ಳಲು, ಸೇಡು ತೀರಿಸಿಕೊಳ್ಳಲು ಮತ್ತು ರಾಜ್ಯ ಮತ್ತು ಇತರ ನಿಸರ್ಗ ಸಂಪತ್ತು ಗಳನ್ನು ಸಂಪಾದಿಸಲು ಅಥವಾ ಮಿಕ್ಕ ಜನ ಮತ್ತು ರಾಷ್ಟ್ರಗಳ ಮೇಲಿನ ಅಧಿಕಾರವನ್ನು ಪಡೆಯಲು ಅಥವಾ ವಿಜೇತ ರಾಷ್ಟ್ರದ ವಿಲಾಸ ಜೀವನದ ಸೌಕರ್ಯಕ್ಕಾಗಿ ಗುಲಾಮರನು ಹೊಂದಲು ಅಥವಾ ಅನ್ಯರಾಷ್ಟ್ರಗಳು ಅರ್ಜಿ ಸಿದ ಐಶ್ವರ್ಯವನ್ನು ಅಪಹರಿಸಲು ಯುದ್ಧ ವೊಂದು ಸಾಧನವೆಂದು ಬಳಸಿಕೊಳ್ಳಲಾಗು ತ್ತಿದೆ. ಈಚೆಗೆ ಯುದ್ಧಕ್ರಮ ಹೆಚ್ಚು ಹೆಚ್ಚಾಗಿ ಯಂತ್ರೀಕೃತವಾಗುತ್ತಬಂದಂತೆ, ಅದು ಔದ್ಯ ಮಿಕ ಉತ್ಪಾದಕರಿಗೆ ತಣಿಸಲಾರದ ಬೇಡಿ ಕೆಯ ಸಂತೆಯನ್ನು ಒದಗಿಸಿಕೊಟ್ಟಿದೆ. ಈ ಕಾರಣದಿಂದ ಅಪಪ್ರಚಾರದಿಂದ ಬಹುಸಂಖ್ಯರ ಸಹಾನುಭೂತಿಯನ್ನು ಪಡೆದು ಅಲ್ಪಕಾಲಿಕ ಲಾಭದ ಪ್ರಲೋಭನವನ್ನು ತೋರಿಸಿ ಅವರ ಮುಂದಿನ ಯೋಗಕ್ಷೇಮ ಸುರಕ್ಷಿತತೆಗಳನ್ನು ಹದಗೆಡಿಸಿ, ತಂತ್ರಗಾರರಾದ ಕೆಲವೇ ಜನರು ಯುದ್ಧಗಳನ್ನು ಮಾಡುತ್ತ ಬಂದಿದ್ದಾರೆ. ಇಷ್ಟೆಲ್ಲ ಇದ್ದರೂ, ವಿಲಿಯಂ ಜೇಮ್ಸರಂತಹ ತತ್ವಜ್ಞಾನಿಗಳು ಯುದ್ಧ ಹೂಡುವದರಲ್ಲಿ ಕೆಲವು ಒಳ್ಳೆಯ ಅಂಶಗಳಿವೆ ಎಂದು ಮನ್ನಿಸಿ ಕೊಟ್ಟಿದ್ದಾರೆ. ವಿನಾಶಕಾಂಶಗಳನ್ನೂ ಸಬ ಲರು ದುರ್ಬಲರನ್ನು ಶೋಷಿಸುವ ಬಯಕೆ ಯನ್ನೂ ಯುದ್ಧದಿಂದ ಕಿತ್ತೊಗೆದರೆ ಸಶಸ್ತ್ರ ಸೈನ್ಯಗಳನ್ನು ಪರವುಷ್ಯವೆನಿಸಿರುವದರಿಂದ ತಪ್ಪಿಸಿ ನಾವುರಾಷ್ಟ್ರದ ಸಾಂಸ್ಕೃತಿಕ ಬೆಳವಣಿಗೆ ಗಾಗಿ ದುಡಿವ ಒಂದು ಶಕ್ತಿಯನ್ನಾಗಿ ಮಾರ್ಪ ಡಿಸಬಹುದು. ಮನುಷ್ಯನ ವಿವಿಧ ಪ್ರತಿಭೆ ಗಳನ್ನು ಬೆಳೆಸಲು ಯುದ್ಧವು ಅವಕಾಶ ಕಲ್ಪಿಸಿ ಕೊಡುವದರಿಂದ ಅದು ಮಾನವನ ಏಳಿ ಗೆಗಾಗಿ ಒಂದು ಕರ್ತವ್ಯವನ್ನು ನಿರ್ವಹಿ ಸುತ್ತದೆ ಎಂದು ಅಂಥ ತತ್ವಜ್ಞಾನಿಗಳು ಮನ್ನಿಸಿದರು. ಆದುದರಿಂದ ಯುದ್ಧಕ್ಕೊಂದು ನೈತಿಕ ಪರ್ಯಾಯವನ್ನು ಕಂಡುಹಿಡಿಯಲು ಮಾರ್ಗವಾವುದೆಂದು ಅವರು ಹುಡುಕಾಡುತ್ತಿ ದ್ದರು. ಅವುಗಳ ವ್ಯಾಪ್ತಿಯುಪರಿಮಿತಪ್ರದೇಶ ದಲ್ಲಿದ್ದರೂ ಸಂರಕ್ಷಣದ ಹುಟ್ಟುಗುಣ, ಪ್ರತ್ಯು ತ್ಪನ್ನಮತಿತ್ವ ಮತ್ತು ರಚನಾತ್ಮಕ ಕೌಶಲ ಗಳಂತಹ ಮಾನವನ ಉನ್ನತ ಗುಣಗಳನ್ನೂ ಸೈನ್ಯಬಲವು ಪ್ರಕಾಶಿಸುವಂತೆ ಮಾಡಿತು. ಸಾಹಸಿಕತೆ, ಪ್ರಾಣಾರ್ಪಣಾಂತ ಧೈರ್ಯ, ಸ್ಥೈರ್ಯ, ಸಹಕೃತಕಾರ್ಯ ಮತ್ತು ಯಾವು ದಾದರೊಂದು ಮಹೋದ್ದೇಶಸಾಧನೆಗಾಗಿ ತ್ಯಾಗವೀರರಾಗಲು ಮನಸ್ಸುಮಾಡುವುದು ಈ ಗುಣಗಳನ್ನು ಅದು ಅಭಿವೃದ್ಧಿಗೊಳಿಸಿತು. ಸೈನ್ಯಬಲದ ಈ ವಿನಾಶಕ ಸಂಘಟನೆಗೆ ಯುಕ್ತ ವಾದ ರೂಪವನ್ನು ಕೊಡಲಾದರೆ ಯುದ್ಧದಲ್ಲಿ ತೋರುವ ಅಂಶಗಳನ್ನು ಮಾನವಕುಲದ ಉಪಕಾರಕ್ಕಾಗಿ ಬಳಸಲು ಸಾಧ್ಯವಾಗುವು ದೆಂದು ಅವರು ವಾದಿಸಿದರು. ಆದಕ್ಕಾಗಿ ವಿವಿಧ ರೀತಿನೀತಿಗಳ ಸಲಹೆ ಮಾಡಲಾಗಿದೆ. ನಮ್ಮ ನಾಡಿನಲ್ಲಿ ಇಂದು ನಮ್ಮ ಶಾಲೆ ಕಾಲೇ ಜುಗಳಲ್ಲಿ ಸೈನಿಕ ಶಿಕ್ಷಣ ಕೊಡಬೇಕೆಂದು ಸರಕಾರ ಆಲೋಚಿಸುತ್ತಿದೆ. ತರುಣವರ್ಗದಲ್ಲಿ ಶಿಸ್ತು ಮತ್ತು ಕ್ರಮಗಳನ್ನು ಅಳವಡಿಸಿ ಅವರ ದೇಹಶಕ್ತಿಯನ್ನು ಅಭಿವೃದ್ಧಿಗೆ ತರುವ ರಾಷ್ಟ್ರ ನಿರ್ಮಾಪಕ ಕಾರ್ಯವನ್ನಾಗಿ ಅದನ್ನು ತೆಗೆ ದುಕೊಳ್ಳಬಹುದೆಂಬ ನೆವವನ್ನು ಅದಕ್ಕೆ ಒಡ್ಡ ಲಾಗಿದೆ.

ಗಾಂಧಿಯವರು ರಚನಾತ್ಮಕ ಕಾರ್ಯದ ರೂಪದಲ್ಲಿ ಒಂದು ಯೋಜನೆಯನ್ನು ಆಚರ ಣೀಯವಾಗಿ ನಮಗೆ ಮಾಡಿಕೊಟ್ಟಿದ್ದಾರೆ. ಅದು ವ್ಯಕ್ತಿಯ ಸುಪ್ತ ಶಕ್ತಿಗಳನ್ನು ಬೆಳೆ ಸಲು ಸಂಪೂರ್ಣಾವಕಾಶವನ್ನು ಒದಗಿಸಿಕೊ ಡುತ್ತದೆ. ವ್ಯಕ್ತಿ ಯಾವುದರ ಮೂಲಕ ಬೆಳೆ ಯುವನೋ ಅದೇ ರಚನಾತ್ಮಕ ಕಾರ್ಯ. ಅದು ಸಶಸ್ತ್ರ ಸೈನ್ಯ ... ಕೊಡುತ್ತ...

## ವ್ಯಾಪಾರ ಪ್ರಪಂಚ

### ಮುಂಬಯಿ ಶೇರಪೇಟೆ

ತಾ. ೨೪

ಪೇಟೆಯಲ್ಲಿ ಹಲವು ಕಾರಣಗಳಿಂದ ಹಣದ ಮುಗ್ಗಟ್ಟು ವಿಪರೀತವಾಗಿದೆ. ಆದರೂ ಈ ೬ ದಿನಗಳಲ್ಲಿ ಬೆಲೆಗಳು ಸ್ವಲ್ಪ ಸುಧಾರಣೆ ಹೊಂದಿವೆ. ಇಂದಿನ ಕೊನೆಯ ಶೇರ ಬೆಲೆಗಳು ಹೀಗಿದ್ದವು.

| | |
|---|---|
| ಟಿಸ್ಕೊ | ೨೮೫-೦-೦ |
| ಕೋಹಿನೂರು | ೩೦೨-೮-೦ |
| ಮುಂಬಯಿ ಡಾಯಿಂಗ್ | ೯೮೦-೮-೦ |
| ಸ್ವದೇಶಿ | ೨೯೬-೮-೦ |
| ಗೋಕಾಕ | ೨೯೩-೦-೦ |
| ಸೆಂಚುರಿ | ೨೬೧-೪-೦ |
| ಬೇಲಾಪುರ ಸಕ್ಕರೆ | ೨೧೫-೮-೦ |
| ಇಂಡಿಯನ್ ಆಯರ್ನ | ೨೪-೪-೦ |

### ಚಿನ್ನ ಬೆಳ್ಳಿ

ಹಣದ ಮುಗ್ಗಟ್ಟು ವಿಶೇಷವಾಗಿರುವುದರಿಂದ ಚಿನ್ನವನ್ನು ಕೊಂಡಿಟ್ಟವರು ಅನಿವಾರ್ಯವಾಗಿ ಅದನ್ನು ಪೇಟೆಗೆ ತಂದಿದ್ದಾರೆ. ಕಾರಣ ಬೆಲೆಗಳು ಬಹಳವಾಗಿ ಇಳಿದು ೧೦೪-೦-೦ ವರೆಗೆ ಹೋದವು. ಆದರೆ ಹಳೆಯ ಬುಲಿಯನ್ ಎಕ್ಸ್‌ಚೇಂಜಿನ ಸ್ಥಾನದಲ್ಲಿ ಹೊಸದು ಸ್ಥಾಪಿತವಾಗಿ ವಾಯದೆ ವ್ಯಾಪಾರ ಇಂದೇ ಪ್ರಾರಂಭವಾದುದರಿಂದ ಬೆಲೆಗಳು ತುಸು ಸುಧಾರಿಸಿಕೊಂಡವು.

ಇಂದು ಬೆಲೆಗಳು ಈ ಕೆಳಗಿನಂತಿದ್ದವು.

| | |
|---|---|
| ಚಿನ್ನ ತಯಾರಿ | ೧೦೪-೧೪-೦ |
| ,, ವಾಯದಾ | ೧೦೩-೬-೦ |
| ಬೆಳ್ಳಿ ತಯಾರಿ | ೧೭೯-೦-೦ |
| ,, ವಾಯದಾ | ೧೮೩-೮-೦ |

### ಅರಳೆ

ಅರಳೆ ಪೇಟೆಯಲ್ಲಿ ಅಧಿಕೃತ ವ್ಯಾಪಾರವಿಲ್ಲ. ಬೆಲೆಗಳು ನಿಯಂತ್ರಿತ ಪರಮಾವಧಿಯೊಳಗೇ ಓಡಾಡುತ್ತಿವೆ.

### ಎಣ್ಣೆಕಾಳು

| | |
|---|---|
| ಶೇಂಗಾ | ೧೮೯-೬-೦ |
| ಅಗಸಿ | ೨೯-೩-೦ |
| ,, (ಹೊಸ) | ೨೯-೦-೦ |
| ,, ಎಣ್ಣೆ | ೧೮-೬-೦ |

### ಹುಬ್ಬಳ್ಳಿ

ತಾ. ೨೪

| | | |
|---|---|---|
| ಜ. ಹತ್ತಿ ನಗಕ್ಕೆ | | ೪೯೧-೫೦೧ |
| ಜ. ಹತ್ತಿಕಾಳು | ,, ಅಂದಾಜ (೭-೮)ಪೌಂ. | |
| ಕುಸುಬಿ (ಬ. ಮಣಕ್ಕೆ)೧೫.೦.೦ | | ೧೫-೧೫-೦ |
| ಅಗಸಿ | (ಚೀಲಕ್ಕೆ) — | ೩೭-೧೪-೯ |
| ಔಡಲ | ,, | ೩೯-೦-೦ |
| ಜ. ಹೆಸರು | ,, | ೪೮-೫೩ |
| ಕರಿ ಎಳ್ಳು | ,, | ೬೪-೬೬ |
| ಬಿಳಿ ಎಳ್ಳು | ,, | ೭೩ |
| ಕಡಲೆ | ,, | ೫೭-೫೮ |
| ಜ. ತೊಗರಿ | ,, | ೩೫-೩೭ |
| ಮಡಕಿ | ,, | ೩೫-೩೭ |
| ಕೆಂ. ಅಲಸಂದಿ | ,, | ೫೫-೫೬ |
| ಬಿ. ಅಲಸಂದಿ | ,, | ೫೮-೬೦ |
| ಶೇಂಗಾ (ಹೇರು) | | ೫೦-೫೩ |

### ಶಿವಮೊಗ್ಗೆ

ತಾ. ೨೪

### ತೀರ್ಥಹಳ್ಳಿ

| | |
|---|---|
| ಕಡಿಹಸನ್ | ೩೦ ರಿಂದ ೩೨ |
| ಹಸ | ೨೮ ,, ೩೦ |
| ಕಪ್ಪುರಾಶಿ | ೨೪-೨೫ |
| ಬೆಟ್ಟೆ | ೧೫-೧೭ |

### ಕೊಪ್ಪ ಶೃಂಗೇರಿ

| | |
|---|---|
| ಕಡಿಹಸನ | ೨೮-೩೦ |
| ಹಸ | ೨೬ ೨೮ |
| ಕಪ್ಪುರಾಶಿ | ೨೩-೨೫ |
| ಬೆಟ್ಟೆ | ೧೪-೧೬ |
| ರಾಮಚಂದ್ರಾಪುರ | ೨೫-೩೦ |
| ಅಣ್ಣಾವರ | ೨೦-೨೫ |
| ರಾಜಾ ಅಲವು | ೨೬-೨೯ |
| ಪೀಟನ್ | ೩೦-೩೩ |
| ನುಲಿ | ೨೭-೩೦ |
| ಬೆಟ್ಟವಂತಿ | ೧೭-೧೮ |
| ಮೆಣಸು | ೧೭-೧೮ |

ಲಂಡನ್ ಪತ್ರ (ಸ್ವಂತ ಪ್ರತಿನಿಧಿಯಿಂದ)

## ಕನ್ಸರ್ವೇಟೀವರ ತಲೆನೋವು— ಬಟ್ಟೆ ಬರೆಗಳ ವಿನಿಯಂತ್ರಣ— ಮತ್ತೊಂದು ವರುಷ ವ್ರತೋಪವಾಸ— ಉದಯಶಂಕರರ ಯಶೋದುಂದುಭಿ— ಆಸ್ಟ್ರೇಲಿಯಕ್ಕೆ ಹೊಸ ಹೊಣೆ

ಮಾರ್ಚ ೧೬

ಸ್ವತಂತ್ರ ಸಾರ್ವಭೌಮ ಪ್ರಜಾರಾಜ್ಯವಾಗುವೆನೆಂಬ ಹಿಂದೀ ಸರಕಾರದ ನಿರ್ಣಯು ಕನ್ಸರ್‌ವೇಟಿವರಿಗೆ ತಲೆನೋವನ್ನುಂಟುಮಾಡಿದೆ; ಅವರು ಅದನ್ನು ತೋರಗೊಡದೆಯೂ ಇಲ್ಲ. "ಭಾರತ ಎಲ್ಲವನ್ನೂ ತೆಗೆದುಕೊಳ್ಳುವುದಲ್ಲದೆ. ಏನನ್ನೂ ಕೊಡುವುದಿಲ್ಲ" ಎಂದು ಅವರು ಹೊಟ್ಟೆಯುರಿಯಿಂದ ಗೊಣಗಿದರು. ಸಾಮ್ರಾಜ್ಯದ ನಾಗರಿಕ ಮತ್ತು ವ್ಯಾಪಾರೀ ಹಕ್ಕುಗಳೆಲ್ಲವನ್ನೂ ಇಟ್ಟುಕೊಂಡು ಸಾಮ್ರಾಜ್ಯದ ಬಗ್ಗೆ ಯಾವ ಋಣಭರಣವನ್ನೂ ಪಂಡಿತ ನೆಹರು"ಮಾಡಬಯಸುವುದಿಲ್ಲ ಎಂದು ಅವರ ಅಂಬೋಣ.

ತಮ್ಮ ದುಃಖದಲ್ಲಿ ಅವರು ಯಾರನ್ನು ಬೇಕಾದರೂ ದೂರಬಹುದು. ಅಟ್ಲಿ ಮತ್ತು ಮೌಂಟ್‌ಬ್ಯಾಟನ್ನರು ಅವರ ನಿಂದೆ ಬೈಗುಳಗಳಿಗೆ ಹೆಚ್ಚಾಗಿ ಪಾತ್ರರಾಗಿದ್ದಾರೆ. ಪ್ರಜಾರಾಜ್ಯವಾಗಲು ಭಾರತಕ್ಕೆಅಟ್ಲಿಯವರು ತಮ್ಮ ಹರಕೆಯನ್ನು ಸಲ್ಲಿಸಿದ್ದರಿಂದ ಪಂಡಿತ ನೆಹರು ಆ ತಮ್ಮ ಮಾರ್ಗವನ್ನು ಬಿಟ್ಟುಹೋಗುವುದಿಲ್ಲವೆಂದು ತೋರುತ್ತದೆ. ಮುಖ್ಯ ಮಂತ್ರಿ ನೆಹರುಗಳಿಗೆ ಇಂದಿನ ಯೋಜನೆಯನ್ನು ತಯಾರಿಸಲು ನೆರವಾದ ಕಾರಣದಿಂದ ಕನ್ಸರ್‌ವೇಟೀವರು ಮೌಂಟ್‌ಬ್ಯಾಟನ್ನರನ್ನು ಕಂಡು ಬಹಳ ಸಿಡಿಮಿಡಿಗೊಂಡಿದ್ದಾರೆ.

### ವಿನಿಯಂತ್ರಣ

ಇದೇ ವೇಳೆಯಲ್ಲಿ ವ್ಯಾಪಾರಸಂಘದ ಅಧ್ಯಕ್ಷರಾದ ಹೆರಾಲ್ಡ್ ವಿಲ್ಸನ್ನರು ಹೌಸ್ ಆಫ್ ಕಾಮನ್ಸಿನಲ್ಲಿ ಒಂದು ದೊಡ್ಡ ಬಾಂಬನ್ನೇ ಎಸೆದುಬಿಟ್ಟರು! ಅದೆಂಥ ರೋಮಾಂಚನಕರವಾದ ಸುದ್ದಿಯೆನ್ನುತ್ತೀರಿ—ಬಹಳ ದೊಡ್ಡ ಸುದ್ದಿ ಅದು! ಕಳೆದ ಸುಮಾರು ೮ ವರ್ಷಗಳ ನಂತರ ಈಗ ಬಟ್ಟೆಯ ನಿಯಂತ್ರಣವನ್ನು ಸಂಪೂರ್ಣವಾಗಿ ತೆಗೆದುಹಾಕಿದ್ದು! ಪತ್ರಿಕೆಗಳು ಮಜಭಾಪು ಎಂದವು, ಜನ ನಸುನಕ್ಕಿತು. ಪತ್ರಿಕೆಗಳೆಂದವು-"ಬಟ್ಟೆ ಸೀದಾ ತೆಗೆದುಕೊಂಬ ಪುಸ್ತಕವನ್ನು ನೀವು ಹರಿದು ಬಿಸಾಡಬಹುದು, ಅದನ್ನು ಕಸದ ಬುಟ್ಟಿಗೆಸೆಯಬಹುದು. ಇಂದಿನಿಂದ ಅದು ನಿಮಗೆಂದೂ ಬೇಕಾಗುವದಿಲ್ಲ. ಈ ಸಲ ಈ ವಿನಿಯಂತ್ರಣಕ್ಕೆ ಉಪಾಧಿ, ಅಪವಾದ ಒಂದೂ ಇಲ್ಲ. ಎಲ್ಲವೂ ನಿಯಂತ್ರಣದ ಹೊರಗೆ!"

ಪತ್ರಿಕೆಗಳೇನೋ ಉತ್ಸವಘೋಷ ಮಾಡಿದವು. ಆದರೆ ಜನರೇನೂ ಆನಂದೋನ್ಮಾದ ತುಂದಿಲರಾಗಲಿಲ್ಲ. ಬಟ್ಟೆಗಳೇನೋ ವಿನಿಯಂತ್ರಿತವಾಗಿರಬಹುದು, ಆದರೆ ಅವನ್ನು ಕೊಳ್ಳಲು ನಿಮಗೆ ದುಡ್ಡು ಬೇಕು! ಅನೇಕ ಗೃಹಿಣಿಯರು ಅಂಗಡಿಯ ಕಡೆಗೆ ನುಗ್ಗಿದರು, ಆದರೆ ತಮಗೆ ಅತ್ಯಗತ್ಯವೆನಿಸುವ ಮಗ್ಗುಲು ಹಾಸಿಗೆ ಬಹಿರ್ವಾಸ ಮತ್ತು ಅಂತರ್ವಾಸಗಳನ್ನು ಮಾತ್ರ ಕೊಂಡು ಹೋದರು. ಕೇವಲ ಧಾರಣೆ ನೋಡಿದ್ದು ಹೊರಟದ್ದು- ಇಷ್ಟೇ ಎನ್ನುತ್ತಾರೆ ಅವರು. ಧನಿಕರಿಗೆ ಮೀಸಲಾದ ವೆಸ್ಟೆಂಡ್ ಅಂಗಡಿಗಳಲ್ಲಿ ಮಾತ್ರ ಸಾಮಾನ್ಯ ಮತ್ತು ವೈಲಾಸಿಕ ಬಟ್ಟೆ ಬರೆಗಳ ವ್ಯಾಪಾರ ಎಂದಿನಂತೆಯೇ ಆರಕ್ಕೆ ಹೆಚ್ಚದೆ ಮೂರಕ್ಕೆ ಕಡಿಮೆಯಾಗದೆ ಸಾಗಿತ್ತು.

ಆದರೂ, ಅಂತೂ ಮತ್ತೊಂದು ಯುದ್ಧಕಾಲಿಕ ನಿಯಂತ್ರಣ ಹೋಯಿತಲ್ಲ-ಎಂದು ಜನರು ನಿಡುಸುಯ್ದರು. ವಾಸ್ತವಿಕ ಲಾಭಕ್ಕಿಂತ ಮಾನಸಿಕ ಲಾಭವೇ ಹೆಚ್ಚಿನದು-ಶಾಂತಿಕಾಲದ ಸ್ಥಿತಿ ಬಂತು, ಒಳ್ಳೆಯ ದಿನಗಳು ಸದ್ಯದಲ್ಲಿ ಬರಲಿವೆ ಎಂದು ಜನ ಸಮಾಧಾನಪಟ್ಟುಕೊಂಡಿತು.

ಇಷ್ಟೇ ಅಲ್ಲ, ಬರುವ ಕೆಲವೇ ದಿನಗಳಲ್ಲಿ ಇನ್ನೂ ಕೆಲವು ನಿಯಂತ್ರಣಗಳನ್ನು ತೆಗೆದುಹಾಕುವೆವೆಂದು ವಿಲ್ಸನ್ನರು ವಚನವಿತ್ತರು. ಅವು ಯಾವುವೆಂಬುದನ್ನು ಪತ್ರಿಕಾಪ್ರತಿನಿಧಿ ಸಮ್ಮೇಲನದಲ್ಲಿ ಹೇಳಲು ನಿರಾಕರಿಸಿದರು. ಅಂದು ಸೋಮವಾರ ಸಂಜೆ ಎಲ್ಲರ ಮನಸ್ಸೂ ಹುರುಪಿನಲ್ಲಿತ್ತು. ಬಹುಶಃ ಸಿಗರೇಟುಗಳು ಸುಲಭ ದರಕ್ಕೆ ಸಿಕ್ಕವು; ಏಕೆಂದರೆ, ಅನ್ನಾಹಾರ ಬಿಟ್ಟರೆ ಹೊಗೆಸೊಪ್ಪೇ ಬಹಳ ಮುಖ್ಯವಾದದ್ದು ಈ ಜನಗಳಿಗೆ.

### ಮುಂಗಡ ಪತ್ರಿಕೆ

ಮಂಗಳವಾರ ರಾತ್ರಿ ಸರ್ ಸ್ಟಾಫರ್ಡ ಕ್ರಿಪ್ಸರು ಬ್ರಿಟನ್ನಿನಲ್ಲಿಯ ಜೀವನದ ಆರ್ಥಿಕ ಯೋಜನೆಯನ್ನು ಪ್ರಕಟಪಡಿಸಿದರು. ಆ ಕೂಡಲೆ ಲಂಡನ್ನಿಗನ ಮನಸ್ಸು ಮಾವಿನಕಾಯಿಹಿಂಡಿದ್ದಂತೆ ಗಾತ್ರಕ್ಕಿಳಿಯಿತು! ಸರ್ ಸ್ಟಾಫರ್ಡ— ಅಲ್ಲಲ್ಲ, ವ್ರತೋಪವಾಸದ-ಕ್ರಿಪ್ಸರು ಜನರು ಹೆಚ್ಚು ಹೆಚ್ಚಾಗಿ ದುಡಿಯಬೇಕು, ಹೆಚ್ಚು ಉತ್ಪಾದಿಸಬೇಕು, ಹೆಚ್ಚನ್ನು ನಿರ್ಯಾತ ಮಾಡಬೇಕು, ಹೆಚ್ಚು ಸಂಬಳ ಕೇಳಬಾರದು ಮತ್ತು ಜೀವನದಲ್ಲಿ ಬೇಕಾಗುವ ಉತ್ತಮ ವಸ್ತುಗಳೆನಿಸುವ ತಂಬಾಕು, ಮದ್ಯ, ದ್ರಾಕ್ಷಾರಸಗಳು ಮತ್ತು ಇತರ ಮಾದಕ ದ್ರವ್ಯಗಳು ಇವಿಲ್ಲದೆ ಕಾಲ ಕಳೆಯಬೇಕು ಎಂದು ಸ್ಪಷ್ಟಪಡಿಸಿಬಿಟ್ಟರು. ಇದನ್ನೆಲ್ಲ ಆಚರಿಸಿದರೆ ರಾಷ್ಟ್ರವು ಕಳೆದವರ್ಷಕ್ಕಿಂತ ಸ್ವಲ್ಪ ಹೆಚ್ಚಿನ ಜೀವನಮಟ್ಟವನ್ನು ಕಾಣಬಹುದಾಗಿದೆ.

ನಿಕ್ಕಮಂತ್ರಿಗಳಿಗೆ ಮತ್ತೂ ಒಂದಾದ ಈ ವ್ರತೋಪವಾಸದ ಮುಂಗಡ ಪತ್ರಿಕೆಯನ್ನು ಸರಿಯೆಂದು ಸಮರ್ಥಿಸಿ ಒಪ್ಪಿಸಲು ಕ್ರಿಪ್ಸರಿಗೆ ಬಹಳ ಕಷ್ಟವಾಯಿತೆಂದು ಊಹೆ. ಏಕೆಂದರೆ, ಸಾರ್ವತ್ರಿಕ ಚುನಾವಣೆಗೆ ಮೊದಲು ನಿಯಂತ್ರಣಗಳನ್ನು ಶಿಥಿಲಗೊಳಿಸಬೇಕೆಂದು ಅವರು ಒತ್ತಾಯ ಪಡಿಸುತ್ತಿದ್ದಾರೆ.

### ಚದುರಂಗದ ಕಾಯಿಯ ಚಾಲನ

ರಶಿಯದ ಮುಖ್ಯ ಶಾಣ್ಯದಲ್ಲಿ ಬದಲಾವಣೆ ನಡೆದಂದಿನಿಂದ ಕಡೆಯಪಕ್ಷ ಜಗತ್ತಿನ ೪ ಭಿನ್ನ ಭಾಗಗಳಲ್ಲಿ ಮಾಸ್ಕೋ ಅನಿರೀಕ್ಷಿತವಾಗಿ ಚದುರಂಗದ ಕಾಯಿಯನ್ನು ಓಡಿಸಬಹುದೆಂದು ಪಾಶ್ಚಾತ್ಯರಾಷ್ಟ್ರಗಳು ಕಾದಿವೆ. ಆದುದರಿಂದ ಫಿನ್‌ಲೆಂಡಿನ ಸೋಶಲ್ ಡೆಮೊಕ್ರಾಟಿಕ್ ಸರಕಾರದ ಮೇಲೆ ರಶಿಯ ಹರಿಹಾಯ್ದುದ್ದೇನೂ ಆಶ್ಚರ್ಯವೆನಿಸಲಿಲ್ಲ. ಸೋವಿಯಟ್ಟಿನ "ಲಿಟರರಿ ಗಜೆಟ್ಟ"ನಲ್ಲಿಅಮೇರಿಕದ ಪ್ರಚಾರದ ಕೊಳಕುನೀರಿನ ಹೊನಲಿಗೆ ಮುಕ್ತದ್ವಾರವಿಡಲಾಗಿದೆ" ಎಂದು ಫಿನ್ನಿಶ್ ಮುಖ್ಯಮಂತ್ರಿಯ ಮೇಲೆ ಆರೋಪ ಹೊರಿಸಲಾಗಿದೆ. ಅವನ ಕಳೆದ ವಾರಾಂತ್ಯದ ಹೇಳಿಕೆಯನ್ನು ಕುರಿತು ಅದು ವಂಚನೆ ಮತ್ತು ಒರಟು ಕರ್ಮಠತೆ ಎಂದು ಟೀಕಿಸಿದೆ. ಎರಡನೆಯ ಬೇಟಿ ಪರ್ಶಿಯ ಎಂದು ಊಹಿಸಲಾಗಿದೆ.

ಉದಯಶಂಕರರು ಮತ್ತು ಅವರ ಹೆಂಡತಿ ಅಮಲೆ ಕೆಲ ವಾರಗಳ ವರೆಗೆ ಇಲ್ಲಿ ಉಳಿದಾಗ ಇಲ್ಲಿಯ ಭಾರತೀಯರಿಗೆ ಒಂದು ಔತಣವೇ ಆದಂತಾಯಿತು. ಅವರು ತಮ್ಮ "ಕಲ್ಪನೆ" ಯ ಚಿಕ್ಕ ಸಂಪುಟವನ್ನು ತಂದಿದ್ದರು. ಭಾರತ ಸಂಘವು ವೆಸ್ಟೆಂಡಿನ ಒಂದು ವೈಭವಪೂರ್ಣವಾದ ರಂಗದಲ್ಲಿ ಅದನ್ನು ಪ್ರದರ್ಶಿಸಲು ಅನುಕೂಲವೊದಗಿಸಿ ಕೊಟ್ಟಿತು. ಪ್ರದರ್ಶನ ಅದ್ಭುತ ಯಶಸ್ಸನ್ನು ಪಡೆಯಿತು. ಸಭಿಕರಲ್ಲಿ ನೂರಕ್ಕೆ ೩೦ ರಷ್ಟು ಮಂದಿ ಐರೋಪ್ಯರಿದ್ದರು. ಅವರೆಲ್ಲರೂ ಅದನ್ನು ನೋಡಿ ಆನಂದಿಸಿದರು.

ಮಂಗಳವಾರ ಭಾರತಸಂಘವು ಉದಯಶಂಕರರಿಗಾಗಿ ಒಂದು ಔತಣವನ್ನೇರ್ಪಡಿಸಿತು. ಅದಕ್ಕೆ ಕೆಲ ಭಾರತೀಯರನ್ನೂ ಅವರ ಗೆಳೆಯರನ್ನೂ ನಿಮಂತ್ರಿಸಲಾಗಿತ್ತು. ತಾವು ಜೀವನದಲ್ಲಿ ಒಂದು ಮಹತ್ಕಾರ್ಯವನ್ನು ಸಾಧಿಸಲು ಹುಟ್ಟಿರುವೆವೆಂದು ತಮಗೆ ದೃಢವಾಗಿ ತಿಳಿದುಹೋಗಿದೆಯೆಂದು ಶಂಕರರು ತಮ್ಮ ೧೫ ನಿಮಿಷಗಳ ಭಾಷಣದಲ್ಲಿ ಹೇಳಿದರು. ಹಣ ಸಿಗಲಿ, ಸಿಗದಿರಲಿ-ತಾವು ಅದನ್ನು ಸಾಧಿಸಿಯೇತೀರುವೆವೆಂದು ಅವರು ಸಾರಿದರು. ಅದೆಂದರೆ ಭಾರತೀಯ ಕಲೆಯ ಮಹತ್ವವನ್ನು ಜಗತ್ತಿಗೆ ತೋರಿಸುವುದು.

ಆಮೇಲೆ ಅಮಲೆ ಬಹಳವಾಗಿ ತನ್ನ ಗಂಡನ ವಿಷಯವನ್ನೇ ಎತ್ತಿ ಮಾತನಾಡಿದಳು- ಆದರೆ ತಾನು ಮಾತಾಡುತ್ತಿದ್ದುದು ಹೆಂಡತಿಯೆಂದಲ್ಲ, ಉದಯಶಂಕರರನ್ನು ಅವರ ಏರುಂಜವ್ವನದಿಂದ ಕಾಣುತ್ತ ಬಂದ ಒಬ್ಬ ನಿರೀಕ್ಷಕಳಾಗಿ ಎಂದು ಸ್ಪಷ್ಟಪಡಿಸಿದಳು.

ಅಕ್ಟೋಬರಿನಲ್ಲಿ ತಾವು ಮೇಳದವರೊಡನೆ ಪುನಃ ಬಂದು ನೃತ್ಯ ಪ್ರದರ್ಶನ ಮಾಡುವೆನೆಂದು ಶಂಕರರು ನನಗೆ ಹೇಳಿದರು.

---

(೯ ನೇ ಪುಟದಿಂದ)

ಅವನು ಹೊಕ್ಕಿದ್ದಾನೆ. ಸ್ಥೈರ್ಯ ಸಾಹಸಗಳನ್ನು ಬೆಳೆಸಿಕೊಳ್ಳಲು ಅವನಿಗಿದು ಅವಕಾಶ ಕಲ್ಪಿಸಿಕೊಡುತ್ತದೆ. ಅವನ ಇಡೀ ರಚನಾತ್ಮಕ ಕಾರ್ಯಕ್ರಮವೂ ಪ್ರತಿನಿತ್ಯ ಸಹಕರಿಸಿ ತಮ್ಮ ಯೋಜನೆಯಂತೆ ಕೆಲಸ ಸಾಗಿಸುವ ಜನವೃಂದವನ್ನವಲಂಬಿಸಿದೆ. ಹೀಗೆ ರಚನಾತ್ಮಕ ಕಾರ್ಯವು ಸೈನ್ಯದ ವಿಜಯಯಾತ್ರೆಗಿಂತಲೂ ಹೆಚ್ಚಾಗಿ ಇನ್ನೂ ಪೂರ್ಣತರ ಪ್ರಮಾಣದಲ್ಲಿ ಸ್ವಶಕ್ತಿಪ್ರಕಾಶನಕ್ಕೆ ಅವಕಾಶ ಕೊಟ್ಟು ತನ್ನ ನೈತಿಕ ಶಿಖರದೆತ್ತರ ಬೆಳೆಯಲು ವ್ಯಕ್ತಿಗೆ ಅನುಕೂಲ ಮಾಡಿಕೊಡುತ್ತದೆ. ರಚನಾತ್ಮಕ ಕಾರ್ಯಕರ್ತನು ನಿಜವಾಗಿಯೂ ದಾರಿದ್ರ್ಯ, ಅಜ್ಞಾನ, ರೋಗ ಮತ್ತು ಅನ್ಯಾಯಗಳೆಂಬ ಬಲಿಷ್ಠ ಪಿಶಾಚಗಳನ್ನು ಹೊಡೆದಟ್ಟುವಒಬ್ಬವೀರಸರದಾರನೇ ಸೈ. ಅವನು ದುರ್ಬಲರ ಪಾಲಕನಾಗಿರುವದರಿಂದ ಶೋಷಕಭಯಂಕರನಾಗಿರಲೇ ಬೇಕು. ರಾಷ್ಟ್ರದಮುಂದೆ ಅಂಥ ಚಟುವಟಿಕೆಯ ಜೀವನದ ಕಾರ್ಯಕ್ರಮವನ್ನು ಇಡುವುದರ ಮೂಲಕ ಮಾನವ ಕುಲಕ್ಕೆ ಯುದ್ಧದ ಒಂದು ನೈತಿಕ ಪರ್ಯಾಯವನ್ನು ಕೊಡಬಲ್ಲ ಅಹಿಂಸಾತ್ಮಕ ಯೋಜನಾಪತ್ರವನ್ನು ಈ ರೂಪದಲ್ಲಿ ಗಾಂಧಿಯವರು ಕೊಟ್ಟಿದ್ದಾರೆ.

— ಜೆ. ಸಿ. ಕುಮಾರಪ್ಪ

---

ಭೀತಿ ವ್ಯಕ್ತಪಡಿಸಲಾ[illegible] ಒಪ್ಪಂದವನ್ನು ವಿರೋಧಿಸಲಣಿಯಾಗಿ[illegible] ಕಳೆದ ವರುಷ ಪ್ರಾರಂಭಿಸಲ್ಪಟ್ಟ ಕೊಮಿನ್‌ಫಾರ್ಮ ಸಂಸ್ಥೆಯು ಇದರ ಮೊದಲ ಮೆಟ್ಟಲೆಂದೂ ಹೇಳಲಾಗುತ್ತದೆ. ಇದು ರಶಿಯವು ಈ ಒಪ್ಪಂದಕ್ಕೆ ಕೊಟ್ಟ ಉತ್ತರವೆಂದೇ ಹೇಳಲಾಗುತ್ತದೆ. ಪಶ್ಚಿಮ ಪೂರ್ವ ರಾಷ್ಟ್ರಗಳಲ್ಲಿ ಯಾವದೇ ಬಗೆಯ ತಿಕ್ಕಾಟವುಂಟಾಗದಂತೆ ಅಟ್ಲಾಂಟಿಕಒಪ್ಪಂದವು ಕಾರ್ಯರೂಪದಲ್ಲಿ ಬಂದರೆ ಸ್ವಾಗತಾರ್ಹವೆ. ಆದರೆ ತದ್ವಿರುದ್ಧ ಇದು ಶಾಂತಿಗೆ ಮಾರಕವಾದರೆ ಇದಕ್ಕೆ ಬೇಗ ಸಮಾಧಿ ಕಟ್ಟುವದು ಅವಶ್ಯ.

### [illegible] ಅಬಲೆಯರಿಗಾಗಿ

ಭಾರತ [illegible] ದಾರಿ ಹಿಡಿಯ[illegible] ನಿರರ್ಥಕವಾದ ಭಾವೀ ಘಟ[illegible]ಗಳು ವುಳಿಯಲಾರದು.

### ಸ್ವಾಗತಾರ್ಹ ನಿರ್ಧಾರ

"ಎರಡು ವರುಷಗಳಲ್ಲಿ ಹಿಂದುಸ್ತಾನವು ಆಹಾರ ವಿಷಯಗಳಲ್ಲಿ ಸ್ವಾವಲಂಬಿಯಾಗುವಂತೆ ನೋಡಿಕೊಳ್ಳಲಾಗುವದು. ಅತಿವೃಷ್ಟಿ, ಬೆಳೆಗೆ ರೋಗ ಬೀಳುವದು ಮೊದಲಾದ ಕಾರಣಗಳಿಂದ ಬರಗಾಲ ಬಿದ್ದರೆ ಅದನ್ನು ಎದುರಿಸಲು, ಆಹಾರ ಧೋರಣ ಸಮಿತಿಯು ಸಲಹೆ

---



ಉ[illegible] ದಲ್ಲಿದ್ದ [illegible] ಗೊಟ್ಟಿರೂ ಉ[illegible] ವಿಜ್ಞಾನಿಗಳು

# ಒಕ್ಕಲತನದ ಉತ್ಪಾದನೆಯ ಹೆಚ್ಚಳ
## ಹಿಂದುಸ್ಥಾನ ಸರಕಾರದ ಯಶಸ್ವೀ ಪ್ರಯತ್ನ
### ರಾಷ್ಟ್ರವನ್ನು ಸ್ವಾವಲಂಬಿ ಮಾಡುವ ಯೋಜನೆ

ಹಿಂದುಸ್ಥಾನವನ್ನು ಆಹಾರ ಪದಾರ್ಥಗಳಲ್ಲಿ ಸ್ವಾವಲಂಬಿಯನ್ನಾಗಿ ಮಾಡಬೇಕೆಂದು ಹಿಂದುಸ್ಥಾನ ಸರಕಾರದ ಒಕ್ಕಲತನ ಶಾಖೆಯವರು ಬಗೆ ಬಗೆಯಿಂದ ಪ್ರಯತ್ನಿಸುತಿರುವರು. ಪಡಬಿದ್ದ ಭೂಮಿಗಳನ್ನು ಸಾಗು ಮಾಡಿ, ಕರಕಿ,ಕಣಗ್ಯಾ ಇದ್ದ ಹೊಲಗಳಲ್ಲಿ ಟ್ರ್ಯಾಕ್ಟರ ಮುಂತಾದವುಗಳ ಉಪಯೋಗ ಮಾಡಿ ಅವನ್ನೆಲ್ಲ ಹಸನ ಮಾಡುವದು ಮೊದಲಾದ ಶ್ರಮಗಳು ನಡೆದಿವೆ. ಈ ಧೋರಣಕ್ಕನುಸಾರವಾಗಿ ೧೯೪೭-೪೮ ರಲ್ಲಿ ಒಕ್ಕಲತನ ಶಾಖೆಯವರು ೩೩೩೦೬ ಎಕರೆ ಭೂಮಿಯನ್ನು ಸಾಗು ಮಾಡಿದರು. ಇದರ ಪರಿಣಾಮವಾಗಿ ಈ ವರುಷ ೭೫೫೦೦೦ ಟನ್ ಆಹಾರ ಪದಾರ್ಥಗಳ ಉತ್ಪತ್ತಿ ಹೆಚ್ಚಿತು. ಇದಕ್ಕಾಗಿ ೧೭೫೫೦೦೦೦ ಟನ್‌ಮಲದಗೊಬ್ಬರವನ್ನು ೧೫೫೦೪೦೦ ಟನ್ ರಸಾಯನಿಕ ಗೊಬ್ಬರವನ್ನು ಒದಗಿಸಲಾಯಿತು ಎಂದು ಕಳೆದ ವಾರ ಪ್ರಸಿದ್ಧವಾದ ೧೯೪೮-೪೯ ನೇ ವರ್ಷದ ಒಕ್ಕಲತನ ಶಾಖೆಯ ವರದಿಯಿಂದ ಗೊತ್ತಾಗುತ್ತದೆ.

೧೯೪೮ ರಲ್ಲಿ ಸಂಯುಕ್ತ ಪ್ರಾಂತ ಮತ್ತು ಮಧ್ಯಪ್ರಾಂತದಲ್ಲಿ ೧೫ ಟ್ರ್ಯಾಕ್ಟರುಗಳ ಆರು ಯುನಿಟುಗಳು ಕೆಲಸಮಾಡಿ ಪ್ರತಿಯೊಂದು ೩೩೩೦೬ ಎಕರೆ ಕ್ಷೇತ್ರವನ್ನು ಹಸನಮಾಡಿದವು. ಸಂಯುಕ್ತಪ್ರಾಂತದಲ್ಲಿ ೨೪೫೦೬ ಎಕರೆ ಮುಂಗಾರಿ ಕ್ಷೇತ್ರದಲ್ಲಿ ೩೧೩೩೪೪ ಮಣ ಅಂದರೆ ೨೦೪೪೪೫೦ ರೂಪಾಯಿ ಬೆಲೆಯ ಧಾನ್ಯವು ಉತ್ಪಾದಿತವಾಯಿತು. ಈಗ ೧೫೦ ಟ್ರ್ಯಾಕ್ಟರುಗಳ ೧೧ ಯುನಿಟುಗಳು ೧೦೦೦೦೦ ಎಕರೆ ಕ್ಷೇತ್ರ ಭೂಮಿಯನ್ನು ಹಸನಮಾಡುತ್ತಿರುವವು.

ಮತ್ಸ್ಯ ಒಕ್ಕೂಟದಲ್ಲಿ ಮತ್ತು ಪೂರ್ವ ಪಂಜಾಬ ಪ್ರದೇಶದಲ್ಲಿ ಬರುವ ಜೂನದೊಳಗಾಗಿ ೬೫೦೦೦ ಎಕರೆ ಭೂಮಿಯನ್ನು ಹಸನ ಮಾಡಬೇಕೆಂದು ಗೊತ್ತುಮಾಡಲಾಗಿದೆ. ಆಹಾರೋತ್ಪಾದನೆಯ ಯೋಜನೆ, ಸಣ್ಣ ನೀರಾವರಿ ಯೋಜನೆ, ಗೊಬ್ಬರದ ಹಂಚಿಕೆ ಮತ್ತು ಅಭಿವೃದ್ಧಿಯ ಯೋಜನೆಗಾಗಿ ಒಟ್ಟಾರೆ ೪೩೫ ಲಕ್ಷ ರೂಪಾಯಿಗಳು ಪ್ರಾಂತೀಯ ಸರಕಾರಗಳಿಗೆ ಕಾಣಿಕೆರೂಪದಿಂದ ಕೊಡಲಾಗಿವೆ.

ಹಿಂದುಸ್ಥಾನದಲ್ಲೆಲ್ಲ ಹಾಲಿನ ಉತ್ಪಾದನೆಯನ್ನು ಹೆಚ್ಚಿಸುವದಕ್ಕಾಗಿ ಪಂಚವಾರ್ಷಿಕ ಯೋಜನೆಯನ್ನು ಗೊತ್ತುಪಡಿಸಿದ್ದು ಆಯಾ ಪ್ರಾಂತೀಯ ಸರಕಾರಗಳು ಅವನ್ನು ಕಾರ್ಯರೂಪದಲ್ಲಿ ತರುವವು. ಇದರಿಂದ ಈ ಅಯಿದು ವರುಷಗಳಲ್ಲಿ ಹಿಂದುಸ್ಥಾನದ ಹಾಲಿನ ಉತ್ಪಾದನೆ ನೂರಕ್ಕೆ ಹತ್ತರಷ್ಟು ಹೆಚ್ಚಾವುದೆಂದು ನಿರೀಕ್ಷಿಸಲಾಗಿದೆ.

ಹತ್ತಿಯ ಉತ್ಪತ್ತಿಯನ್ನು ಹೆಚ್ಚಿಸುವದಕ್ಕಾಗಿ ಸೆಂಟ್ರಲ್ ಕಾಟನ್ ಕಮೀಟಿಯವರು ಪಂಚವಾರ್ಷಿಕ ಯೋಜನೆಯೊಂದನ್ನು ಇಟ್ಟುಕೊಂಡಿರುವರು. ಇದರಿಂದ ಉದ್ದ ಎಳೆಯ ೪೪೦೦೦೦ ಬೇಲು ಹತ್ತಿಯನ್ನು ಮತ್ತು ಮಧ್ಯಮ ತರಗತಿಯ ೪೬೦೦೦೦ ಬೇಲು ಹತ್ತಿಯನ್ನು ಹೆಚ್ಚಿಸಬೇಕೆಂದು ನಿರ್ಧರಿಸಲಾಗಿದೆ. ರಾಸಾಯನಿಕ ಗೊಬ್ಬರ,ಸುಧಾರಿಸಿದ ಬೀಜಗಳ ಉಪಯೋಗದಿಂದ ಮತ್ತು ಈ ವರೆಗೆ ಗಿಡ್ಡ ಎಳೆಯ ಹತ್ತಿಯನ್ನು ಬೆಳೆಯುತಿದ್ದ ಕ್ಷೇತ್ರವನ್ನು ಹೆಚ್ಚಿಸಿ ಗಿಡ್ಡ ಎಳೆಯ ಕ್ಷೇತ್ರವನ್ನು ಮಧ್ಯಮತರಗತಿಯ ಹತ್ತಿಯನ್ನು ಬೆಳೆವ ಕ್ಷೇತ್ರವನ್ನಾಗಿ ಮಾರ್ಪಡಿಸಿಕೊಂಡು, ಈ ಗುರಿಯನ್ನು ಸಾಧಿಸಿಕೊಳ್ಳಬೇಕೆಂದು ಯೋಜಿಸಲಾಗಿದೆ.

ಜ್ಯೂಟ ಕಮೀಟಿಯವರು ತ್ರೈವಾರ್ಷಿಕ ಯೋಜನೆಯೊಂದನ್ನು ಇಟ್ಟುಕೊಂಡಿದ್ದಾರೆ. ಮುಖ್ಯವಾಗಿ ಜ್ಯೂಟ ಬೆಳೆವ ಪಶ್ಚಿಮ ಬಂಗಾಲ, ಅಸಾಮ, ಬಿಹಾರ ಮತ್ತು ಓಡಿಸಾ ಪ್ರಾಂತಗಳಲ್ಲಿ ಜ್ಯೂಟ ಬೆಳೆವ ಕ್ಷೇತ್ರವನ್ನು ಹೆಚ್ಚಿಸಬೇಕೆಂದು ಗೊತ್ತಾಗಿದೆ. ಹಿಂದುಸ್ಥಾನದ ಉಳಿದ ಕ್ಷೇತ್ರದಲ್ಲಿಯ ಅನುಕೂಲ ಪ್ರದೇಶಗಳಲ್ಲಿ ಜ್ಯೂಟ ಬೆಳೆಯುವ ಉಪಕ್ರಮವನ್ನೂ ಕೈಕೊಳ್ಳಲಾಗುವದು. ಈ ಎಲ್ಲ ಯೋಜನೆಗಳು ಕಾರ್ಯಕಾರಿಯಾದರೆ ಪ್ರತಿ ವರ್ಷ ೬೫೦೦೦೦ ಬೇಲ ಜ್ಯೂಟನ ಉತ್ಪಾದನೆ ಹೆಚ್ಚಬಹುದೆಂದು ನಿರೀಕ್ಷಿಸಲಾಗಿದೆ.

## ಕರ್ನಾಟಕ ಸಂಗೀತ ಕಾಲೇಜು

ಮದ್ರಾಸ ವಿಶ್ವವಿದ್ಯಾನಿಲಯದಲ್ಲಿ ಸಂಗೀತ ಪ್ರಾಧ್ಯಾಪಕರಾಗಿರುವ ಶ್ರೀ ಆಯ. ಸಾಂಬಮೂರ್ತಿಯವರನ್ನು ಸೆಂಟ್ರಲ್ ಕಾಲೇಜಿನಲ್ಲಿ ಕರ್ನಾಟಕ ಸಂಗೀತ ಶಿಕ್ಷಣದ ವ್ಯವಸ್ಥೆ ಮಾಡುವದಕ್ಕಾಗಿ ವಿಶೇಷಾಧಿಕಾರಿಗಳನ್ನಾಗಿ ನೇಮಿಸಲಾಗಿದೆ. ಹಿಂದುಸ್ಥಾನ ಸರಕಾರ ಮತ್ತು ಮದ್ರಾಸ ಸರಕಾರ ಇವೆರಡೂ ಸರಕಾರಗಳ ನೇತೃತ್ವದಲ್ಲಿ ಈ ಹೊಸ ಕಾಲೇಜು ನಡೆಯುವದಲ್ಲದೆ ವೆಚ್ಚವನ್ನು ಸರಿಯಾಗಿ ಎರಡೂ ಸರಕಾರಗಳು ಹಂಚಿಕೊಳ್ಳುವವು. ಪ್ರಾರಂಭಕ್ಕೆ ಈ ಕಾಲೇಜಿನಲ್ಲಿ ಸಂಗೀತದ ಎರಡು ತರಗತಿಗಳನ್ನು ಮಾತ್ರ ಸುರು ಮಾಡುವವರಿದ್ದು ಪ್ರತಿ ವರ್ಷ ಸುಮಾರು ನಾಲ್ವತ್ತರಂತೆ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಲಾಗುವದು.

# ರೂಪರಂಗ

## ಜುಗನು

ಶೌಕತ್ ಆರ್ಟ್ ಪ್ರೊಡಕ್ಷನ್ನಿನ "ಜುಗನು" ಹುಬ್ಬಳ್ಳಿಯ "ಸುದರ್ಶನ" ಕ್ಕೆ ಈಗ ಬಂದಿದೆ. ಅದರಲ್ಲಿ ದಿಲೀಪ ಕುಮಾರ, ನೂರ್‌ಜಹಾನ್ ವರು ಮುಖ್ಯ ಪಾತ್ರವಹಿಸಿದ್ದಾರೆ.

'ಜುಗನು' ಶ್ರೀಮಂತಿಗಳಾದ ಸಾಮಾನ್ಯ ತರುಣಿಯರಲ್ಲಿ ಒಬ್ಬಳು. ಶಾಲೆಯ ಆಟಪಾಠಾದಿಗಳಲ್ಲೇನೋ ಬಹಳ ಹೆಸರು ತೆಗೆದುಕೊಂಡವಳೆಂಬ ವೈಚಿತ್ರ್ಯ ಕಥೆಯಲ್ಲಿ ಬಂದಿದೆ. ಇವಳ ಬುದ್ಧಿಯನ್ನು ಕಂಡು 'ಹಜಿಯುಬರಹ' ವನ್ನು ಹಿಂದುಸ್ಥಾನದವರು ಅಧರಿಸಿ ನಿಂತದ್ದು ಸಾರ್ಥಕ ಎನಿಸುತ್ತದೆ. ಕಾಲೇಜಿನಲ್ಲಿ ಓದಿದ, ಪ್ರಿಯತಮನನ್ನು ಕಟ್ಟಿಕೊಂಡು ಓಡಿ ಹೋಗುವಷ್ಟು ಸಲಿಗೆ ಧೈರ್ಯಾದಿಗಳುಳ್ಳ ಈ ದೊಡ್ಡ



ಮಧುಕರ ಪಿಕ್ಚರ್ಸಿನ "ಬಜಾರಿ" ಯಲ್ಲಿ ನಿಗರ್ ಸುಲ್ತಾನಾ ಮತ್ತು ಯಾಕೂಬ್

"ಸುಂದರೀಂ ಮತ್ತು ... ಸಾಮಾನ್ಯವಾಗಿ ... ಒಲಿಯುವರು ... ಇವರನ್ನು ಕಂಡರೆ ಸಿನಿಮಾಗುತ್ತದೆ.

ಇಲ್ಲವಾಗಿದ್ದರೆ ಈ ಅಪಾದಕೆಗೆ ಸ್ಥಾನವಿರುತ್ತಿರಲಿಲ್ಲ; ಅದು ಸ್ವಾಭಾವಿಕವೆನಿಸುತ್ತಿತ್ತು. ಆದ್ದರಿಂದ ಪ್ರೌಢತೆಗೆ ಸಲ್ಲದ ಹುಚ್ಚು ಹುಡುಗಾಟದಿಂದ ಆರಂಭವಾದ ಈ ಕಥೆ ದುರಂತವಾಗಿ ಪರಿಣಮಿಸಿದ್ದು ನಾಯಿಕೆಯ ಅಸಹಜವಾದ ಅಪಾಗಲ್ಯದಿಂದಲೇ. ಚಿತ್ರಪರೀಕ್ಷಕರು ಇಲ್ಲಿಯ ಅನೇಕ ಜುಗುಪ್ಸಾಜನಕ ಸನ್ನಿವೇಶಗಳನ್ನು ತೆಗೆದುಹಾಕಿಸಿರುವದು ಅಭಿನಂದನೀಯ. ಅಭಿನಯ, ಸಂಗೀತ ಇವು ಹಿತ ಮಿತವಾಗಿವೆ. ಚಿತ್ರಗ್ರಹಣ ಚಾತುರ್ಯ ಸಾಧಾರಣವಿದೆ. ಇಂದಿನ ಮಧ್ಯಮ ವರ್ಗದವರು ಹೇಗೆ ಶ್ರೀಮಂತಿಕೆಯಿಲ್ಲದೆ ಶ್ರೀಮಂತರಂತೆ ಬಾಳಲು ಬಯಸುವರು, ಬಡವರಿಂದ ದೂರವಾಗಿ ಶ್ರೀಮಂತರ ವರ್ಗಕ್ಕೆ ಯೇನಕೇನ ಪ್ರಕಾರೇಣ ಸೇರಲು ಯತ್ನಿಸುವರು ಎಂಬ ಅಂಶವನ್ನು ಚಿತ್ರ ಚೆನ್ನಾಗಿ ಬಯಲಿಗೆಳೆಯುತ್ತದೆ. ಆ ಬಯಕೆಯಿಂದಾಗುವ ಅಪಾರ ಹಾನಿ, ಕರುಣಾಜನಕ ದುರಂತ, ಚಿರಕಾಲಿಕ ದುಃಖ, ಸ್ವಪರಾಹಿತ ಇವನ್ನು ಸನಾತನ ಸುಯುಕ್ತ ಕುಟುಂಬದ ಸರ್ವಾಧಿಕಾರಿ ಮನೋಭಾವದ ಯಜಮಾನ ಯಜಮಾನಿತಿಯರಿಗೆ ತಿಳಿಸುವದೇ ಚಿತ್ರದ ನೈತಿಕ ಗುರಿ. ಈ ದೃಷ್ಟಿಯಿಂದ ಚಿತ್ರ ಸಾರ್ಥಕವಾಗಿದೆಯೆನ್ನಬಹುದು.

— "ಕರ್ಮವೀರ"ದ ಪ್ರತಿನಿಧಿಯಿಂದ




**ಕರ್ನಾಟಕ ಹೊಲಿಗೆಯ ವಿದ್ಯಾಲಯ—** ಈಚೆಗೆ ಸರಕಾರದಿಂದ ಮನ್ನಣೆ ಪಡೆದ ಧಾರವಾಡದ ಈ ಸಂಸ್ಥೆ ನಡೆಸಿದ ಮಹಿಳಾವರ್ಗದ ಸ್ನೇಹಸಮ್ಮೇಲನದ ಕಾಲದಲ್ಲಿ ತೆಗೆದ ಚಿತ್ರ. ಮಧ್ಯ ಕುಳಿತವರು ಪ್ರಿನ್ಸಿಪಾಲರಾದ ಹಳಪೇಟಿ ಚಿಂತಾಮಣಿರಾಯರು. ಅವರ ಎಡಕ್ಕೆ ಕುಳಿತವರು ಹೊಲಿಗೆಯ ಶಿಕ್ಷಕಿಯರಾದ ಶ್ರೀಮತಿ ಸುಶೀಲಾದೇವಿ ಹಳಪೇಟಿಯವರು.

## ತಿರುಗುತ್ತಿರುವ ಚೀನೀಯರು



ಜಗತ್ತಿನಲ್ಲಿರುವ ಎಲ್ಲ ಚೀನೀಯರೂ ನಾಲ್ಕು ನಾಲ್ಕು ಜನರು ಹಗಲಿಗೆ ಹಗಲುಹಾಕಿ ಗಂಟೆಗೆ ಮೂರು ಮೈಲಿನಂತೆ ತಿರುಗಹತ್ತಿದರೆ ದಿನಕ್ಕೆ ೧೫ ಮೈಲು ನಡೆದಾರು. ಹಾಗೆ ನಡೆದು ಜಗತ್ತಿನ ಸುತ್ತಲಿನ ಮಾರ್ಗವನ್ನು ಕ್ರಮಿಸಲು ೨೨ ವರ್ಷ ೩೦೨ ದಿನಗಳು ಬೇಕಾದಾವು. ಅಂದರೆ ಒಂದು ಇಡೀ ತಲೆಮಾರು! ಜನಗಣನೆ ಒಮ್ಮೆ ೧೭೪೧ ರಲ್ಲಿ ಆಗಿತ್ತಂತೆ. ಚೀನದಲ್ಲಿ ಅಂದು ೬೦ ಕೋಟಿ ಜನಸಂಖ್ಯೆ ಇದ್ದಿತು. ಅಂದಿನಿಂದ ಇಂದಿನ ವರೆಗೆ ಅಲ್ಲಿ ಜನಗಣನೆಯೇ ಆಗಿಲ್ಲ. ಮೇಲಿನ ಗತಿಯಲ್ಲಿ ಸಾಗಿದರೆ ಪ್ರತಿವರ್ಷ ಕೇವಲ ೨,೬೨,೪೦,೦೦೦ ಜನರು ಮಾತ್ರ ಸುತ್ತಿ ಮುಗಿಯುವುದು!

ಹುಡುಗಿ ಹುಡುಗಾಟವೇ ಸೌಂದರ್ಯವೆಂದು ಅಳವಡಿಸಿಕೊಂಡ ಮುಗ್ಧೆಯಂತೆ ಸರ್ವಾನುಕೂಲನಾದ ಪ್ರಿಯನನ್ನು ಅವನ ತಾಯಿಯ ಅಜ್ಞಾನಮಯವೂ, ಸ್ವಾರ್ಥಪರವೂ ಕೃತಕವೂ ಆದ ಬೇಡಿಕೆಯನ್ನು ನೆರವೇರಿಸಿ ಕೊಡಲು ವಂಚಿಸಿ ದೂರವಿಡುವ ಪ್ರಯತ್ನವೆಂದೂ ಮಹಾತ್ಯಾಗವೆನಿಸದು. ಅವಳು ಸ್ವಾರ್ಥತ್ಯಾಗಿಯೆಂದು ಮೆರೆಯಬೇಕಾದರೆ ಕೇವಲ ತನ್ನ ಸ್ವಾರ್ಥವಷ್ಟನ್ನೇ ತನ್ನ ಪ್ರಿಯತಮನ ಚಿರಸುಖಕ್ಕಾಗಿ ಧಾರೆಯೆರೆಯಬೇಕಾಗಿತ್ತು. ಹಾಗೆ ಮಾಡದೆ, ತಾನೂ ಹಾಳಾಗಿ ತನ್ನ ಸರಳ ಸುಂದರ ಪ್ರಣಯಿಯ ಬಾಳನ್ನೂ ಹಾಳು ಮಾಡಿದ ತಿಳಿಗೇಡಿತನ ಪ್ರೌಢನಾಯಿಕೆಯೆಂದು ಚಿತ್ರಿತವಾಗಿರುವ ಜುಗನುವಿಗೆಂದೂ ಒಪ್ಪತಕ್ಕದ್ದಲ್ಲ. ಪ್ರಿಯತಮ ಸೂರಜನ ತಾಯಿಗೆ ತಾನು ಅವನನ್ನು ಮದುವೆಯಾಗೆನೆಂದು ಭಾಷೆ ಕೊಡುವ ಅಗತ್ಯ ಮತ್ತು ನ್ಯಾಯ್ಯತೆ ಅವಳಿಗೆ ಇದ್ದಿಲ್ಲ. ಅದುದರಿಂದ ಅವಳ ಧರ್ಮಸಂಕಟ ಕೇವಲ ಅಭಾಸಿಕವಲ್ಲದೆ ಪ್ರೌಢೋಚಿತವಲ್ಲ. ಆದರಿಂದ ಅವಳ ಕಾಲೇಜು ವಿದ್ಯಾಭ್ಯಾಸದ ಪ್ರೌಢಿಯೆಲ್ಲ ಅರ್ಥವಿಲ್ಲವೆನಿಸುತ್ತದೆ, ಸಂವರ್ಧವ ನಿಷ್ಪಕ್ಷಪಾತದಿಂದ ಸರಳವಾಗಿ ಸೂರಜನೆದಿರು ಇಟ್ಟಿದ್ದರೆ, ಅವನು ತ್ರೇತಾಯುಗದ ಶ್ರೀರಾಮಚಂದ್ರನಾಗುವ ಬಯಕೆಯಿಂದ ಈ ಅನನ್ಯ ಪ್ರೇಮಿಯಾದ ತನ್ನನ್ನು ಮದುವೆಯಾಗದೆ ತಾಯ್ತಂದೆಯರ ವಿಚಾರಾಮಕ್ಕೆ ಅನುಕೂಲ ಮಾಡಿಕೊಡಲು ಬೇಡದ ಅಲ್ಲಕುಬೇರ ಪುತ್ರಿಯನ್ನು ವರಿಸಲು ನಿರ್ಧರಿಸುತಿದ್ದನೋ ಅಥವಾ ತಾಯ್ತಂದೆಯರ ಸ್ವಾರ್ಥದ, ಪುತ್ರ ಸುಖಾಪೇಕ್ಷೆಯ ಅಭಾವದ, ಆಡಂಬರಪ್ರಿಯತೆಯ, ಧನದಾಸ್ಯದ ಅನಾಗರಿಕ ವೃತ್ತಿಯನ್ನು ಪ್ರೌಢನಾಯಕನ ಸ್ವಭಾವಕ್ಕೊಪ್ಪುವಂತೆ ಖಂಡಿಸಿ ತನ್ನನ್ನು ಮದುವೆಯಾಗಲು ನಿರ್ಧರಿಸುತ್ತಿದ್ದನೋ ನೋಡಬಹುದಾಗಿತ್ತು. ನಾಯಿಕೆ ಹಳೆಯಕಾಲದ ಸಂಸ್ಕಾರ ಪಡೆದವಳಾಗಿದ್ದರೆ ಮತ್ತು ನಾಯಕನೊಡನೆ ಅವಳಿಗಿಷ್ಟು ಸಲಿಗೆ




## ಏಕೆ, ಹೇಗೆ, ಏನು, ಎಲ್ಲಿ?

ಮಕ್ಕಳೆ,

ತಾಯಿಯೇ ಗುರು ಎಂಬುದು ನಿಜವಾದ ಮಾತು; ಆದರೆ ಅನೇಕ ವೇಳೆ ಅವಳು ಸದ್ಗುರುವಾಗುವುದರ ಬದಲು ದುರ್ಗುರುವಾಗುವುದೇ ಹೆಚ್ಚು. ಆದುದರಿಂದ ತಾಯಿ ನಿನ್ನ ಏಕೆ, ಏನು, ಹೇಗೆಗಳಿಗೆ ಸಮರ್ಪಕವಾದ ಉತ್ತರ ಕೊಡದಾಗ ತಂದೆಯೆಂಬ ಗುರುವನ್ನು ಸಮೀಪಿಸಬೇಕು. ಅವನಿಂದಲೂ ಹೊಂದಿಸುವ ಉತ್ತರ ಸಿಗದಾಗ ಶಾಲೆಯಲ್ಲಿಯ ನಿನ್ನ ಪ್ರಿಯಗುರುವನ್ನು ಕೇಳಬೇಕು. ಪ್ರಿಯಗುರುವೇ ಹಲವು ವೇಳೆ ತಾಯಿ ತಂದೆಗಳಿಗಿಂತ ಹೆಚ್ಚು ತನಗೆ ತಿಳಿಯದುದನ್ನು ಅನ್ಯರಿಂದ ತಿಳಿದಾದರೂ ನಿನಗೆ ತಿಳಿಸಿ ಹೇಳುವನು. ಅಂಥವನನ್ನು ನೀನು ಹುಡುಕಿಕೊಂಡ ಹೊರತು ನಿನಗೆ ಸುಜ್ಞಾನ ಲಭಿಸದು.

ನಾನು ಚಿಕ್ಕವನಿದ್ದಾಗ ಕಣ್ಣಿಗೆ ಮೂಲೆಯಲ್ಲಿ ಬಿದ್ದಿರುವ ಹುಡುಗನಾಗಿದ್ದಿಲ್ಲ. ಮೂಲೆಯಲ್ಲಿ ಮುದುರಿ ಕುಳಿತುಕೊಂಬ ಮೂದೇವಿತನ ಹತ್ತಿರಸರಸ್ವತಿಯೆಂದೂ ಸುಳಿಯಳು. ಆದುದರಿಂದ ನಾನು ನಿತ್ಯವೂ ಅಮ್ಮನನ್ನು ಏನಾದರೊಂದು ಸಂಗತಿಯ ಬಗ್ಗೆ ಏಕೆ, ಏನು, ಹೇಗೆ? ಎಂದು ಕೇಳುತ್ತಿದ್ದೆ. ನನ್ನಮ್ಮ ಬಹಳ ಒಳ್ಳೆಯವಳು. ಅಧಿಕಪ್ರಸಂಗ ಎಂದು ಉಳಿದ ತಾಯ್ತಂದೆಯರು ಹಾರಿಸಿ ಬಿಡುವಂತಿದ್ದ ನನ್ನ ಎಷ್ಟೋ ಸಮಸ್ಯೆಗಳಿಗೆ ಅವಳು ಸಮಾಧಾನಕರ ಉತ್ತರವನ್ನು ಕೊಡುತ್ತಿದ್ದಳು. ಆದರೆ ಕೆಲವೊಮ್ಮೆ ದೊಡ್ಡವರಿಗೆ ಅತಿ ಚಿಕ್ಕದೆನಿಸಿದರೂ ನನಗೆ ಬಹಳ ಮಹತ್ವದ್ದೆನಿಸುವ ಎಷ್ಟೋ ಪ್ರಶ್ನೆಗಳನ್ನು ಅಜ್ಞಾನ ಮತ್ತು ಅಧಿಕಾರಗಳ ಬಲದಿಂದ ಅವಳು ತಳ್ಳಿಹಾಕುತ್ತಿದ್ದಳು. ಆಗ ನನಗೆ ಇಡೀ ದಿನ ಊಟ ಸೇರದು, ನಿದ್ದೆ ಬರದು.

ಇದ್ದಲಿ ತೆಗೆದುಕೊಂಡು ನಾನೊಮ್ಮೆ ಗೋಡೆಯ ಮೇಲೆ ಬರೆಯುತ್ತಿದ್ದೆ. ಮತ್ತೊಮ್ಮೆ ಬಾಗಿಲ ಚಿಲಕವನ್ನು ಅಲ್ಲಾಡಿಸುತ್ತ ನಿಂತಿದ್ದೆ. ಮಗುದೊಮ್ಮೆ ಬಾಳೆಯ ಎಲೆಯ ಚೂರನ್ನು ಚೂರುಚೂರಾಗಿ ಹರಿಯುತ್ತಿದ್ದೆ. ಆಗ ಅಮ್ಮ ಬಂದು, 'ಏ ಹಾಗೆಲ್ಲ ಮಾಡಬಾರದು!' ಎಂದು ಗದ್ದರಿಸಿದಳು. ಕೂಡಲೆ ಹೊರಟಿತು ನನ್ನ ಸವಾಲು, 'ಏಕೆ?' ಎಂದು ಅವಳಿಗೆ ಏಕೋ ಬಹಳ ಕೋಪ ಬಂತು. 'ದೊಡ್ಡವರು ಹೇಳಿದ್ದಕ್ಕೆ ಏಕೆ ಏನು ಎಂದು ಕೇಳಬಾರದು; ಹಾಗೆಲ್ಲ ಮಾಡಿದರೆ ಕೇಡಾಗುತ್ತದೆ ಎಂದು ಹಿರಿಯರು ಹೇಳುತ್ತಾರೆ— ಗೊತ್ತಾಯಿತೋ?' ಎಂದು ಸುಮ್ಮನಾದಳು. ಆದರೆ ನಾನು ಹೇಗೆ ಸುಮ್ಮನಾಗಲಿ? 'ಅದು ಹೇಗೆ?' ಎಂದು ಮರು ಸವಾಲು ಹಾಕಿದೆ. ಕೂಡಲೆ ಏನಾಯಿತು ಬಲ್ಲಿರಾ? ಗುಡುಗಿನ ನಂತರ ಬರುವ ಸಿಡಿಲಿನಂತೆ ಬೆನ್ನಿನ ಮೇಲೆ ಎರಡು ಏಟುಗಳು ಬಿದ್ದವು! ಏಟಿನಿಂದು ತಿಳಿದಿರಾ ಆಗ ನಾನು? ಖಂಡಿತವಾಗಿಯೂ ಇಲ್ಲ. ಈ ಗಂಡಸು ಭೂಪತಿ ಅಳಲೂ ಇಲ್ಲ. ಮತ್ತೆ ಮಾತಾಡಲೂ ಇಲ್ಲ; ನೇರವಾಗಿ ತಂದೆಯವರ ಹತ್ತಿರ ಹೋಗಿ ಅಹವಾಲು ಹೇಳಿಕೊಂಡೆ. ನನ್ನ ಅಪ್ಪನೆಂದರೆ ಅಮ್ಮನಿಗಿಂತ ಹೆಚ್ಚು ಸುಶಿಕ್ಷಿತರು. ಕೂಡಲೆ ಬೆನ್ನು ಸವರಿ ತೊಡೆಯ ಮೇಲೆ ಕೂರಿಸಿಕೊಂಡು," ಹಾಗೆ ಮಾಡಿದರೆ ಮನೆಯೆಲ್ಲ ಅವಲಕ್ಷಣವಾಗಿ ತೋರುತ್ತದೆ, ನೋಡಿದವರು ಬೇಸರ ಪಟ್ಟುಕೊಂಡು ನಮ್ಮಲ್ಲಿ ಬಂದು ಹೋಗುವುದನ್ನು ಕಡಿಮೆ ಮಾಡುತ್ತಾರೆ. ಮತ್ತು ಕ್ರಮೇಣ ನಮ್ಮ ಬಗೆಗೆ ಉದಾಸೀನತೆ ಮತ್ತು ತಿರಸ್ಕಾರ ... ನಮ್ಮ ... ಲ್ಲಿ ಅವರು ನೆರವಾಗುವುದಿಲ್ಲ. ಆದರಿಂದ ನಾವು ಸಾಲ, ಶೂಲ ಮುಂತಾದ ದುಃಖದಲ್ಲಿ ಬೀಳಬಹುದು," ಎಂದು ಅಪ್ಪನು ಹೇಳಿದ್ದು ತಪ್ಪೆಂಬುದನ್ನು ತೋರಗೊಡದೆ ನನ್ನ ಮನಸ್ಸನ್ನು ಸಮಾಧಾನ ಪಡಿಸುವ ಉತ್ತರವನ್ನು ಕೊಟ್ಟರು. ಅಂದಿನಿಂದ ನಾನು ಅಂಥ ಚೇಷ್ಟೆಗಳನ್ನು ಮಾಡಲಿಲ್ಲ!

೧

ಗುರುವೆ ನಮಗೆ
ಹಿರಿಯ ಗೆಳೆಯ,
ಗುರುವೆ ನಮಗೆ
ತಿಳುವಳಿಕೆಯ
ಒಲಿದುಕೊಡುವ
ದೇವದೂತ ಬಲ್ಲೆಯಾ ಮಗು?

೨

ಅವನು ತಾಯಿ-
ಯಾಗಬಹುದು
ತಂದೆಯಾಗಿ
ಬರಲು ಬಹುದು,
ಕಲಿಸುವಾತ-
ನೆನಿಸಬಹುದು, ನೆಂಟನೆಂದಿಗು!

೩

ಏಕೆ, ಹೇಗೆ,
ಏನು, ಎಲ್ಲಿ?
ಎಂಬ ನಾಕು
ಮುಖಗಳಿಂದ
ಮೂಕತೆಯನು
ದೊಮ್ಮ ಕಳೆವ ತನ್ನ ರಾಣಿಯ!

೪

ಅಂದಿನಿಂದ
ಅವಳು ಜಗದ
ಜ್ಞಾನವನ್ನು
ಗಳಿಸಿಕೊಂಡು
ನಾಕು ಪ್ರಶ್ನೆ
ಹಾಕುವವಗೆ
ಹಂಚಲಾದಳು!

— ಮಾಮ

## ನನ್ನ ಹೃದಯ ಉಳ್ಳಿಯಂತೆ

೧

ನನ್ನ ಹೃದಯ ಉಳ್ಳಿಯಂತೆ;
ಸುಲಿದು ನೋಡಿದೆ—
ಆದರದರೊಳರಸಿ ನೋಡೆ
ತಿರುಳು ಬರಿಯದೆ!
ಅದರ ನಡುವೆ ಮತ್ತೆ ನಡುವೆ—
ಒಳಗು ಒಳಗಿದೆ!

೨

ಅದಕೆ ಹಾಳೆ ಬಹಳ; ಸುಲಿದೆ
ನೊಂದುನೊಂದನು—
ಗ್ರಹಗಳಡಗಿ ಸೂರ್ಯನುದಿಸಿ
ಮುಳುಗಿ ಹೋದನು!
ಕೆಲಸ ದೊಡ್ಡದದಕೆ ಮೊದಲ—
ದಾಯಿತೆಂದೆನು!

೩

ವಾರ ವಾರ ಸುಲಿಯಬಹುದು,
ವರ್ಷ ವರ್ಷವೂ;
ಆದರಿಲ್ಲ ತಿರುಳು ಸಿಕ್ಕಿ-
ತೆಂಬ ಹರ್ಷವು!
ಎಷ್ಟು ಸುಲಿದರಷ್ಟು ಹೆಚ್ಚು
ನಿನ್ನ ಮರ್ಷವು!

೪

ನಡುವೆ ಶೂನ್ಯವೆಂಬ ಬುಧರ
ಸುಯ್ಯು ಸುಳ್ಳದು—
ನಡುವೆ ಶೂನ್ಯವೆಂಬ ಮಾತು
ಸುಳ್ಳು ಸೊಲ್ಲದು!
ನಡುಗಳಲ್ಲಿ ನಾಲ್ಕು ಲಕ್ಷ,
ನಾನೆ ಎಲ್ಲದು!

೫

ಕೆಲವು ಯೋಗ್ಯ ಕೆಲವಯೋಗ್ಯ
ಹಾಳೆಗಳಲಿವೆ;
ಎಷ್ಟೆ ಸಣ್ಣ ಹಾಳೆಯಿರಲಿ—
ಸುಲಿಯಲಡಗಿವೆ
ಅದಕು ಸಣ್ಣ ಸಣ್ಣ ಹಾಳೆ—
ಒಳಗಿನೊಳಗಿವೆ!

(ಅರ್. ಪಿ. ಲಿಸ್ಟರರು ಅಮೇರಿಕದ 'ಅಟ್ಲಾಂಟಿಕ್' ಪತ್ರಿಕೆಯಲ್ಲಿ ಪ್ರಕಟಿಸಿದ ಕವನವೊಂದರ ಅನುವಾದ—ಶ್ರೀ)



**ಮೋಟಾರು ದಾನ:** ಬ್ರಿಟಿಶ ಸರಕಾರದ ಯೋಜನೆಯನ್ವಯ ಯುದ್ಧದಲ್ಲಿ ಅಂಗಹೀನರಾದವರಿಗೆ ೧೫೦೦ ಮೋಟಾರು ಕಾರುಗಳನ್ನು ದಾನ ಮಾಡಲಾಗುವದು. ಅವುಗಳಲ್ಲಿ ಮೊದಲನೆಯದನ್ನು ಪಡೆದ ಹಾರ್ಡಿಂಗನೆಂಬವನು ಕಣ್ಣು ಕಾಲುಗಳನ್ನು ಯುದ್ಧದಲ್ಲಿ ಕಳೆದುಕೊಂಡವನು. ವಿರಾಮವೇತನ ಮಂತ್ರಿ ಮಾರ್ಕಂಡರು ಬಲಕ್ಕೆ, ಮೋಟಾರು ಪಡೆದ ಹಾರ್ಡಿಂಗನು ನಡುವೆ ಮತ್ತು ಅವನ ಹೆಂಡತಿ ಎಡಕ್ಕೆ ಕಾಣಿಸುತ್ತಾರೆ.

## ಮಧುರ ಮಿಲನ

ನೀಲಗಗನದಿ ಕೇಲಿ ನಡೆದಿಹ
ಶುಭ್ರಶಾರದ ಚಂದ್ರಮ।
ಬಾನ ಬಯಲಲಿ ತಾರೆ ಬಳಗದ
ದಿವ್ಯ ಕಾರ್ತಿಕ ಸಂಭ್ರಮ ॥೧॥
ಶ್ಯಾಮ ಕುಂಜದಿ ರಾಧಿಕೆ।
ನಿಂದಿಹಳು ಅಭಿಸಾರಿಕೆ।

ಯಮುನೆ ಎದುರಲಿ ಸೂಸಿ ಮಂಜುಳ
ರವವ, ಸಾಗುತಲಿರುವಳು।
ಇನಿಯನೆಡೆಗೈತರುತಲಿರುತಿಹ
ಮುಗ್ಧ ನೂತನ ವಧುವೊಲು ॥೨॥
ರಾಧೆ ಕಾಯುತಲಿರುವಳು।
ರಾಧೆ-ಶ್ಯಾಮನ ಬರುವನು।

ಬಂದನೇನೋ ಶ್ಯಾಮಸುಂದರ
ನೆಂದು ಮೇಲುದ ಹೊದೆದಳು।
ಕಾಲ ಪೈಜಣ ಝುಣಿರುಝುಣಿರೆನೆ
ಎದುರುಗೊಳ್ಳಲು ಬಂದಳು ॥೩॥
ಚಿತ್ರಚೋರನ ಕಾಣದೆ।
ಸ್ನಿಗ್ಧ ಮುಗ್ಧಾ ರಾಧಿಕೆ।

ತುಂಬುಗಣ್ಣಿನ ತುಂಬ ರಾಧೆಯು
ತುಂಬಿ ತಿಂದವು ಕಂಬನಿ।
ಶ್ಯಾಮಸುಂದರನಿರದೆ ಅರಿಜಣ
ಬಾಳೆನೇ ಳು ಪರಿಹಿ ॥೪॥
ವಿರಹ ವ್ಯಾಕುಲ ಮನ ಲಿ।
ರಾಧೆ ಯಮುನೆಯ ತ ಯಲಿ।

ಅವಿತುಕೊಂಡಿಹನೇನೊ ಎನ್ನುತ
ಬಳ್ಳಿಬಳ್ಳಿಗು ನಡೆದಳು।
ಬೀಳುಕೊಳದ ನಿರಿಯ ಚಿಮ್ಮುತ
ಮಳಿನರಾಶಿಯೊಳಲೆದಳು ॥೫॥
ನಭದಿ ನಕ್ಕಿತು ತಾರಕೆ।
"ಮಾತಬರದಿತ್ತೆ, ರಾಧಿಕೇ"।

ತಾಳಲಾರದೆ ಕರಳು ಬಗೆವೊಲು
ಕೂಗಿ ಕರೆದಳು ಇನಿಯನಾ।
"ಬಾರದಿರೆ ನೀ ಯಮುನೆ-ಮಡಿಲಲಿ
ಮಾಳ್ಪೆನಿದೊ ಪ್ರಾಣಾರ್ಪಣಾ"
ಕೇಲಿ ಬಂದಿತು ಆ ಕ್ಷಣಾ।
ಮಧುರ ಮುರಲೀ ವಾದನಾ ॥೬॥

—ಶೆಟ್ಟಿ ರಘೋತ್ತಮ

## ದನಕರುಗಳ ಗುಣ ನಿಮಗೆ ಗೊತ್ತೆ?

❀ ದನಗಳು ಒಂದನ್ನೊಂದು ಇರಿದರೆ ಇರಿಸಿಕೊಂಡ ದನದ ಹಾಲು ಕಡಿಮೆಯಾಗುವದುಂಟು. ಇದಕ್ಕಾಗಿ ಇಂಗ್ಲಂಡಿನಲ್ಲಿ ಕೆಲವರು ಚಿಕ್ಕಂದಿನಲ್ಲೆ ಕರುಗಳ ಕೋಡುಗಳನ್ನು ವಿದ್ಯುಚ್ಛಕ್ತಿನಿಂದ ತೆಗೆದುಬಿಡುತ್ತಾರೆ. ಮಾತ್ರವಲ್ಲ ಕೋಡಿಲ್ಲದ ಹೋರಿಗಳಿಂದ ಸಂಕರ ಜಾತಿಯ ದನಕರುಗಳನ್ನು ಹುಟ್ಟಿಸುತಿದ್ದಾರೆ.

❀ ಹಾಡು ಕೇಳಿದರೆ ಕೆಲ ದನಗಳು ಹೆಚ್ಚು ಹಾಲು ಕೊಡುವವೆಂದು ಇಂಗ್ಲಂಡಿನಲ್ಲಿ ಒಬ್ಬನು ಕಂಡು ಹಿಡಿದನು. ಈಗ ಅವನು ತನ್ನ ಕೊಟ್ಟಿಗೆಯಲ್ಲೊಂದು ರೇಡಿಯೋ ಹಾಕಿದ್ದಾನೆ.

❀ ಹವೆಯ ಬದಲಾವಣೆಯಿಂದಲೂ ದನಕರುಗಳ ಹಾಲಿನ ಸಮೃದ್ಧಿ ಕೆಡುವದೆಂದು ಇನ್ನೊಬ್ಬಳು ಗೌಳಿಗಿತ್ತಿ ಕಂಡುಹಿಡಿದಿದ್ದಾಳೆ. ಅದಕ್ಕಾಗಿ ಅವಳು ತನ್ನ ಹದಿನಾರು ದನಗಳಿಗೆ ಚಳಿಗಾಲದಲ್ಲಿ ಉಣ್ಣೆಯ, ಮಳೆಗಾಲದಲ್ಲಿ ಮೇಣ ಕಪ್ಪಡದ ಮತ್ತು ಬೇಸಗೆಯಲ್ಲಿ ಹತ್ತಿ ಬಟ್ಟೆಯ ಅಂಗಿ ತೊಡಿಸುತ್ತಾಳೆ. ಇದರಿಂದ ಸರ್ವಕಾಲಗಳಲ್ಲಿಯೂ ಅವು ಒಂದೇ ಪರಿಮಾಣದ ಹಾಲು ಕೊಡುತ್ತವೆ. ಈ ಪದ್ಧತಿಯನ್ನು ಡೆನ್ಮಾರ್ಕ್, ಹಾಲಂಡ್ ಮತ್ತು ನ್ಯೂಝೀಲಂಡಗಳಲ್ಲಿಯೂ ಅನುಸರಿಸುತ್ತಾರೆ. ಹಿಂದೀಯರೂ ಇದರ ಪ್ರಯೋಗ ಮಾಡಿ ಅನುಭವ ಪಡೆಯುವರೊ?

# ಕರ್ನಾಟಕ

## ಧಾರವಾಡ

ಧಾರವಾಡ ನಗರ ಸಭೆಯ ಭಂಗೀ ಜನರು ಕಳೆದ ೧೮ ನೇ ತಾರೀಕಿನಿಂದ ಸಂಪು ಹೂಡಿರುವರು. ತುಟ್ಟಿಭತ್ತೆ ಮೊದಲಾದ ತಮ್ಮ ಬೇಡಿಕೆಗಳಿಗಾಗಿ ಅವರು ಸಂಪು ಹೂಡಿದ್ದಾರೆ. ಕಳೆದ ಎರಡು ವರುಷಗಳಲ್ಲಿ ಭಂಗೀ ಜನರು ಸಂಪು ಹೂಡಿದ್ದು ಇದು ನಾಲ್ಕನೆ ಸಲ. ನಗರ ಸಭೆಯ ಅಧಿಕಾರಿಗಳು ತಮ್ಮ ಧೋರಣವನ್ನು ಸಮರ್ಥಿಸಿಕೊಂಡು ಪ್ರಕಟನೆ ಹೊರಡಿಸಿದ್ದಾರೆ. ೨೩ಕ್ಕೆ ಸಂಪು ಕೊನೆಗಂಡಿತು.

ತಮ್ಮ ವಿಶೇಷ ಅಪ್ಪಣೆ ಇಲ್ಲದೆ ಯಾರಿಗೂ ಶಸ್ತ್ರಾಸ್ತ್ರ ಮದ್ದುಗುಂಡು ಮೊದಲಾದವುಗಳನ್ನು ಮಾರತಕ್ಕದ್ದಲ್ಲ ಎಂದು ಧಾರವಾಡ ಜಿಲ್ಲಾ ಮ್ಯಾಜಿಸ್ಟ್ರೇಟರು ಮಾರಾಟಗಾರರಿಗೆ ಅಪ್ಪಣೆ ವಿಧಿಸಿದ್ದಾರೆ.

ಒಕ್ಕಲತನ ಮತ್ತು ಅರಣ್ಯಖಾತೆಯ ಮಂತ್ರಿಗಳಾದ ಶ್ರೀ ಪಾಟೀಲ ಮಲ್ಲನಗೌಡರು ೨೮ ನೇ ತಾರೀಕು ಮುಂಜಾನೆ ಮುನವಳ್ಳಿಯಿಂದ ಹೊರಟು ನರಗುಂದ, ಶಿರ್ಸಾಪುರ, ನವಲಗುಂದ, ಸಾಸ್ವಿಹಳ್ಳಿಗೆ ಸಂದರ್ಶನವಿತ್ತು ರಾತ್ರಿ-೩೦ ಗಂಟೆಗೆ ಧಾರವಾಡ ಮುಟ್ಟುವರು. ಅವರು ಈ ಸಂಚಾರದಲ್ಲಿ ಬರಗಾಲ ಪ್ರದೇಶಗಳನ್ನು ಸಂದರ್ಶಿಸುವದಲ್ಲದೆ ನರಗುಂದ ನವಲಗುಂದ ಸಾಸ್ವಿಹಳ್ಳಿಗಳಲ್ಲಿ ಸಾರ್ವಜನಿಕ ಸಭೆಗಳಲ್ಲಿ ಭಾಷಣ ಮಾಡುವರು.

ಪ್ರಸಿದ್ಧ ನರ್ತಕಿಯರಾದ ಶ್ರೀಮತಿ ತಾರಾ ಚೌಧರಿಯವರು ತಮ್ಮ ಸಂಗಡಿಗರೊಂದಿಗೆ ಹುಬ್ಬಳ್ಳಿಯ ಮಲ್ಲಿಕಾರ್ಜುನ ಥಿಯೆಟರಿನಲ್ಲಿ ಇದೇ ಎಪ್ರಿಲ ೯ ಕ್ಕೆ ರೀಲ್ಫ ಇನ್ಸಟಿಟ್ಯೂಟಿನ ಪರವಾಗಿ ತಮ್ಮ ಕಾರ್ಯಕ್ರಮವನ್ನು ಮಾಡುವರು. ಮರುದಿನ ಇನ್ಸಟಿಟ್ಯೂಟಿನ ಸಭಾಗೃಹದಲ್ಲಿ ಸದಸ್ಯರಿಗಾಗಿ ಅವರ ಮತ್ತೊಂದು ಕಾರ್ಯಕ್ರಮವಿದೆ.

ಗಜೇಂದ್ರಗಡದ ಶ್ರೀ ಯಶವಂತಪ್ಪಾ ಶಿವಪ್ಪಾ ಎಂಬ ಅಕ್ಕಸಾಲಿಗನೊಬ್ಬನು ೮ ತಿಂಗಳುಗಳಿಂದ .ನರೇಗಲ್ಲಿನಲ್ಲಿ ವಾಸಮಾಡಿದ್ದು ಸುಮಾರು ೨೩ ಸಾವಿರ ರೂಪಾಯಿಗಳ ಬೆಳ್ಳಿ ಬಂಗಾರವನ್ನು ತೆಗೆದುಕೊಂಡು ಈಗ ಓಡಿ ಹೋಗಿದ್ದಾನೆ. ಮನೆಯಲ್ಲಿ ಅವನ ತಂದೆಯೊಬ್ಬನೆ ಈಗ ಉಳಿದಿರುವನು.

ಧಾನ್ಯದ ರೂಪದಲ್ಲಿ ಲಾವಣಿಯನ್ನು ಸ್ವೀಕರಿಸುವವರೆಲ್ಲ ಎಪ್ರಿಲ ೧ ರೊಳಗಾಗಿ ಅಥವಾ ತಾವು ಲಾವಣಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗಾಗಿ ತಮ್ಮಲ್ಲಿಯ ಧಾನ್ಯದ ಸಂಗ್ರಹವನ್ನು ತಿಳಿಸಬೇಕೆಂದು ಧಾರವಾಡ ಜಿಲ್ಲಾ ಮ್ಯಾಜಿಸ್ಟ್ರೇಟರು ಪ್ರಕಟನೆ ಹೊರಡಿಸಿದ್ದಾರೆ.

---

ಇದೇ ಎಪ್ರಿಲದಿಂದ ಮೈಸೂರಿಗೆ ವಿಮಾನ ಸೌಕರ್ಯವನ್ನೊದಗಿಸಲಾಗುವದು. ತಾತ್ಕಾಲಿಕ ನಿಯಮದ ಈ ಯೋಜನೆಯನ್ನು ಕೈಕೊಂಡಿದ್ದು ಮದರಾಸ, ಬೆಂಗಳೂರು ಕೋಲಂಬೋ, ತಿರುವಾಂಕೂರುಗಳಿಗೆ ಸಾರಿಗೆ ಸೌಕರ್ಯ ಲಭಿಸುವದು.



## ಬೆಳಗಾವಿ

ಗೋಕಾವಿ ತಾಲೂಕಿನಲ್ಲಿ ಎತ್ತುವಳಿ ಯೋಜನೆಗೆ ರೈತರು ಮನವಿಟ್ಟು ಸಹಾಯ ಮಾಡುತಿರುವರು. ರೈತರು ಊದಿಸುತ್ತ ಬಾರಿಸುತ್ತ ಘೋಷಣೆಮಾಡುತ್ತ ಬಂದು ಧಾನ್ಯ ಕೊಡುತಿರುವರು. ಇಂತು ಅವರು ೨೦ ನೇ ತಾರೀಕಿನ ದಿನ ಕುಲಗೋಡ ಗೋಡೌನಿಗೆ ೧೨೦೦ ಚೀಲ ಜೋಳ ಕೊಟ್ಟರು.

ಮಿರಜಿ ಕೊಳ್ಳಿ ಹಾಗು ಲೂಟೀ ಖಟ್ಲೆಯ ವಿಚಾರಣೆಯು ಪ್ರಾರಂಭವಾಗಿದೆ. ೫೩ ಜನರು ಆರೋಪಿಗಳಾಗಿದ್ದು ವಿದೇಶ ನ್ಯಾಯಾಧೀಶರು ಈ ಖಟ್ಲೆಯನ್ನು ನಡೆಸುವರು. ಈ ಆರೋಪಿಗಳಲ್ಲಿ ಡಾ. ಅಣ್ಣಾಸಾಹೇಬ ಕುಲಕರ್ಣಿ, ಶಂಕರ ಗದ್ರೆ, ಮಾಳವದೆ, ಭಾವೂ ಫೀರಾಜಿ, ಬುವಾ ಪವಾರ ಮೊದಲಾದವರಿರುವರು.

## ವಿಜಾಪುರ

ಜಿಲ್ಲಾ ಕಾಂಗ್ರೆಸ ಸಮಿತಿಯ ಮೇಲೆ ಮತ್ತು ಗಾಂಧಿ ನಿಧಿ ಸಂಗ್ರಹ ಸಮಿತಿಯ ಮೇಲೆ ಆರೋಪಹೊರಿಸಿ ಉಪವಾಸಮಾಡಿ ಶಿಸ್ತುಭಂಗಮಾಡಿದ್ದರ ಸಂಬಂಧದಲ್ಲಿ ಮುಂಬಯಿ ಶಾಸನ ಸಭೆಯ ಸದಸ್ಯರಾದ ಶ್ರೀ ಹುಜರೆಯವರ ಮೇಲೆ ಶಿಸ್ತು ಭಂಗ ಕ್ರಮವನ್ನು ಕೈಕೊಳ್ಳಬೇಕೆಂದು ವಿಜಾಪುರ ಜಿಲ್ಲಾ ಕಾಂಗ್ರೆಸ ಸಮಿತಿಯವರು ಪ್ರಾಂ. ಕಾಂ. ಸಮಿತಿಗೆ ಪುರಸ್ಕಾರಮಾಡಿದ್ದಾರೆ; ಈ ಉಪವಾಸಕ್ಕೆ ಬೆಂಬಲ ಕೊಟ್ಟದ್ದಕ್ಕಾಗಿ ಶ್ರೀ ದುಬಲಗುಂಡಿ ಮತ್ತು ಸದಾಶಿವಪ್ಪ ಕುಳನೂರ ಇವರ ಮೇಲೆಯೂ ಕ್ರಮ ಕೈಕೊಳ್ಳಬೇಕೆಂದು ಕೇಳಿಕೊಳ್ಳಲಾಗಿದೆ.

ವಿಜಾಪುರ ಜಿಲ್ಲಾ ಕಾಂಗ್ರೆಸ ಸಮಿತಿಯ ಉಪಾಧ್ಯಕ್ಷರಾದ ಶ್ರೀ ಮುರಿಗೆಪ್ಪ ಸುಗಂಧಿಯವರು ತಮ್ಮ ಸ್ಥಳಕ್ಕೆ ರಾಜೀನಾಮೆ ಕೊಟ್ಟದ್ದು ಅದು ಸ್ವೀಕೃತವಾಗಿದೆ. ಹುಜರೆ ಪ್ರಕರಣದಲ್ಲಿ ಅವರು ತಳೆದ ಧೋರಣದ ಬಗ್ಗೆ ಜಿಲ್ಲಾ ಕಾಂಗ್ರೆಸ ಸಮಿತಿಯಲ್ಲಿ ಅಸ್ವಾರಸ್ಯವ್ಯಕ್ತಪಡಿಸುವ ಗೊತ್ತುವಳಿ ಸ್ವೀಕೃತವಾಗಿದೆ.

ಬಾಗಲಕೋಟೆಯ ಹಿರಿಯ ಮತ್ತು ಪ್ರಸಿದ್ಧ ವಕೀಲರಾಗಿದ್ದ ಶ್ರೀ ಗೋವಿಂದರಾವ ಬೆಳಗಲ್ಲ (ಮುಧೋಳ) ಇವರು ಕಳೆದ ೧೫ ನೇ ತಾರೀಕು ವಯಸ್ಸಿನ ೮೩ ನೇ ವರುಷದಲ್ಲಿ ವೈಕುಂಠವಾಸಿಗಳಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ರಾಷ್ಟ್ರೀಯ ವೃತ್ತಿಯವರೂ ಸಾರ್ವಜನಿಕ ಕಾರ್ಯಗಳಲ್ಲಿ ಆಸ್ಥೆಯಿಂದ ಭಾಗವಹಿಸುವವರೂ ಆಗಿದ್ದರು. ಇವರ ಮನೆಯೆಂದರೆ ಸಾರ್ವಜನಿಕ ಕಾರ್ಯಕರ್ತರ ಬೀಡಾರದಂತಿದ್ದಿತು. ವಕೀಲ ಸಂಘದವರ ಸಭೆ ಸೇರಿ ದುಃಖ ಪ್ರದರ್ಶನ ಮಾಡಲಾಯಿತು.

## ಉತ್ತರ ಕನ್ನಡ

ಶಿರ್ಶಿ ತಾಲೂಕಿನ ಜಣೀಕೇರಿ ಪಟೀಲರಾದ ಶ್ರೀ ಸುಬ್ರಾಯ ಹೆಗಡೆಯವರು ಭಟ್ಟಿಸರೆ ತೆಗೆಯುತಿರುವಾಗ ಬಂಧಿತರಾಗಿದ್ದರಷ್ಟೆ. ಅವರ ಮೇಲೆ ಆ ಬಗ್ಗೆ ಖಟ್ಲೆ ನಡೆದು ೧೩ ತಿಂಗಳ ಶಿಕ್ಷೆ ಮತ್ತು ೧೦೦೦ ರೂಪಾಯಿ ದಂಡ ವಿಧಿಸಲಾಯಿತು. ಅಪರೊಡನಿದ್ದ ಇಬ್ಬರಿಗೆ ೧೦೦೦ ರೂಪಾಯಿ ದಂಡ ೬ ತಿಂಗಳ ಶಿಕ್ಷೆ ಮತ್ತು ಇನ್ನೊಬ್ಬರಿಗೆ ೧೫೦ ರೂಪಾಯಿ ದಂಡ ವಿಧಿಸಲಾಯಿತು.

ಜಿಲ್ಲಾ ಗ್ರಾಮೋದ್ಧಾರ ಸಂಘದವರು ೧೦ ಆದರ್ಶ ಗ್ರಾಮಗಳನ್ನು ನಿರ್ಮಿಸಬೇಕೆಂದು ಇಟ್ಟುಕೊಂಡಿರುವರು.

ಕೇಂದ್ರ ಸರಕಾರದಿಂದ ನೇಮಕವಾದ ಒಕ್ಕಲತನ ಸುಧಾರಣಾ ಸಮಿತಿಯ ಪರವಾಗಿ ಅಖಿಲ ಭಾರತದಲ್ಲಿ ಅಡಿಕೆ ಬೆಳೆ ನಿರೀಕ್ಷಣೆಗಾಗಿ ನಿಯುಕ್ತರಾದ ಶ್ರೀ ಕೆ. ಕೆ. ನಂಬಿಯಾರರು ದಕ್ಷಿಣ ಹಿಂದುಸ್ತಾನದ ಸಂಚಾರವನ್ನು ಮುಗಿಸಿ ೧೬ ಕ್ಕೆ ಕಾರವಾರಕ್ಕೆ ಹೋಗಿದ್ದರು. ಅಲ್ಲಿಂದ ಅವರು ರತ್ನಾಗಿರಿ ಜಿಲ್ಹೆಗೆ ಹೋದರು. ಮುಂದೆ ಅವರು ಓಡಿಸಾ ಪಶ್ಚಿಮ ಬಂಗಾಲ ಮತ್ತು ಆಸಾಮಗಳ ಸಂಚಾರವನ್ನು ಕೈಕೊಳ್ಳಲಿರುವರು.

---

ಚಿಕ್ಕ ಮಗಳೂರಲ್ಲಿ ಕಳೆದವಾರ ವ್ಯಾಪಾರ ಸಂಘದವರು ಸಭೆಸೇರಿ ಔಟ ಏಜನ್ಸಿಯನ್ನು ಊರ ಮಧ್ಯದಲ್ಲಿ ಸ್ಥಾಪಿಸಬೇಕು. ಟಪಾಲು ಬೇಗ ಬರುವಂತೆ ಯೋಜಿಸಬೇಕು. ಕಡೂರಿನಿಂದ ಬೇಗ ಸಾಮಾನು ಬರುವಂತೆ ವ್ಯವಸ್ಥೆಯಾಗಬೇಕು ಎಂದು ಮುಂತಾಗಿ ಕೇಳಿಕೊಳ್ಳುವ ಗೊತ್ತುವಳಿ ಸ್ವೀಕೃತವಾಯಿತು.

## ದಕ್ಷಿಣ ಕನ್ನಡ

ಮಂಜೇಶ್ವರ ಗೋವಿಂದ ಪೈಗಳನ್ನು ಮದ್ರಾಸು ಸರಕಾರದವರು ಆಸ್ಥಾನ ಕವಿಗಳಾಗಿ ನೇಮಿಸಿದ್ದಾರೆ.

ಹೆಮ್ಮಕ್ಕಳ ಕಾಲೇಜು ಇರುವಲ್ಲಿನ ಸರಕಾರಿ ಕಾಲೇಜುಗಳು ಹುಡುಗೆಯರನ್ನು ತಮ್ಮ ಕಾಲೇಜುಗಳಿಗೆ ಸೇರಿಸಿಕೊಳ್ಳಬಾರದೆಂದು ಮಂಗಳೂರಿನ ಸರಕಾರಿ ಕಾಲೇಜಿನ ಪ್ರಿನ್ಸಿಪಾಲರಿಗೆ ವಿದ್ಯಾಖಾತೆಯ ಡೈರೆಕ್ಟರಿಂದ ಬಂದ ಆಜ್ಞೆಯನ್ನು ನಿಷೇಧಿಸುವ ಮತ್ತು ಆ ಹುಕುಮನ್ನು ಹಿಂತೆಗೆದುಕೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸುವ ಗೊತ್ತುವಳಿ ದಿನಾಂಕ ೧೮ ರಂದು ಸಂಜೆ ಮಂಗಳೂರು ಗಣಪತಿ ಶಾಲೆಯಲ್ಲಿ ಶ್ರೀ ಬಿ. ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ಕೂಡಿದ ಸಭೆಯಲ್ಲಿ ಸ್ವೀಕೃತವಾಯಿತು.

ಮಂಗಳೂರು ಜಿಲ್ಲಾ ರಾಜಕೀಯ ಸಮ್ಮೇಳನವನ್ನು ಜರುಗಿಸಬೇಕೆಂದು ಜಿಲ್ಲಾ ಕಾಂ. ಕಾರ್ಯಸಮಿತಿಯಲ್ಲಿ ನಿರ್ಣಯಿಸಲಾಗಿದೆ. ಇದರೊಂದಿಗೆ ಕಿಸಾನರ ಮತ್ತು ರಾಜಕೀಯ ಸಂತ್ರಸ್ತರ ಪರಿಷತ್ತೂ ಜರುಗುವವು. ಈ ಪರಿಷತ್ತು ಎಪ್ರಿಲ್ ತಿಂಗಳ ಕೊನೆಯಲ್ಲಿ ಮಂಗಳೂರಲ್ಲಿ ಜರಗಲಿರುವವು.

ಹುಬ್ಬಳ್ಳಿ ಧಾರವಾಡ ಕಡೆಯ ಪ್ರಸಿದ್ಧ ಸಂಗೀತ ವಿದ್ವಾಂಸರಾದ ಸಂಗೀತರತ್ನ ಶ್ರೀ ಮಲ್ಲಿಕಾರ್ಜುನ ಮನ್ಸೂರರವರ ಸಂಗೀತ ಕಚೇರಿಯು ಕಳೆದವಾರ ಮಂಗಳೂರಲ್ಲಿ ಜರುಗಿತು. ಶ್ರೀಗಳಾದ ಎಚ್. ಸುಂದರರಾವ್ ಮತ್ತು ಪ್ರೊ. ಶಾಮರಾವ್ ಮಂಗೇಶಕರ್ ಇವರ ಹಿಮ್ಮೇಳವಿತ್ತು.

ವಿಜಾಪುರದ ಪ್ರಸಿದ್ಧ ನಾಗರಿಕರೂ ಸ್ಥಾನಿಕ ಸಂಸ್ಥೆಗಳ ಸದಸ್ಯರೂ ಆಗಿದ್ದ ಶ್ರೀ ಬಾಬೂರಾವ ಕೆಂಭಾವಿಯವರು ೨೩ ನೇ ತಾರೀಕು ಮೈಸೂರಿನಲ್ಲಿ ವೈಕುಂಠವಾಸಿಗಳಾದರೆಂದು ತಿಳಿಸಲು ವಿಷಾದವಾಗುತ್ತದೆ.

ಮೂಡಬಿದ್ರೆಯ ಬಾಲಿಕಾ ಮಾಧ್ಯಮಿಕ ಪಾಠಶಾಲೆಯ ವಾರ್ಷಿಕ ವರ್ಧಂತಿಯು ದಿನಾಂಕ ೧೩ ರಂದು ಮಂಗಳೂರು ಕೆನರಾ ಹೈಸ್ಕೂಲಿನ ಅಧ್ಯಾಪಕಿ ಶ್ರೀಮತಿ ಮಾಯಾರಾವ್ ಬಿ. ಎ. ಬಿ. ಟಿ. ಯವರ ಅಧ್ಯಕ್ಷತೆಯಲ್ಲಿ ಜರಗಿತು.

ಉಡಿಪಿ ಪೌರಸಭಾ ಸಮಿತಿಯ ಸಭೆಯು ದಿನಾಂಕ ೧೨ ರಂದು ಸೇರಿದಾಗ ಪೌರಸಭಾ ಕಚೇರಿಗೆ ಟೆಲಿಫೋನ ಸಂಬಂಧಪಿಟ್ಟುಕೊಳ್ಳಲು ಅಧಿಕಾರಪೀಯಲಾಯಿತು. ಸಾರ್ವಜನಿಕ ಉಪಯೋಗಾರ್ಥವಾಗಿ ಮಹಾಜನರತ್ತ ನಿಧಿಯ ಮೇಲೆ ಆದಾಯ ತೆರಿಗೆ ಹೊರಿಸಬಾರದಾಗಿ ಕೇಂದ್ರ ಸರಕಾರವನ್ನು ಕೇಳಿಕೊಳ್ಳಬೇಕೆನ್ನುವ ಪೊಲ್ಲಾಚಿಯ ಪೌರಸಭೆಯ ಠರಾವನ್ನೂ ಈ ಸಭೆಯು ಒಪ್ಪಿಕೊಂಡಿತು.

ಉಡುಪಿಯ ವೈದಿಕ ಧರ್ಮ ಪರಿಷತ್ತಿನ ಆಶ್ರಯದಲ್ಲಿ ದಿನಾಂಕ ೧೩ ರಂದು ಶ್ರೀ ಎಂ. ವಿಠಲ ಕಾಮತರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯು ಮದ್ರಾಸು ಸರಕಾರದ ದೇವಸ್ಥಾನ ಉಂಬಳಿಯ ಮಸೂದೆಯನ್ನು ತೀವ್ರವಾಗಿ ವಿರೋಧಿಸಿತಲ್ಲದೆ ಸರಕಾರವು ಈ ಮಸೂದೆಯನ್ನು ಹಿಂತೆಗೆದುಕೊಳ್ಳುವಂತೆಯೂ ನಿರ್ಣಯಮಾಡಲಾಯಿತು. ಶ್ರೀ ಸೋದೆ, ಕಾಣಿಯೂರು, ಅಧಮಾರು, ಫಲಿಮಾರು ಮಠಗಳ ಸ್ವಾಮಿಗಳೂ ಸಭೆಯಲ್ಲಿದ್ದರು.

## ಹಿಂದೂ ಧಾರ್ಮಿಕ ಉಂಬಳಿ ಮಸೂದೆಗೆ ವಿರೋಧ
### ಶ್ರೀ ಕೃಷ್ಣಾಪುರ ಮಠದ ಶ್ರೀಪಾದಂಗಳವರ ಮನವಿ

ಹಿಂದೂ ಧಾರ್ಮಿಕ ಉಂಬಳಿ ಮಸೂದೆಯು ಪರಿಶೀಲಕ ಸಮಿತಿಗೆ ಉಡುಪಿ ಶ್ರೀ ಕೃಷ್ಣಾಪುರ ಮಠದ ಶ್ರೀಮದ್ ವಿದ್ಯಾರತ್ನ ತೀರ್ಥ ಶ್ರೀಪಾದಂಗಳವರು ದೀರ್ಘವಾದ ಒಂದು ಮನವಿ ಕಳಿಸಿ ಧಾರ್ಮಿಕ ಸಂಸ್ಥೆ ಹಾಗು ಜಾತ್ಯತೀತ ಸರಕಾರದ ಚಟುವಟಿಕೆಗಳು ಭಿನ್ನ ಭಿನ್ನವಿರುವವೆಂದೂ ಸರಕಾರದವರು ಧಾರ್ಮಿಕ ಸಂಸ್ಥೆಗಳ ಆಡಳಿತಗಳನ್ನು ವಿಚಾರಿಸಿ ಅವುಗಳಿಗೆ ಸಂರಕ್ಷಣೆ ಕೊಡಬೇಕಲ್ಲದೆ ಅವುಗಳ ನಿಯಂತ್ರಣ ವಹಿಸಬಾರದೆಂದೂ ಹೀಗೆ ಅಧಿಕಾರ ವಹಿಸುವದು ಕಾಯದೆಗೆ ವಿರುದ್ಧವಾಗುವದೆಂದೂ ತಿಳಿಸಿದ್ದಾರೆ. ಮುಂದುವರಿದು ಅವರು ಹಿಂದು ಧರ್ಮವು ಸರಕಾರಕ್ಕೆ ಅಧೀನವಾದುದು ಇತಿಹಾಸದಲ್ಲಿ ಎಲ್ಲಿಯೂ ಇಲ್ಲವೆಂದೂ ಉಲ್ಲೇಖಿಸಿ ಸದ್ಯದ ಮಸೂದೆಯು ಕಾಯದೆಯಾಗಿ ಪರಿಣಮಿಸಿದಲ್ಲಿ ಧಾರ್ಮಿಕ ಸಂಸ್ಕೃತಿಯ ಕೇಂದ್ರಗಳು ಬಲಹೀನ ಹಾಗು ತೇಜೋಹೀನವಾಗುವವೆಂದೂ ಮುಂದೆ ಯಾರೂ ಧಾರ್ಮಿಕ ಕೇಂದ್ರಗಳ ಹೊಣೆಹೊರಲು ಬರುವದಿಲ್ಲೆಂದೂ ಕಾಣಿಸಿದ್ದಾರೆ. ಕೊನೆಯಲ್ಲಿ ಅವರು ಉತ್ಪನ್ನವನ್ನು ದುರುಪಯೋಗ ಪಡಿಸಿಕೊಂಡವುಗಳಲ್ಲಿ ಮುಖ್ಯ ಪ್ರಧಾನರು ತಮ್ಮ ಮಠದ ಹೆಸರು ಸೇರಿಸಿದ್ದುದು ಹಾಯು ಕೋರ್ಟಿನಲ್ಲಿ ಅದರ ವಿಚಾರಣೆ ನಡೆದಿರುವಾಗ ಅನುಚಿತವಾಗಿರುವದೆಂದು ತಾವು ಮುಖ್ಯ ಪ್ರಧಾನರಿಗೆ ತಿಳಿಸಿರುವದಾಗಿ ಕಾಣಿಸಿ ಮಸೂದೆಯನ್ನು ಹಿಂತೆಗೆದುಕೊಳ್ಳಲು ಸರಕಾರಕ್ಕೆ ಸೂಚಿಸಬೇಕಾಗಿ ಸಮಿತಿಯವರಿಗೆ ವಿನಂತಿಸಿದ್ದಾರೆ.

---

ಮೈಸೂರಿನ ಶ್ರೀ ಕೆ ಅನಂತ ಸುಬ್ರಾಯರು ಕನ್ನಡ ಟಾಯಿಪರಾಯಿಟರನ್ನು ಸಿದ್ಧಪಡಿಸಿದ್ದು ಅದನ್ನು ಶ್ರೀ ದಿವಾಕರ ರಂಗರಾಯರಿಗೆ ಕಳಿಸಿಕೊಟ್ಟಿರುವರು. ಮುಂದಿನ ತಿಂಗಳು ಮಧ್ಯದಲ್ಲಿ ಅವರು ಹುಬ್ಬಳ್ಳಿ ಧಾರವಾಡಗಳಿಗೆ ಹೋಗಿ ಹುಬ್ಬಳ್ಳಿ ಮಹಾಜನರಿಂದ ಬಂದಿರುವ ಬೇಡಿಕೆಗಳನ್ನು ಪೂರಯಿಸಲಿರುವರೆಂದು ತಿಳಿಯುತ್ತದೆ.

# ಹಿಂದುಸ್ತಾನ

## ಮುಂಬಯಿ

ಪ್ರಾಂತದ ಮೂಲೆಮೂಲೆಯಲ್ಲಿ ಗುಡ್ಡಗಾಡು ಮತ್ತು ಇತರ ಹಿಂದುಳಿದ ಪ್ರದೇಶಗಳಲ್ಲಿ ಸಹ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಲಾಗುವದೆಂದು ಮುಂಬಯಿ ಮುಖ್ಯ ಮಂತ್ರಿ ಶ್ರೀ ಬಾಳಾಸಾಹೇಬ ಖೇರ ಇವರು ಮುಂಬೈ ಶಾಸನ ಸಭೆಯಲ್ಲಿ ಹೇಳಿದರು.

ದೇಶದಲ್ಲಿ ಕಮ್ಯುನಿಸ್ಟರು ತಲೆಯೆತ್ತದಂತಹ ಪರಿಸ್ಥಿತಿಯನ್ನು ನಿರ್ಮಿಸಬೇಕೆಂದು ಮುಂಬಯಿ ಗೃಹಮಂತ್ರಿ ಶ್ರೀ ಮುರಾರಜಿಯವರು ವಿಧಿಮಂಡಳದಲ್ಲಿ ಭಾಷಣಮಾಡುತ್ತ ಜನತೆಯನ್ನು ಬಿನ್ನವಿಸಿಕೊಂಡರು. ಪ್ರಸಂಗ ಬಂದಾಗ ಕಮ್ಯುನಿಸ್ಟ ಪಕ್ಷವನ್ನು ಅಕ್ರಮಗೊಳಿಸುವೆವೆಂದೂ ಅವರು ಹೇಳಿದರು.

ಈಗ ಬಂದ ಅರ್ಜಿಗಳಿಗೆಲ್ಲ ಸರಕಾರವು ಮನ್ನಣೆಯಿತ್ತರೆ ಬರುವಮಳೆಗಾಲದಷ್ಟರಲ್ಲಿಗೆ ಸೂರತ ಜಿಲ್ಲೆಯಲ್ಲಿ ೪೦೦ ಪಂಚಾಯತಿಗಳು ಸಂಸ್ಥಾಪಿತವಾಗುವವೆಂದು ಸೂರತಜಿಲ್ಲಾ ಲೋಕಲ್‌ಬೋರ್ಡ ಅಧ್ಯಕ್ಷರು ಒಂದು ಸಭೆಯಲ್ಲಿ ಹೇಳಿದರು. ಬೋರ್ಡಿನವರು ೩೦೦ ಪಂಚಾಯತಗಳನ್ನು ಸ್ಥಾಪಿಸುವ ಯೋಜನೆಯನ್ನು ಸರಕಾರದ ಮುಂದೆ ಇಟ್ಟಿರುವರು.

ಗುಜರಾಥದ ಬರಗಾಲ ಪ್ರದೇಶದಲ್ಲಿ ದೋಲು ಸ್ವೀಕರಿಸುತ್ತಿದ್ದವರಿಗೆ ಮುಕ್ಕಟ ಬಟ್ಟೆಯನ್ನು ಹಂಚಬೇಕೆಂದು ಸರಕಾರದವರು ನಿರ್ಧರಿಸಿದ್ದಾರೆ.

ಮುಂಬಯಿ ಮತ್ತು ಮದರಾಸ ಪ್ರಾಂತಗಳಲ್ಲಿ ಪತ್ರಿಕೆಗಳ ಜಾಹಿರಾತುಗಳ ಮೇಲೆ ಕರ ಹೇರಲು ನಿರ್ಧರಿಸಿದ್ದರ ಬಗ್ಗೆ ಲಂಡನದಲ್ಲಿ ಆಶ್ಚರ್ಯ ವ್ಯಕ್ತಮಾಡಲಾಗುತಿದೆ. ಒಂದು ನೂರು ವರ್ಷಗಳ ಹಿಂದೆ ಇಂತು ಪತ್ರಿಕೆಗಳ ಜಾಹೀರಾತುಗಳ ಮೇಲೆ ಅಲ್ಲಿ ಕರ ಹೇರಲಾಗಿತ್ತು. ಆದರೆ ಕೆಲವರುಷಗಳ ನಂತರ ಅದು ಹಿಂತೆಗೆದುಕೊಳ್ಳಲ್ಪಟ್ಟಿತು. ಮೊನ್ನೆ ಮತ್ತೆ ಈ ಕರ ಹೇರಲು ಅಲ್ಲಿ ಸೂಚಿಸಲ್ಪಟ್ಟಾಗ ಅದು ನಿರಾಕೃತವಾಯಿತು.

ಸರಕಾರೇತರ ಮಾಧ್ಯಮಿಕ ಶಾಲೆಗಳ ಮುಖ್ಯಾಧ್ಯಾಪಕರು ಇನ್ನು ಮುಂದೆ ಖಾಸಗಿ ಶಿಕ್ಷಣ ಕಾರ್ಯವನ್ನು ಕೈಕೊಳ್ಳತಕ್ಕದ್ದಲ್ಲ ಉಳಿದ ಶಿಕ್ಷಕರು ಮಾತ್ರ ದಿನವೊಂದಕ್ಕೆ ಎರಡು ಗಂಟೆಗಳಂತೆ ಕೇವಲ ೫ ವಿದ್ಯಾರ್ಥಿಗಳ ವರೆಗೆ ಖಾಸಗಿ ಶಿಕ್ಷಣ ಕೊಡಬಹುದು ಎಂದು ಮುಂಬಯಿ ಸರಕಾರದವರು ಪ್ರಕಟಿಸಿದ್ದಾರೆ.

ಕಳೆದವಾರ ಅಹಮದಾಬಾದದಲ್ಲಿ ಅಂಚೆ ಜೋಹಾರನ್ನು ಲೂಟಿಮಾಡಿ ಸುಮಾರು ಮೂರುಲಕ್ಷ ರೂಪಾಯಿಗಳನ್ನು ಸೂರೆಮಾಡಿಕೊಂಡು ಹೋದ್ದರ ಸಂಬಂಧದಲ್ಲಿ ಈ ವರೆಗೆ ೩೦ ಜನರನ್ನು ಸೆರೆಹಿಡಿಯಲಾಗಿದೆ. ಒಟ್ಟು ೮ ಸಾವಿರ ರೂಪಾಯಿಗಳು ದೊರೆತಿವೆ. ಈ ಲೂಟಿಯಲ್ಲಿ ಯಾವದೇ ರಾಜಕೀಯ ಚಳವಳಿಯ ಸಂಬಂಧವಿಲ್ಲೆಂದು ಪೋಲೀಸರ ಅಭಿಪ್ರಾಯ.

ಇದೇ ಏಪ್ರೀಲ ೨೩ ರಿಂದ ೨೭ ರ ವರೆಗೆ ಮುಂಬಯಿಯಲ್ಲಿ ಸರ್ವಧರ್ಮ ಪರಿಷತ್ತು ಜರಗುವದು. ಸರ್ ರಾಧಾಕೃಷ್ಣನ್‌ರು ಮೊದಲನೆಯ ದಿನ ಅಧ್ಯಕ್ಷತೆ ವಹಿಸುವರು. ಹಿಂದು ತತ್ವ ನ್ಯಾಯಸಮಿತಿಯ ಪರವಾಗಿ ಈ ಪರಿಷತ್ತು ಸೇರುವುದಿದ್ದು ಶ್ರೀ ಕನ್ನಯ್ಯಲಾಲ ಮುನಶಿಯವರು ಸ್ವಾಗತಾಧ್ಯಕ್ಷರಾಗಿರುವರು.

ಮುಂಬಯಿ ಪ್ರಾಂತದಲ್ಲಿ ನಿಪ್ಪಾಣಿ, ರಾಜೇಬಿನ್ನೂರ ಮತ್ತು ಪನವೇಲ ನಗರಗಳಲ್ಲಿ ಮಾರ್ಚ ೧೬ ರಿಂದ ಸೀದಾ ಪದ್ಧತಿ ಪ್ರಾರಂಭಿಸಲಾಗಿದೆ.

ಸ್ಥಾನಿಕ ಸಂಸ್ಥೆಗಳ ಕೆಳಗೆ ಕೆಲಸ ಮಾಡುತಿರುವ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಕಳೆದ ಜನೆವರಿಯಿಂದ, ೫೦ ರೂ. ಮಾಸಿಕ ಸಂಬಳವಿದ್ದವರಿಗೆ ತಿಂಗಳ ೩೫ ರೂಪಾಯಿ ಮತ್ತು ೧೦೦ ರೂ. ವರೆಗೆ ವೇತನವಿದ್ದವರಿಗೆ ೪೫ ರೂ. ತುಟ್ಟಿಭತ್ತೆ ಕೊಡಬೇಕೆಂದು ಮುಂಬಯಿ ಸರಕಾರದವರು ವಿಧಿಸಿದ್ದಾರೆ.

## ಮದರಾಸ

ಮಂತ್ರಿಗಳ ಮತ್ತು ಇತರ ಸರಕಾರೀ ಅಧಿಕಾರಿಗಳ ಚಟುವಟಿಕೆಗಳನ್ನು ಪರಿಶೀಲಿಸಲು ಗುಪ್ತ ಪೋಲೀಸರನ್ನಾಗಲಿ ಇಲ್ಲವೆ ಇತರ ಯಾವದೇ ಗೆಸ್ಟಪೊ ಪದ್ಧತಿಯನ್ನಾಗಲಿ ಉಪಯೋಗಿಸುತಿಲ್ಲ ಎಂದು ಮದರಾಸ ಮುಖ್ಯ ಮಂತ್ರಿಗಳು ಶಾಸನ ಸಭೆಯಲ್ಲಿ ಭಾಷಣ ಮಾಡುತ್ತ ಹೇಳಿದರು.

ಪತ್ರಿಕೆ ಇಲ್ಲವೆ ವೇದಿಕೆಯ ಮೇಲೆ ಉಪಯೋಗಿಸಲ್ಪಡುವ ಯಾವದೇ ಬಗೆಯ ಅಶ್ಲೀಲತೆಯನ್ನು ಪ್ರತಿಬಂಧಿಸಲು ಸರಕಾರವು ಉಗ್ರೋಪಾಯಗಳನ್ನು ಕೈಕೊಳ್ಳಲು ಸರಕಾರವು ಹಿಂಜರಿಯುವದಿಲ್ಲ ಎಂದು ಮದ್ರಾಸ ಶಾಸನ ಸಭಾ ಧುರೀಣರಾದ ಶ್ರೀ ಗೋಪಾಲರೆಡ್ಡಿಯವರು ಹೇಳಿದರು. ದ್ರಾವಿಡ ಕಳಗಮ್ ಸಂಸ್ಥೆಯವರು ವಿಶಿಷ್ಟ ಜಾತಿಯ ಜನರ ವಿರುದ್ಧ ಆಕ್ಷೇಪಾರ್ಹ ಲೇಖ ಹಾಗು ಭಾಷಣ ಮಾಡುತಿರುವದರಿಂದ ಅವರ ಚಟುವಟಿಕೆಗಳನ್ನು ಸರಕಾರವು ಸೂಕ್ಷ್ಮ ರೀತಿಯಿಂದ ವಿಚಾರಿಸುತಿದೆಯೆಂದೂ ಅವರು ಹೇಳಿದರು.

ಪ್ರಶ್ನೆ ಪತ್ರಿಕೆಗಳ ಗೌಪ್ಯವು ಬಹಿರಂಗವಾದ್ದರಿಂದ ಮದರಾಸ ವಿಶ್ವವಿದ್ಯಾಲಯದವರು ಕಳೆದ ಸೋಮವಾರ ಸುರುವಾಗಲಿದ್ದ ಬಿ. ಎ. ಬಿ ಎಸ್. ಸಿ ಪರೀಕ್ಷೆಗಳನ್ನು ಅನಿಶ್ಚಿತ ಅವಧಿಯ ವರೆಗೆ ಮುಂದೂಡಿದ್ದಾರೆ.

ಮದರಾಸ ಪ್ರಾಂತವನ್ನು ಆಡಳಿತೆಯ ದೃಷ್ಟಿಯಿಂದ ಉತ್ತರ ಮತ್ತು ದಕ್ಷಿಣ ಭಾಗಗಳೆಂದು ವಿಂಗಡಿಸಲಾಗುವದೆಂಬ ಸುದ್ದಿ ನಿರಾಧಾರವಾಗಿದೆಯೆಂದು ಮದರಾಸಶಾಸನಸಭೆಯಲ್ಲಿಮಂತ್ರಿವರ್ಯಬಿಗೋಪಾಳರೆಡ್ಡಿಯವರುಹೇಳಿದರು– ಕೇಂದ್ರ ಸರಕಾರದವರು ಪ್ರಾಂತೀಕರಣದ ಸಂಬಂಧದಲ್ಲಿ ಯಾವ ನಿರ್ಣಯ ಕೊಡುವರೆಂಬ ಬಗ್ಗೆ ಮದರಾಸ ಸರಕಾರ ದಾರಿ ಕಾಯುತಿದೆಯೆಂದೂ ಅವರು ಹೇಳಿದರು.

## ಹೊಸದಿಲ್ಲಿ

ಹಿಂದುಸ್ಥಾನದ ರಾಯಭಾರಿಗಳೆಂದು ಬೇರೆ ಬೇರೆ ಕಡೆ ನೇಮಕ ಹೊಂದಿದವರ ಅಧಿಕಾರಾವಧಿ ಮುಗಿದು ಅವರೆಲ್ಲ ಮರಳಿ ಬಂದಿದ್ದುಅವರನ್ನು ಪುನಃ ನೇಮಿಸುವ ಬಗೆಗೆ ತರ್ಕವಿತರ್ಕಗಳು ನಡೆದಿವೆ. ಮೌಲಾನಾ ಅಝಾದ, ಸರ್ ರಾಧಾಕೃಷ್ಣನ್, ಸರ್ ಗಿರಿಜಾಶಂಕರ ವಾಜಪೇಯಿ ಮತ್ತು ಶ್ರೀಮತಿ ಅಮ್ಮೂ ಸ್ವಾಮಿನಾಥನ್ ಇವರ ಹೆಸರುಗಳು ಹೊಸ ನೇಮಕದ ಸಂಬಂಧದಲ್ಲಿ ಕೇಳಬರುತ್ತವೆ.

ವ್ಯಾಪಾರಿ ಸಂಸ್ಥೆಯೊಂದಕ್ಕೆ ಲಾಯಸೆನ್ಸು ಕೊಟ್ಟ ಸಂಬಂಧದಲ್ಲಿ ವಾಣಿಜ್ಯ ಮಂತ್ರಿ ಶ್ರೀ ನಿಯೋಗಿಯವರ ಮೇಲೆ ಕಾಂಗ್ರೆಸ ಪಕ್ಷದ ಸಭೆಯಲ್ಲಿ ಟೀಕೆ ಮಾಡಲ್ಪಟ್ಟಿದ್ದರಿಂದ ಅವರು ತಮ್ಮ ಸ್ಥಳದ ರಾಜೀನಾಮೆ ಕೊಡಲು ಸಿದ್ಧರಾಗಿರುವರೆಂದು ತಿಳಿಯುತ್ತದೆ.

ನಮ್ಮ ಆರ್ಥಿಕ ಸಂಪತ್ತನ್ನು ಸರಿಯಾಗಿ ಅಭಿವೃದ್ಧಿ ಪಡಿಸಿದರೆ ಒಂದೆರಡು ತಲೆಮಾರಿನಲ್ಲಿ ಈಗ ಅಧಿಕವೆನಿಸುತಿರುವ ಜನಸಂಖ್ಯೆ ಹೊರೆಯಾಗದೆ ಸೊತ್ತೆನಿಸುವದು. ಜನಸಂಖ್ಯೆ ಹೆಚ್ಚಾಗದಂತೆ ಕೃತ್ರಿಮೋಪಾಯ ಕೈಕೊಳ್ಳುವದು ನನಗೆ ಒಪ್ಪಿತವಿಲ್ಲ ಎಂದು ಮುಂತಾಗಿ ಅರ್ಥಸಚಿವ ಡಾ. ಜಾನ್ ಮತ್ತಾಯರು ಹಿರಿಯೋಲಗದಲ್ಲಿ ಹೇಳಿದರು.

ಯುಕ್ತರಾಷ್ಟ್ರ ಸಂಘದ ಆರ್ಥಿಕ ಅಭಿವೃದ್ಧಿ ಉಪಸಮಿತಿಯ ಸಭೆ ೨೦ ಕ್ಕೆ ಲೇಕಸಕ್ಸೆಸ್‌ದಲ್ಲಿ ಸೇರಿ ಡಾ. ವಿಜಯೇಂದ್ರರಾವ ಇವರನ್ನು ಅಧ್ಯಕ್ಷರನ್ನಾಗಿ ಆರಿಸಲಾಯಿತು. ಹತ್ತು ದಿನಗಳ ವರೆಗೆ ಈ ಸಭೆ ನಡೆಯುವದು. ಹಿಂದುಳಿದ ರಾಷ್ಟ್ರಗಳ ಆರ್ಥಿಕ ಅಭಿವೃದ್ಧಿಗಾಗಿ ಈ ಸಮಿತಿಯು ಸೂಚನೆಗಳನ್ನು ಮಾಡುವದು.

ನಥುರಾಮ ಗೋಡ್ಸೆ ಮೊದಲಾದವರು ಪಂಜಾಬ ಹಾಯಕೋರ್ಟಿಗೆ ಮಾಡಿಕೊಂಡ ಅಪೀಲ ಅರ್ಜಿಯ ವಿಚಾರಣೆಯನ್ನುಮುಂದಕ್ಕೆ ಹಾಕಲಾಗಿದೆ. ಅವಶ್ಯಕ ಕಾಗದಪತ್ರಗಳು ಸಿದ್ಧವಾಗದಿದ್ದುದರಿಂದ ವಿಚಾರಣೆಯನ್ನು ಮುಂದಕ್ಕೆ ಹಾಕಲಾಗಿದೆ. ಅಪೀಲ ಮಾಡಿದವರಿಗೆಲ್ಲ ತಮ್ಮ ವಕೀಲರ ಹೆಸರು ಕೊಡಬೇಕೆಂದು ಹಾಯಕೋರ್ಟಿನವರು ತಿಳಿಸಿರುವರು.

## ಹೈದರಾಬಾದ

ಲಾಯಕಅಲ್ಲಿ ಮಂತ್ರಿಮಂಡಳದಲ್ಲಿ ಅರ್ಥ ಮಂತ್ರಿಗಳಾಗಿದ್ದ ನವಾಬ ಮೊಯಿನ್ ನವಾಜ ಜಂಗರನ್ನು ಕೆಲಸದಿಂದ ಕಿತ್ತಿಹಾಕಲಾಗಿದೆಯೆಂದು ತಿಳಿಯುತ್ತದೆ. ಲಂಡನದಲ್ಲಿ ಹೈದರಾಬಾದ ಏಜಂಟ ಜನರಲ್‌ರಾಗಿದ್ದ ನವಾಬ ಮೀರ ನವಾಜಜಂಗ ಇವರನ್ನುನಿವೃತ್ತಗೊಳಿಸಲಾಗಿದೆ. ನವಾಬ ಮೊಯಿನ್ ಜಂಗರು ಈ ಮೊದಲು ಮಂತ್ರಿಮಂಡಳದಿಂದ ತಳ್ಳಲ್ಪಟ್ಟಿದ್ದು ಔಪಚಾರಿಕ ರೀತಿಯಾಗಿ ಅವರನ್ನೀಗ ಕಿತ್ತಿಹಾಕಲಾದ ಪ್ರಕಟನೆ ಹೊರಟಿದೆ.

ಅಖಿಲ ಭಾರತ ಹಿಂದು ಮಹಾಸಭೆಯ ಕಾರ್ಯದರ್ಶಿ ಶ್ರೀ ವಿ. ಜಿ. ದೇಶಪಾಂಡೆಯವರು ಈಗ ಹೈದರಾಬಾದ ಸಂಸ್ಥಾನದಲ್ಲಿ ಸಂಚರಿಸುತ್ತಿರುವರು. ಕಳೆದ ಮೂರುವಾರ ಸಂಸ್ಥಾನದಲ್ಲಿ ಅವರುಸಂಚರಿಸಿಭಾಷಣಗಳನ್ನು ಮಾಡಿರುವರು. ಅವರುತುಳಜಾಪುರಕ್ಕೆಬಂದಕೂಡಲೆ ಅವರಮೇಲೆ ನೋಟೀಸು ಪ್ರಯೋಗಿಸಿ ಸಂಸ್ಥಾನದಲ್ಲಿ ಭಾಷಣ ಮಾಡಬಾರದೆಂದು ವಿಧಿಸಲಾಯಿತು.

ಇಜಿಪ್ತ ವೃತ್ತಪತ್ರ ಶಿಷ್ಟಮಂಡಳದವರು ಹೈದರಾಬಾದಕ್ಕೆ ಬಂದಾಗ ಮಿಲಿಟರಿ ಗವರ್ನರ ಜನರಲ್‌ರೊಂದಿಗೆ ನಿಜಾಮರ ಅರಮನೆಗೆ ಹೋಗಿ ಅವರೊಡನೆ ೧೦ ನಿಮಿಷ ಚರ್ಚೆ ಮಾಡಿದರು. ಇಜಿಪ್ತ ಹಾಗು ಹೈದರಾಬಾದಗಳ ನಡುವಿನ ಸಾಂಸ್ಕೃತಿಕ ಸಂಬಂಧದಲ್ಲಿ ಚರ್ಚೆಯಾಯಿತೆಂದು ತಿಳಿಯುತದೆ.

---

ಮದುವೆ ಸಮಾಜ ಸೇವೆಗೆ ಅಡ್ಡ ಬರಲಾರದು. ಆದರಿಂದ ಸಮಾಜ ಸೇವಾವೃತ್ತಿಯು ಮುಕ್ತಾಯವಾಗಕೂಡದು ಎಂದು ಮುಖ್ಯ ಮಂತ್ರಿ ಪಂಡಿತ ಜವಾಹರಲಾಲ ನೆಹರು ಇವರು ಹೊಸದಿಲ್ಲಿಯಲ್ಲಿಯ ಲೇಡಿ ಆಯರ್ವಿನ್' ಕಾಲೇಜಿನ ಘಟಕೋತ್ಸವ ಸಮಾರಂಭದಲ್ಲಿ ಭಾಷಣ ಮಾಡುತ್ತ ಪದವೀಧರ ಯುವತಿಯರಿಗೆ ಉಪದೇಶಿಸಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘವು ರಾಜಕೀಯ ಚಟುವಟಿಕೆಗಳನ್ನು ಸಂಪೂರ್ಣವಾಗಿ ಬಿಟ್ಟುಗೊಟ್ಟು ಕೇವಲ ಸಾಂಸ್ಕೃತಿಕ ಚಟುವಟಿಕೆಗಳ ಗುರಿಯನ್ನಿಟ್ಟುಕೊಂಡು ತನ್ನ ಘಟನೆಯ ಹೊಸ ಕರಡನ್ನು ಸಿದ್ಧಪಡಿಸಿದ್ದು ಸರಕಾರವು ಅದಕ್ಕೆ ಮನ್ನಣೆ ಕೊಡಬಹುದೆಂದು ತೋರುತ್ತದೆ.

ಅಮೇರಿಕೆಯ ನೌಕಾಧಿಕಾರಿಗಳಾಗಿದ್ದ ಅಡ್ಮಿರಲ್ ನಿಮಿಜರನ್ನು ಕಾಶ್ಮೀರದ ಸಾರ್ವಮತಗಣನಾಧಿಕಾರಿಯನ್ನಾಗಿ ನೇಮಿಸಲಾಗಿದೆ.

---

# ವಾರದ ಭವಿಷ್ಯ

ಜ್ಯೋತಿಷಿ.. ಕೃಷ್ಣಶಾಸ್ತ್ರಿ ಛಡೆ ಭವಿಷ್ಯ ಕಥನ ಆಫೀಸ ಖಡೇಬಝಾರ, ಬೆಳಗಾವಿ

## ಮಾರ್ಚ ೨೮ ರಿಂದ ಎಪ್ರಿಲ ೩ ರ ವರೆಗೆ

### ಮೇಷ

ಹಣ ತುಂಬ ಖರ್ಚಾದರೂ ಸುಖಪಡುವ ಋಣವಿಲ್ಲವೆಂದು ನಿಮ್ಮ ಬಗ್ಗೆ ಈ ವಾರ ಹೇಳಬೇಕಾಗುವದು. ದಂಪತಿಗಳಿಬ್ಬರಿಗೂ ಸ್ವಲ್ಪ ದೇಹಾಲಸ್ಯ ಬರಬಹುದು. ಉದ್ಯೋಗದಲ್ಲಿ ಲಾಭ ಚನ್ನಾಗಿದ್ದರೂ ನಿಮ್ಮ ಪ್ರತಿಷ್ಠೆಗೆ ಕಳಂಕ ಹಚ್ಚುವ ಕುತಂತ್ರಗಳನ್ನು ಶತ್ರುಗಳು ಮಾಡುತ್ತಲೇ ಹೋಗುವರು. ವಾದ ಸ್ಪರ್ಧೆಗಳಲ್ಲಿ ಮಧ್ಯಮ ಸ್ಥಿತಿ. ಯಾವ ಮಾತು ತೆಗೆದುಕೊಂಡರೂ ಅಯಕಟ್ಟಿನ ಸಮಯದಲ್ಲಿ ಕಂಡುಕೇಳದ ಉಪದ್ರವಗಳು ಹಾಜರಾಗುವವು. ಪ್ರವಾಸದಿಂದ ಕಾರ್ಯಸಿದ್ಧಿಯಾದೀತು. ಅಶ್ವಿನಿಯ ಕೊನೆಯ ೨ ಮತ್ತು ಭರಣಿಯ ಮೊದಲ ೨ ಚರಣಗಳಿಗೆ ಅನಿಷ್ಟಫಲಗಳ ಬಾಧೆ ಕಡಿಮೆ. ತಾ. ೧, ೨, ೩ ಉತ್ತಮ.

### ವೃಷಭ

ಮೈಗೆ ಸುಖವಿದ್ದರೂ ಮನಕ್ಕೆ ಇಲ್ಲ. ಬಂಧುಗಳೂ ಹೊಂದಿದವರೂ ನಿಮ್ಮ ಮನ ನೋಯಿಸಲು ಬೇಕಾದ್ದನ್ನೆಲ್ಲ ಮಾಡಬಹುದು. ಉದ್ಯೋಗದಲ್ಲಿ ಲಾಭಕ್ಕೂ ಪ್ರತಿಷ್ಠೆಗೂ ಕಡಿಮೆಯಿಲ್ಲ. ವಾದ ಸ್ಪರ್ಧೆಗಳಲ್ಲಿ ನಿಮಗೆ ಅನುಕೂಲ. ಪತ್ರವ್ಯವಹಾರ, ಭೆಟ್ಟಿಗಳು ಪ್ರವಾಸಕ್ಕಿಂತ ಹಿತ. ಕೃತ್ತಿಕೆಯ ಕೊನೆಯ ೨, ರೋಹಿಣಿಯ ಮೊದಲ ೨, ಚರಣಗಳಿಗೆ ಒಳ್ಳೆ ಪ್ರಸನ್ನಕಾಲ. ತಾ. ೨೮, ೨೯, ೩೦, ೩ ಅನುಕೂಲ ದಿನಗಳು.

### ಮಿಥುನ

ಕಿರುಕುಳ ಅಸ್ವಸ್ಥಗಳಿಗೆ ನೀವೂ ನಿಮ್ಮ ಪತ್ನಿಯೂ ಒಳಗಾಗಬಹುದಾದರೂ ಪ್ರಾಪಂಚಿಕ ಸುಖಕ್ಕೆ ಕುಂದಿಲ್ಲ. ಉದ್ಯೋಗದಲ್ಲಿ ಆಡಂಬರಕ್ಕೆ ತಕ್ಕಷ್ಟು ಲಾಭಬಾರದು. ಮಕ್ಕಳಿಂದ ನಿಮಗೆ ಮೆಚ್ಚುಗೆಯಾಗದ ಕಾರ್ಯಗಳಾಗಬಹುದು. ಮಿತ್ರರೂ ಅಡ್ಡಗಾಲಿಕ್ಕಬಹುದಲ್ಲದೆ ದಾಯಾದ್ಯರು ಇಚ್ಛಿತ ಕಾರ್ಯದಲ್ಲಿ ವಿಘ್ನವೊಡ್ಡುವ ಸಂಭವವುಂಟು. ವಾದಸ್ಪರ್ಧೆಗಳ ಹುಟ್ಟಿಗೆ ಉಭಯಪಕ್ಷಗಳಿಗೂ ಅಷ್ಟೇ. ಭೆಟ್ಟಿಗಿಂತ ಪತ್ರವ್ಯವಹಾರ ಲೇಸು ಆರ್ದ್ರೆಯ ಕೊನೆಯ ೨ ಪುನರ್ವಸುವಿನ ಮೊದಲ ೨ ಚರಣಗಳಿಗೆ ಅಷ್ಟು ತೊಂದರೆಯಿಲ್ಲ. ತಾ. ೨೮, ೨೯, ೩೦, ೩೧ ಅನುಕೂಲ ದಿನಗಳು.

### ಕರ್ಕ

ಗಂಡಹೆಂಡರಿಬ್ಬರಿಗೂ ದಿನಬೆಳಗಾದರೆ ಒಂದಲ್ಲ ಒಂದು ಜಡ್ಡು ಗಂಟು ಬೀಳುವದು. ಉದ್ಯೋಗದಲ್ಲಿ ಇರುವೆಯಾಗಿ ಸಕ್ಕರೆ ತಿನ್ನಿರಿ. ಆದರೆ ನಿಮ್ಮ ಸಂಗ್ರಹವನ್ನು ಕರಗಿಸಬಹುದಾದ ದೊಡ್ಡ ಖರ್ಚಿನ ತೊಡಕು ಫಕ್ಕನೆ ಉದ್ಭವಿಸುವ ಶಂಕೆಯುಂಟು. ವಾದ ಸ್ಪರ್ಧೆಗಳಲ್ಲಿ ಸಾಧಾರಣ ಅನುಕೂಲ. ಪ್ರವಾಸ ಹಿತಕರ, ಭೆಟ್ಟಿ ಪತ್ರವ್ಯವಹಾರ ಅಷ್ಟಕ್ಕಷ್ಟೆ. ಪುಷ್ಯದ ಕೊನೆಯ ೨ ಮತ್ತು ಆಶ್ಲೇಷೆಯ ಮೊದಲ ೨ ಚರಣಗಳಿಗೆ ತಂಟೆ ಕಡಿಮೆ. ತಾ. ೨೯, ೩೦, ೨ ಮತ್ತು ೩ ಒಳಿತು.

### ಸಿಂಹ

ನಿಮಗೂ ಮಕ್ಕಳಿಗೂ ಆರೋಗ್ಯಭಾಗ್ಯ ಕಡಿಮೆ. ಮೇಲಾಗಿ ಹೆಂಡತಿ ಮೇಲಿಂದ ಮೇಲೆ ಎದುರಾಡುವಳು. ನಿಮ್ಮ ಮನಸಿಗೆ ಒಪ್ಪದ ಸಂಗತಿಗಳು ನಡೆಯುವವು. ಶತ್ರುಗಳ ಕಾಟವೂ ಹೆಚ್ಚುವದಲ್ಲದೆ ನಿಮಗೆ ಜಯವಾಗುವ ಆಶೆ ತೋರಿಬಂದು ತೀರ್ಮಾನ ಮಾತ್ರ ತದ್ವಿರುದ್ಧವಾಗಿ ಪರಿಣಮಿಸಬಹುದು. ಸ್ಥಾವರಾಸ್ತಿಯಲ್ಲಿ ಸಂಬಂಧವಿಲ್ಲದ ಜನರಿಂದ ತೊಂದರೆಗಳು. ಪತ್ರವ್ಯವಹಾರ ಲೇಸು. ಮಘೆಯ ಕೊನೆಯ ೨ ಮತ್ತು ಪೂರ್ವದ ಮೊದಲ ೨ ಚರಣಗಳಿಗೆ ತೊಂದರೆ ಕಡಿಮೆ. ತಾ. ೩೧, ೧, ೨ ಅನುಕೂಲ.

### ಕನ್ಯಾ

ನಿಮ್ಮ ಪ್ರಕೃತಿಗೆ ಅಲ್ಪ ಸ್ವಲ್ಪ ಕ್ಲೇಶವಿದ್ದರೂ ಹೆಂಡತಿ ಮಕ್ಕಳು ಸೌಖ್ಯವಾಗಿರುವರು. ಪ್ರಾಪಂಚಿಕ ಸೌಖ್ಯ ಚನ್ನಾಗಿದೆ. ಪ್ರಿಯಜನರ ಸಹವಾಸವೂ ಒಂದೆರಡು ದಿನ ಲಭಿಸಬಹುದು. ಉದ್ಯೋಗದಲ್ಲಿ ಪ್ರತಿಷ್ಠೆಯು ಮಾನದಿಂದ ಲಾಭ ಕಡಿಮೆ. ಮಿತ್ರರಲ್ಲಿ ವಿರೋಧ. ಸಿಕ್ಕಾಬಟ್ಟೆ ವೆಚ್ಚಗಳೂ ಇಲ್ಲದ ಪ್ರಸಂಗಗಳೂ ಮೈಮೇಲೆ ಬರಬಹುದು. ವಾದಸ್ಪರ್ಧೆಗಳಲ್ಲಿ ಯಾರಿಗೂ ಸೋಲುಗೆಲವಿಲ್ಲ. ಪತ್ರವ್ಯವಹಾರಕ್ಕಿಂತ ಭೆಟ್ಟಿ ಒಳಿತು. ಉತ್ತರೆಯ ಕೊನೆಯ ೨ ಮತ್ತು ಹಸ್ತದ ಮೊದಲ ೨ ಚರಣಗಳಿಗೆ ತೊಂದರೆ ಹೆಚ್ಚು. ತಾ|| ೨೯, ೩೦, ೩ ಅನುಕೂಲ.

### ತುಲಾ

ನಿಮ್ಮಿಬ್ಬರಿಗೂ ಆರೋಗ್ಯ ಚನ್ನಾಗಿರುವದಿಲ್ಲ. ಇತರ ಪ್ರಾಪಂಚಿಕ ಸುಖವೂ ಅಷ್ಟಕ್ಕಷ್ಟೆ. ಉದ್ಯೋಗದಲ್ಲಿ ಪ್ರತಿಷ್ಠೆಯೇನೋ ಬಹಳ ಹೆಚ್ಚಿದರೂ ಲಾಭದ ದೃಷ್ಟಿಯಿಂದ ನೋಡಿದರೆ ಏನೂ ಪ್ರಯೋಜನವಿಲ್ಲ. ಎಲ್ಲದರಲ್ಲಿಯೂ ಮುಂದಿಯ ಮೇಲೆ ಅವಲಂಬನೆ. ಪರಸ್ತ್ರೀಯರ ಬಗ್ಗೆ ಕುಬುದ್ಧಿ. ವಾದ ಸ್ಪರ್ಧೆಗಳಲ್ಲಿ ಪ್ರತಿಕೂಲತೆ. ನಿಮ್ಮ ಕೆಟ್ಟ ಬಾಯಿಯಿಂದಾಗಿ ಮಿತ್ರರೂ ತಿರುಗಿಬೀಳುವರು. ಭೆಟ್ಟಿಗಿಂತ ಪತ್ರವ್ಯವಹಾರ ಒಳಿತು. ಸ್ವಾತಿಯ ಕೊನೆಯ ೨ ಮತ್ತು ವಿಶಾಖೆಯ ಮೊದಲಿನ ೨ ಚರಣಗಳಿಗೆ ಅನಿಷ್ಟ ಕಡಿಮೆ: ತಾ|| ೨೮, ೩೧, ೧ ಒಳಿತು.

### ವೃಶ್ಚಿಕ

ತಂದೆ ಅಥವಾ ತತ್ಸಮಾನ ಹಿರಿಯರಿಗೆ ಕ್ಲೇಶ ಬರಬಹುದು ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖಕ್ಕೆ ಅಡ್ಡಿಯಿಲ್ಲ. ಸ್ಥಾವರದಲ್ಲಿ ಹೆಚ್ಚಳ. ಉದ್ಯೋಗದಲ್ಲಿ ಪ್ರತಿಷ್ಠೆ ಲಾಭಗಳೆರಡೂ ನಿಮ್ಮ ಪ್ರಯತ್ನ, ಅಂದಾಜುಗಳಿಗೆ ಸರಿಯಾಗಿರವು. ಸದ್ಗುಣಗಳ ಸಹವಾಸ ದೊರೆಯುವದು. ಪತ್ರವ್ಯವಹಾರ ಲೇಸು. ಅನುರಾಧೆಯ ಕೊನೆಯ ೨ ಮತ್ತು ಜ್ಯೇಷ್ಠೆಯ ಮೊದಲೆರಡು ಚರಣಗಳಿಗೆ ಅನುಕೂಲ ತಾ|| ೨೯, ೩೦, ೩ ಅನುಕೂಲ.

### ಧನು

ಮಕ್ಕಳಲ್ಲೊಬ್ಬರಿಗೆ ಅಸ್ವಸ್ಥವಾಗಬಹುದು. ಇತರ ವಿಚಾರಗಳಲ್ಲಿ ಪ್ರಾಪಂಚಿಕ ಸುಖ ಚನ್ನಾಗಿರುವದು. ಉದ್ಯೋಗದಲ್ಲಿ ಪ್ರತಿಷ್ಠೆ ಲಾಭ ಚನ್ನಾಗಿದ್ದರೂ ನಿಮ್ಮ ತೊಂದರೆಗಳು ಮುಗಿಯುವದಿಲ್ಲ. ವಾದ ಸ್ಪರ್ಧೆಗಳಲ್ಲಿ ಅನುಕೂಲ. ಮಿತ್ರರಲ್ಲಿ ಸ್ವಲ್ಪ ವಿರೋಧ ಪತ್ರವ್ಯವಹಾರ ಒಳಿತು. ಮೂಲದ ಕೊನೆಯ ೨ ಮತ್ತು ಪೂರ್ವಾಷಾಢದ ಮೊದಲ ೨ ಚರಣಗಳಿಗೆ ತೊಂದರೆ ಕಡಿಮೆ. ತಾ|| ೨೮, ೨೯, ೩೦ ಅನುಕೂಲ.

### ಮಕರ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಕ್ಲೇಶವಾದರೂ ಕುಶಲಕ್ಕೊಳ್ಳುವರ ಅಷ್ಟು ಮುಂದೆ ಕಾಣ್ಕೆಯಿರಾಗುವದು. ಉದ್ಯೋಗದಲ್ಲಿ ಪ್ರತಿಷ್ಠೆ ಮತ್ತು ಲಾಭ ಅಷ್ಟು. ವಾದ ಸ್ಪರ್ಧೆಗಳಲ್ಲಿ ಯಶ ಕಡಿಮೆ; ಅಲ್ಲದೆ ಶತ್ರುಗಳು ನಿಮ್ಮ ಮನೆಯೊಳಗೇ ಬಂದು ಹುಟ್ಟಿಕೊಳ್ಳುವರು. ವಿರೋಧಿಯಾದವರಿಂದ ಉಪದ್ರವ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ಉತ್ತರಾಷಾಢದ ಕೊನೆಯ ೨ ಮತ್ತು ಶ್ರವಣದ ಮೊದಲೆರಡು ಚರಣಗಳಿಗೆ ಅಷ್ಟು ಕೆಟ್ಟದ್ದಿಲ್ಲ. ತಾ|| ೨೮, ೨೯, ೩೦, ೩ ಉತ್ತಮ.

### ಕುಂಭ

ಹೆಂಡತಿಗೆ ಅಸ್ವಸ್ಥವಾದೀತು. ಅಕ್ಕರೆ ಬಾಯಿ ಬಿಟ್ಟು ಹೇಳಲಾರದಂಥ ಪ್ರಾಪಂಚಿಕ ವ್ಯಥೆಗಳೂ ಪ್ರಾರಂಭವಾಗಬಹುದು. ದಾಯಾದ್ಯರ ವಿರೋಧ. ಉದ್ಯೋಗದಲ್ಲಿ ಪ್ರತಿಷ್ಠೆ ಬೇಕಾದಷ್ಟಿದ್ದರೂ ಲಾಭ ಮಾತ್ರ ಕೂಸ್ತ. ವಾದ ಸ್ಪರ್ಧೆಗಳಲ್ಲಿ ಅತ್ತೂ ಇಲ್ಲ ಇತ್ತೂ ಇಲ್ಲ. ಮಿತ್ರರಲ್ಲಿ ವಿರೋಧ ಭೆಟ್ಟಿ ಪತ್ರವ್ಯವಹಾರ ಅನುಕೂಲ. ಶತತಾರೆಯ ಕೊನೆಯ ೨ ಮತ್ತು ಪೂರ್ವಾಭಾದ್ರದ ಮೊದಲೆರಡು ಚರಣಗಳಿಗೆ ತೊಂದರೆ ವಿಶೇಷ ಇಲ್ಲ. ತಾ|| ೨೯, ೩೦, ೧, ೨ ಅನುಕೂಲ.

### ಮೀನ

ಹೆಂಡತಿ ಮಕ್ಕಳ ಆರೋಗ್ಯಕ್ಕೆ ಅಲ್ಪ ಸ್ವಲ್ಪ ಕುಂದು. ಮಕ್ಕಳು ನಿಮಗೆ ಬೇಸರ ಬರುವಂತೆ ವರ್ತಿಸುವರು. ಉದ್ಯೋಗದಲ್ಲಿ ಲಾಭವೂ ಕಡಿಮೆ. ಸರಳವಾಗಿ ಬರೆಯುವದು ಮಾತಾಡುವದರಿಂದ ತಪ್ಪುತಿಳುವಳಿಕೆಯುಂಟಾಗಬಹುದು. ವಾದ ಸ್ಪರ್ಧೆಗಳಲ್ಲಿ ಎರಡೂ ಕಡೆಗೆ ಸರಿಯಾದ ಹಾನಿ. ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಉತ್ತರಾಭಾದ್ರದ ಕೊನೆಯ ೨ ಮತ್ತು ರೇವತಿಯ ಮೊದಲ ೨ ಚರಣಗಳಿಗೆ ತೊಂದರೆ ಕಡಮೆ ತಾ|| ೨೯, ೩೦, ೧, ೨ ಅನುಕೂಲ.

Reg. No. B. 3148

LICENCE No 3
Licensed to Post without Prepayment

KARMAVEER 28-3-49



# ಪುಸ್ತಕ ಪರಿಚಯ

[[illegible] -ಸಂ ]

## ಇಸ್ಲಾಂ ಸಂಸ್ಕೃತಿ

ಮೂಲ ಲೇಖಕರು ಪ್ರೊ. ಮಹಮ್ಮದ್ ಅಬ್ಬಾಸ್ ಷೂಸ್ತ್ರಿ. ಅನುವಾದಕರು ರಾಜ ಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯನವರು. ಪ್ರಕಾಶಕರು ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ಪುಟ ೯೭೨, ಬೆಲೆ ೩ ರೂಪಾಯಿ.

ಪ್ರೊ. ಷೂಸ್ತ್ರಿಯವರು ಇಸ್ಲಾಂ ತತ್ವಗಳ ವಿಶಾಲವಾದ ಅಭ್ಯಾಸವನ್ನು ಮಾಡಿದವರು. ಅನುವಾದಕರಾದರೂ ಹಿಂದು, ಗ್ರೀಕ್ ಮತ್ತು ಇಸ್ಲಾಂ ತತ್ವಶಾಸ್ತ್ರಗಳಲ್ಲಿ ಕೈಯಾಡಿಸಿದವರೇ ಇದ್ದರು. ಅಂತ ಮೇಲೆ ಕೇಳುವುದೇನು? ಸಂಪಾದಕರಾದ ಪ್ರೊ. ಕೆ. ವಿ. ಪುಟ್ಟಪ್ಪನವರೆಮ್ಮವಂತೆ ಪ್ರಚಲಿತ ಇತಿಹಾಸ ಗ್ರಂಥಗಳಲ್ಲಿ ಹಿಂದು ಮುಸ್ಲಿಮರಿಗಾದ ಹೊಡೆದಾಟಗಳ ವಿವರಗಳಿಗೆ ಪ್ರಾಮುಖ್ಯ ಕೊಡಲಾಗಿದೆಯಲ್ಲದೆ ಆ ಸಮರಕಥೆಯನ್ನು ನೆಲೆಯುವ ಪ್ರಯತ್ನದಲ್ಲಿ ಎರಡೂ ಜನರು ಕೂಡಿ ಬಾಳಿ ಕಟ್ಟಿದ ಸಮರಸ ಕಥೆಯನ್ನು ಕೈಬಿಡಲಾಗಿದೆ ಎಂಬುದು ಸತ್ಯ. ಈ ಕೈಬಿಟ್ಟ ಅಂಶವನ್ನು ಬೆಳಕಿಗೆ ತರುವುದು ಸ್ವತಂತ್ರ ಹಿಂದುಸ್ಥಾನದ ಜನರ ಐಕ್ಯದ ದೃಷ್ಟಿಯಿಂದ (ಸಂಪಾದಕರ "ಐಕ್ಯತೆ" ಯ ದೃಷ್ಟಿಯಿಂದಲ್ಲ) ಬಹಳ ಅವಶ್ಯಕ. ಆದರೆ ಈ ಕೆಲಸವನ್ನು ಈ ಪುಸ್ತಕ ತಕ್ಕಮಟ್ಟಿಗೆ ಮಾಡ ಹೋಗಿರುವುದು ಅಭಿನಂದನೀಯ.

ಪುಸ್ತಕದಲ್ಲಿ ಇಸ್ಲಾಂ ಸಂಸ್ಥಾಪಕನಾದ ಮಹಮ್ಮದನ ಜೀವನ ಚರಿತ, ತತ್ವೋಪದೇಶ, ಇಸ್ಲಾಂ ಪ್ರಸಾರ, ಇಸ್ಲಾಮೀ ದೇಶ, ಮುಸ್ಲಿಮರಲ್ಲಿಯ ಒಳಜಗಳ, ಅವರ ರಾಜಕೀಯ ಇತಿಹಾಸ ಮುಂತಾದ ಅಂಶಗಳನ್ನು ೧೪ ಅಧ್ಯಾಯಗಳಲ್ಲಿ ವಿವರಿಸಲಾಗಿದೆ. ತತ್ವೋಪದೇಶದಲ್ಲಿ ಆತ್ಮಕ್ಕೆ ಅಮರತೆಯನ್ನು ಕೊಟ್ಟಿರುವುದು, ವಿಧಿ ಅಥವಾ ತಕದೀರಿನ ಅಧಿಕಾರ ಕಕ್ಷೆಯನ್ನು ವಿವರಿಸಿರುವುದು ಸಂಶಯ ಮತ್ತು ಅಸಾಮಂಜಸ್ಯಗಳಿಗೆ ಎಡೆಗೊಟ್ಟಿದೆ. ಪುನರುತ್ಥಾನದ ದಿನ ಅಲ್ಲಾ ತನ್ನ ನಿರ್ಣಾಯಕ ಪೀಠದಿಂದ ಆತ್ಮ ಘೋರ ಪಾಪ ಮಾಡಿದ್ದರೆ ಅದಕ್ಕೆ ಸಾಯೆಂದು ಶಾಪ ಕೊಡುವ ಉಲ್ಲೇಖ ಕುರಾನಿನಲ್ಲಿದೆ. ಅಂತ ಮೇಲೆ ಕುರಾನಿನಲ್ಲಿ ಆತ್ಮದ ಅಮರತೆಯ ಮಾತೆಲ್ಲಿ ಬಂತು? "ಭಗವಂತನ ಇಚ್ಛಾಶಕ್ತಿಗೊಳಪಟ್ಟು ಮನುಷ್ಯನು ತನ್ನ ಕರ್ಮಗಳಿಗೆ ತಾನೇ ಕಾರಣ" ಎಂಬ ಮಾತಿನ ಅರ್ಥ ಬರೆದವರಿಗೇ ಗೊತ್ತು! ‘‘ಮನುಷ್ಯನ ಇಚ್ಛಾಶಕ್ತಿಗೂ ಆ ಶಕ್ತಿಯನ್ನು ಕಾರ್ಯಕ್ಕೆ ಪ್ರೇರಿಸುವ ಕಾರಣಕ್ಕೂ ಇರುವ ಸಂಬಂಧ ಮನುಷ್ಯೇತರನಿಂದ ನಿಯಾಮಕವಾದದ್ದು. ಅದನ್ನು ಪ್ರಕೃತಿ ಅಥವಾ ವಿಶ್ವೇಚ್ಛೆಯೆಂದು ಕರೆಯಬಹುದು" ಎಂಬಲ್ಲಿ ದೇವರಿಚ್ಛೆ ಮನುಷ್ಯನ ಇಚ್ಛೆಗೆ ಪ್ರೇರಕವೆಂದಂತಾಯಿತು. ಇವೆರಡಕ್ಕೆ ಸಂಬಂಧ ಕಲ್ಪಿಸುವ ವಿಶ್ವೇಚ್ಛೆಯ ಕಲ್ಪನೆಗೆ ಅವಶ್ಯಕತೆ ಮತ್ತು ಆಧಾರಗಳು ಎಲ್ಲಿವೆ? ಇದಕ್ಕೆ ಕುರಾನಿನ ವಿವರಣೆಯೆನ್ನಬಹುದೇ? ದೇವರಿಗೆ ಸರ್ವಾಧಿಕಾರ ಕೊಟ್ಟುಕೊಂಡು ಮನುಷ್ಯ ತನ್ನ ಪಾಪ ಪುಣ್ಯಗಳ ಭೋಕ್ತನೆನ್ನುವುದು ಅರ್ಥವಿಲ್ಲದ ಮಾತು. ದೇವರ ಸರ್ವಾಧಿಕಾರಿತ್ವವನ್ನು ಮನ್ನಿಸಿದರೆ, "We are the unalterable, the Irresistible, Irresponsible, the Inevitable ನಾವು ಅಪರಿವರ್ತನೀಯರು, ಅಪ್ರತಿಘಟನೀಯರು, ಅಬಾಧ್ಯರು ಅಪಾಯರ್ಹರು" ಎನಿಸಿ ವಿಶ್ವದ ಸರ್ವಕರ್ತೃತ್ವದ ಆಶ್ರಯವೆನಿಸಿದ ದೇವರಿಂದಲ್ಲದೆ ಅನ್ಯರಿಂದ ಮತ್ತು ನಮ್ಮಿಂದ ನಾವು ಯಾವಕಾಲಕ್ಕೂ ಅನಿಯಂತ್ರಣೀಯರಾಗುವೆವು.

"ಕಾಲಕ್ಕೆ ತಕ್ಕಂತೆ ಇವು (ಮುಸ್ಲಿಂ ಸಂಘಗಳು) ಮುಸ್ಲಿಂ ಸಂಸ್ಕೃತಿಯನ್ನು, ಮತವನ್ನು, ಒಳ್ಳೆಯ ವಿಜ್ಞಾನ ಶಾಸ್ತ್ರಕ್ಕೂ ನೂತನ ಜ್ಞಾನಕ್ಕೂ ಸರಿಹೊಂದಿಸಿ ಜನರ ಒಲವನ್ನು ಸೆಳೆದುಕೊಳ್ಳುತ್ತವೆ" ಎಂಬ ಷೂಸ್ತ್ರಿ ವಾಕ್ಯದ ಕ್ರಿಯಾಪದ ವರ್ತಮಾನ ಕಾಲದಲ್ಲಿರುವುದು ತಪ್ಪು, ವಿಧ್ಯರ್ಥಕವಾಗಬೇಕಿತ್ತು. ‘‘ಇಸ್ಲಾಂ ಧರ್ಮದ ಪ್ರಭಾವ ಹಿಂದುಗಳ ಮೇಲೆ ಬೀಳದೆ ಇಲ್ಲ" ಎಂಬ ಇವರ ಮಾತಿಗೆ ಸಂಪಾದಕರ ಮುನ್ನುಡಿಯಲ್ಲಿಯ "ಭಾರತೀಯ ಸಂಸ್ಕೃತಿ ಇಸ್ಲಾಂ ಸಂಸ್ಕೃತಿಯ ಮಾನ್ಯಾಂಶವನ್ನು ಬಿಚ್ಚಿದೆಯಿಂದ ಕೊಂಡು ಮೈಗೂಡಿಸಿಕೊಂಡರೂ ಅದಕ್ಕೆ ಮಣಿಯದೆ, ಅದಕ್ಕೂ ಭಾರತೀಕರಣದ ಮುದ್ರೆಯೊತ್ತಿತು" ಎಂಬ ವಾಕ್ಯ ಪೂರಕವಾಗಿದೆ. ೨೮ ನೆಯ ಪುಟದಲ್ಲಿ ಅಖಂಡ ಹಿಂದುಸ್ಥಾನದ ಕನಸು ಕಂಡ ಗ್ರಂಥಕರ್ತರೊಡನೆ ಹಿಂದುಗಳು ಸಹಾನುಭೂತಿಯನ್ನು ವ್ಯಕ್ತಪಡಿಸದಿರರು. ಈ ಕನಸು ೩೩ ನೆಯ ಪುಟದಲ್ಲಿ ಪುನಃ ಉಕ್ತವಾದದ್ದನ್ನು ಕಂಡರೆ ಪುಸ್ತಕ ಬರೆದ ಮೇಲೆ ಗ್ರಂಥಕರ್ತರು ಅದನ್ನು ಪುನಃ ಪರಿಶೀಲನೆ ಮಾಡಲಿಲ್ಲವೆಂದಾಗುತ್ತದೆ.

ಇಸ್ಲಾಮಿನ ರಾಜಕೀಯ ಚರಿತ್ರೆಯ ವಿವರಣೆ ಸಂಕ್ಷೇಪವಾಗಿದ್ದರೂ ಸಾಕಷ್ಟು ವಿಷಯ ಮಂಡನದಿಂದ ಕೂಡಿ ಓದುಗರಿಗೆ ಬಹಳ ಉಪಯುಕ್ತ ಐತಿಹಾಸಿಕ ಜ್ಞಾನವನ್ನು ಕೊಡಬಲ್ಲುದಾಗಿದೆ. ಮುಸ್ಲಿಂ ಸಾಹಿತ್ಯಚರಿತ್ರೆಯಲ್ಲಿ ಕವಿ ಕಾವ್ಯಗಳ ಬಗ್ಗೆ ಮಹಮ್ಮದ ಹೇಳಿದನೆಂದು ಕೊಟ್ಟ ಮಾತು "ಕಾವ್ಯಾಲಾಪಾಂಶ್ಚ ವರ್ಜಯೇತ್" ಎಂಬ ಹಿಂದು ದಾರ್ಶನಿಕ ಮಡಿವಂತಿಕೆಗೆ ಹೊಂದುವುದು ಒಂದು ವಿಚಿತ್ರ ಸಂಯೋಗ. ಮುಸ್ಲಿಂ ಶಾಸ್ತ್ರ, ಕಲೆ, ವಿದ್ಯಾಭ್ಯಾಸಗಳ ಇತಿಹಾಸವಾದರೂ ರಾಜಕೀಯ ಚರಿತ್ರೆಯಂತೆ ಇತಿಹಾಸ ವಿದ್ಯಾರ್ಥಿಗೆ ವಿಷಯ ಸಂಗ್ರಹಕ್ಕೆ ಅನುಕೂಲವಾಗುವಂತೆ ಬರೆಯಲಾಗಿದೆಯಲ್ಲದೆ ಯಾವ ಒಂದು ಸಂಗತಿಯ ವಸ್ತು ಪರಿಚಯವೂ ಅದರಿಂದ ಆಗುವಂತಿಲ್ಲ. ಬಹುಶಃ ಪುಸ್ತಕದ ಮಿತಿಯೇ ಹೀಗೆ ಮಾಡಲು ಕಾರಣವಾಗಿರಬಹುದೆಂದು ತೋರುತ್ತದೆ.

"ಮುಸ್ಲಿಮರ ಇತರ ಕಲೆಗಳು" ಎಂಬ ಅಧ್ಯಾಯದಲ್ಲಿ ಹಿಂದು ಮತ್ತು ಮುಸ್ಲಿಂ ಪಂಡಿತರು ಪ್ರಾಪಂಚಿಕ ಶಾಸ್ತ್ರ ಸಾಹಿತ್ಯಾದಿಗಳ ಜ್ಞಾನ ದಾನ ಪ್ರತಿಗ್ರಹದಲ್ಲಿ ಹೇಗೆ ಪರಸ್ಪರ ಸಹಕರಿಸಿದರೆಂಬುದಕ್ಕೆ ಅನೇಕ ನಿದರ್ಶನಗಳನ್ನು ಕೊಟ್ಟಿರುವುದು ಮನನೀಯವಾಗಿದೆ. "ಮುಸ್ಲಿಂ ದರ್ಶನದ ಚರಿತೆ" ಎಂಬ ಅಧ್ಯಾಯದಲ್ಲಿ ಮುಸ್ಲಿಂ ವಿಚಾರಿಗಳ ಮೇಲೆ ಗ್ರೀಸಿನ ತತ್ವಜ್ಞಾನಿಗಳ ಪ್ರಭಾವ ಎಷ್ಟು ಆಳವಾಗಿ ಬಿದ್ದಿದೆಯೆಂಬುದನ್ನು ಸ್ಪಷ್ಟಪಡಿಸಿ, ಅಲ್ ಕಿಂದಿಯ ಪಂಚಪದಾರ್ಥ ದರ್ಶನ, ಫಾರಾಬಿಯ ಅನುಭಾವವಾದದ ಪ್ರೇಮಾದ್ವೈತ, ಅಳ್ವಾನ್ ಉಸ್ ಸಫ ಎಂಬ ದರ್ಶನಗಳ ಬೃಹತ್ಕೋಶ ಮುಂತಾದವುಗಳ ಅಲ್ಪ ಪರಿಚಯವನ್ನು ಮಾಡಿ ಕೊಡಲಾಗಿದೆ. ಇದರಿಂದ ಇಸ್ಲಾಮಿಗಳಲ್ಲೂ ವಿಚಾರವಂತರಿದ್ದಾರೆ ಎಂಬ ಅಂಶ ಓದುಗರಿಗೆ ತಿಳಿಯುವಂತಾಗಿದೆ. ಏಕೆಂದರೆ, ಮಾತೆತ್ತಿದರೆ ಕುರಾನಿನ ಹೆಸರು ಹೇಳುವ ಮುಸ್ಲಿಮರು ಆ ಅಪಕ್ವವೂ ಅವ್ಯವಸ್ಥಿತವೂ ಆದ ವೇದೋಪದ ಗ್ರಂಥದಲ್ಲಿದ್ದುದಷ್ಟನ್ನೇ ಅಂಧರಾಗಿ ನಂಬುವುದೇ ಹದಿತರರಿಗೆ ದೃಷ್ಟಿಗೋಚರವಾಗುತ್ತದೆ.

ಇಷ್ಟಲ್ಲದೆ ಸೂಫಿತತ್ವ, ಮುಸ್ಲಿಮರ ನ್ಯಾಯ, ನೀತಿ ಮತ್ತು ಸಮಾಜ ರಚನೆ ಮುಂತಾದವುಗಳ ಬಗೆಗೂ ಸಾಕಷ್ಟು ಬೆಳಕನ್ನು ಬೀರಲಾಗಿದೆ. ಕನ್ನಡದಲ್ಲಿ ಈ ವರೆಗೆ ಇಸ್ಲಾಮಿನ ಬಗ್ಗೆ ಇಷ್ಟು ವಿಷಯ ಜ್ಞಾನ ಮಾಡಿ ಕೊಡಬಲ್ಲ ಗ್ರಂಥವಿದ್ದಿಲ್ಲ. ಒಂದೊಂದು ವಿಷಯವನ್ನು ಹೀಗೆ ಸರ್ವಗ್ರಸವಾಗಿ ತೆಗೆದುಕೊಂಡು ಸಮರ್ಥ ಲೇಖಕರಿಂದ ಬರೆಸುವ ಮೈಸೂರು ವಿಶ್ವವಿದ್ಯಾನಿಲಯದ ಕಾರ್ಯ ಎಲ್ಲ ವಿದ್ಯಾಲಯಗಳಿಗೂ ಒಂದು ಉತ್ತಮ ಮಾದರಿಯದಾಗಿದೆ. ಈ ಕಾರ್ಯದಲ್ಲಿ ಮುಖ್ಯ ಪಾತ್ರ ವಹಿಸಿದ ಲೇಖಕ, ಅನುವಾದಕ ಮತ್ತು ಸಂಪಾದಕರಿಗೆ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸದಿರಲಾರೆವು.

## ಬಸವೇಶ್ವರ

ಬರೆದವರು: ಅ. ನ. ಕೃಷ್ಣರಾಯರು. ಪ್ರಕಾಶಕರು: ಆರ್. ಎನ್. ಹಬ್ಬು ಉಷಾ ಪ್ರೆಸ್, ಮೈಸೂರು ನಗರ. ಪುಟಗಳು ೧೪೪. ಬೆಲೆ ೩ ರೂಪಾಯಿ.

ಇದು ಬಸವಣ್ಣನವರ ಚರಿತ್ರೆಯನ್ನು ನಾಟಕ ರೂಪದಲ್ಲಿ ಲೇಖಕರು ಬರೆದದ್ದಾಗಿದೆ. ಬಸವಣ್ಣನವರ ಪಾತ್ರರಚನೆ ಅತ್ಯಂತ ಉತ್ತಮವಾಗಿದೆ ಅವರಿಗೆ. ಶಿವನಲ್ಲಿರುವ ನಿಶ್ಚಲವಾದ ಭಕ್ತಿ, ದಯೆ, ಸಹನೆ, ತ್ಯಾಗ, ಇವೆಲ್ಲವೂ ಗಮನಾರ್ಹವಾಗಿವೆ. ಎಲ್ಲರಿಗೂ ಒಳ್ಳೆಯದನ್ನೇ ಮಾಡುವ ಮಾರ್ಗದರ್ಶಿಯಾದ ಬಸವಣ್ಣನವರ ಪಾತ್ರ ರಚನೆಯು ಕೊಂಡಾಡುವಂತಿದೆ. ಗಾಂಧೀಜಿಯವರಿಗೂ ಬಸವಣ್ಣನವರಿಗೂ ಹೋಲಿಸಿದರೆ ಹೆಚ್ಚಾರು ಕಡಿಮೆ ಯಾರು ಎಂಬುದು ಹೇಳಬಹುದಾಗಿಲ್ಲ. ಇಬ್ಬರೂ ಸಮ ತೂಕವುಳ್ಳವರು, ಪ್ರೇಮ ಮೂರ್ತಿಗಳು, ಹೊಲೆಯರನ್ನು ಮುಂದೆ ತರಲು ಪ್ರಯತ್ನಿಸಿದವರು, ಎಂಬುದು ಈ "ಬಸವೇಶ್ವರ" ವನ್ನೋದಿದವರಿಗೆ ತಿಳಿಯದಿರಲಾರದು. ಗುರುಕುಲದಿಂದ ಬಸವಣ್ಣನವರು ಹೋಗುವಾಗ ಅವರ ಗುರುಗಳಾದ ಜಾತವೇದ ಸ್ವಾಮಿಗಳು ಹೇಳಿದ, "ನಿನ್ನ ಬಾಳು, ಭಾವನೆ, ಸೇವೆ, ತ್ಯಾಗ, ಇವೇ ಪೂಜೆ, ಸ್ನಾನ, ಆರೋಗಣೆ. ನಿನ್ನ ಜೀವನವೇ ಒಂದು ನಿರಂತರ ಪ್ರಾರ್ಥನೆಯಾಗಲಿ" ಈ ಮಾತುಗಳು ಎಲ್ಲ ವಿದ್ಯಾರ್ಥಿವೃಂದಕ್ಕೂ ಉಪದೇಶ ಮಾಡಿದಂತಿವೆ. ಘಟಿಕೋತ್ಸವ ಸಮಾರಂಭದಲ್ಲಿ ಮಂತ್ರಿ ಬಲದೇವನು ಅಧ್ಯಕ್ಷಪೀಠದಿಂದ ಸಮಸ್ತ ಜನರಿಗೂ ವಿದ್ಯಾರ್ಥಿಗಳಿಗೂ "ಇಂದು ನಾಳೆ ನೀವು ನಿಮ್ಮ ಗುರಿಯನ್ನರಸುತ್ತ ಇಲ್ಲಿಂದ ತೆರಳುವಿರಿ. ಆ ಗುರಿ ನಿರ್ದಿಷ್ಟವಾಗಿರಲಿ, ನಿಮ್ಮ ಸಕಲ ಚೇತನವೂ ನಾಡಸೇವೆಗೆ ಮೀಸಲಾಗಲಿ. ನಮ್ಮ ನಾಡು ಅನೈಕಮತ್ಯ, ಅಜ್ಞಾನ, ದಾಸ್ಯಂಧತೆಗಳಿಂದ ತುಂಬಿದೆ. ಬಲ್ಲಿದರು ಬಡವರನ್ನು ಸುಲಿಯುತ್ತಿದ್ದಾರೆ. ದೀನ ದರಿದ್ರರ ತಂಡ ದಿನೇ ದಿನೇ ಹೆಚ್ಚುತ್ತಿದೆ. ಮಾನವ ದಾನವನಾಗುತಿದ್ದಾನೆ. ಅವ್ಯಾಹತವಾಗಿ ಬೆಳೆಯುತ್ತಿರುವ ಈ ವಿಷವೃಕ್ಷ ನಿರ್ಮೂಲವಾಗಬೇಕಾದರೆ ತಿಳಿದಿರುವವರು ಜನತೆಯನ್ನು ಜಾಗ್ರತಗೊಳಿಸಬೇಕು. ಜಗತ್ತು ಪರಸ್ಪರ ಕೋಪತಾಪಕ್ಕೆ ಮನಸ್ಸು ಕೊಡದೆ ಒಂದು ಕುಟುಂಬದಂತೆ ಬಾಳಬಹುದೆಂಬುದನ್ನು ನಿಮ್ಮ ಅಮೃತ ವಾಕ್ಯ ಮತ್ತು ನಿಸ್ಸೀಮ ಸೇವೆಯಿಂದ ತೋರಿಸಿಕೊಡಬೇಕು" ಎಂದು ಹೇಳಿದ ಮಾತುಗಳು ಮನನೀಯವಾಗಿವೆ. ಇಂದಿಗೂ ನಮ್ಮ ದೇಶದಲ್ಲಿ ಅಜ್ಞಾನ, ಅನೈಕಮತ್ಯ, ಬಡತನ, ದುಡ್ಡಿರುವವರು ದರಿದ್ರವನ್ನು ಸುಲಿಯುವುದು ಇವೆಲ್ಲವೂ ಮೊದಲಿನಂತೆಯೇ ನಡೆಯುತ್ತಿವೆ. ವಿದ್ಯಾಭ್ಯಾಸವನ್ನು ಮುಗಿಸಿ ಹೊರ ಜಗತ್ತಿಗೆ ಕಾಲಿಡುವವರು ಮಂತ್ರಿ ಬಲದೇವ ಹೇಳಿರುವ ಮಾತುಗಳನ್ನು ನೆನಪಿಟ್ಟು ಆಚರಿಸಿದರೆ ಜಗತ್ತಿನ ಕಲ್ಯಾಣವಾಗುವುದೆಂಬುದರಲ್ಲಿ ಸಂದೇಹವಿಲ್ಲ. ಬಸವಣ್ಣನು ಮದುವೆಯಾಗುವ ಮೊದಲು ಗಂಗಾಂಬಿಕೆಯನ್ನು ಕಂಡು ‘‘ನಾನು ಬಡವ. ಆಶ್ರಮವಾಸಿ-ನೀನು ಮಹಾಮಂತ್ರಿಯ ಮಗಳು. ಕಷ್ಟನಷ್ಟಗಳನ್ನು ಅರಿಯದವಳು. ನನ್ನನ್ನು ಮದುವೆಯಾದರೆ ಅರೆಹೊಟ್ಟೆ ಊಟ, ಮುರುಕುಗುಡಿಸಲಿನ ವಾಸ. ನನ್ನ ಈ ಬಾಳು ನಿನಗೆ ಸಾಧ್ಯವೊ" ಎಂದು ಕೇಳಿದಾಗ ಅವಳು, "ಪಾರ್ವತಿ ವರಿಸಿದುದು ಸ್ಮಶಾನವಾಸಿ ಶಿವನನ್ನಲ್ಲವೆ ಎಂದು ಕೊಟ್ಟ ಉತ್ತರ ಅಸಾಧಾರಣವಾದದ್ದು. ಚಾಲುಕ್ಯರಾಜ ಬಿಜ್ಜಳನ ಪಾತ್ರವೂ ಉಳಿದ ಪಾತ್ರಗಳೂ ಸಂದರ್ಭೋಚಿತವಾಗಿವೆ.

## ಸ್ವೀಕಾರ

### ವಿರೋಧಿ ಸಂವತ್ಸರದ ಶಾಸ್ತ್ರಸಿದ್ಧ ಶ್ರೀ ಕೃಷ್ಣ ಪಂಚಾಂಗ

ಕರಿಂಕ ಕೃಷ್ಣ ಬಾಣ್ಣಿಂತಾಯ ಇವರಿಂದ ಗಣಿಸಲ್ಪಟ್ಟು ಶ್ರೀ ಐವರ್ಣಂಜೆ ಶಂಕರ ಜೋಯಿಸರಿಂದ ಪರಿಶೋಧಿಸಲ್ಪಟ್ಟಿದೆ. ಪ್ರಕಾಶಕರು: ಕರಿಂಕ ಕೃಷ್ಣ ಬಣ್ಣಿಂತಾಯರು, ವಿಟ್ಲ, ದ. ಕ. ಬೆಲೆ ೦-೭-೦

ಸೂರ್ಯಸಿದ್ಧಾಂತ, ವಾಕ್ಯಕರಣ ಮೊದಲಾದ ಪದ್ಧತಿಗಳಿಂದ ಗುಣಿಸಿದ ಗ್ರಹಗತಿ ಇಂದಿನ ದಿನಮಾನಕ್ಕೆ ಸರಿಬಾರದಿರುವದರಿಂದ ಕೇತಕೀ ದೃಗ್ಗಣಿತದಿಂದ ಗುಣಿಸಿದ ತಿಥಿ ನಕ್ಷತ್ರಾದಿಗಳನ್ನೇ ಆಚರಿಸಬೇಕೆಂಬದನ್ನು ಪ್ರಚುರಗೊಳಿಸುವ ಉದ್ದೇಶದಿಂದ ಪ್ರಕಟಿಸಿದ ಈ ಪಂಚಾಂಗದ ಉದ್ದೇಶವನ್ನು ಧರ್ಮಾಧಿಕಾರಿಗಳು ಅವಶ್ಯ ವಿಚಾರಿಸಬೇಕಾಗಿದೆ.

### ವಿರೋಧಿ ಸಂವತ್ಸರದ ಪಂಚಾಂಗ

ಪಂ. ಎಲ್ಲೂರ ಲಕ್ಷ್ಮೀನಾರಾಯಣ ರಾಯರಿಂದ ಗುಣಿಸಲ್ಪಟ್ಟು ಮೂಲ್ಕಿಯ ಸುಜ್ಞಾನಾಮೃತ ಕಾರ್ಯಾಲಯದಿಂದ ಪ್ರಕಟಿಸಲ್ಪಟ್ಟಿದೆ. ಸ್ವಾಕಿಸ್ಟರು, ಎಲ್. ಎನ್. ಶರ್ಮ, ಕೋರ್ಟ ರೋಡು, ಮಂಗಳೂರು. ಬೆಲೆ: ?



ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಮೊಹರೆಯವರು ಮುದ್ರಿಸಿ ಪ್ರಕಟಿಸಿದರು.